“ರಾಜೀವ್ ಗಾಂಧಿ ದೇಶವನ್ನಾಳುವ ಯೋಗ್ಯತೆ ನಿನಗೆ ಇಲ್ಲ”

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ ೧೧ ಸಂಚಿಕೆ ೨೮-೨೯ ಜುಲೈ ೩೦, ೧೯೮೯. ರೂ. ೧.೨೫

ವಿರೋಧಿ ಲೋಕಸಭಾ ಸದಸ್ಯರ ರಾಜೀನಾಮೆ

ರಾಜೀವ್‌ಗಾಂಧಿಯವರ ದುರಾಚಾರ ಮೆಟ್ಟಿಲು ಮೆಟ್ಟಿಲಾಗಿ ಏರಿ ಇಂದು ದೇಶದ ಜನತೆ ತಾವೇ ಆರಿಸಿದ ಲೋಕ ಸಭೆಯನ್ನೇ ನಿರಾಕರಿಸುವ, ಒಕ್ಕೊರಲಿನಿಂದ “ರಾಜೀವ್ ಗಾಂಧಿ, ನಿನಗೆ ದೇಶವನ್ನಾಳುವ ಯೋಗ್ಯತೆ ಇಲ್ಲ, ಈಗಿಂದೀಗಲೇ ಕೆಳಗಿಳಿ” ಎಂದು ಘರ್ಜಿಸುವ ಹಂತವನ್ನು ತಲುಪಿದೆ. ಬೋಫೋರ್ಸ್ ಅನಾಚಾರವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಎಂತಹ ಕೀಳು ಮಟ್ಟಕ್ಕೂ, ಸಂವಿಧಾನ ರಕ್ಷಿತ ಲೆಕ್ಕ ಪತ್ರಗಳ ಮಹಾನಿಯಂತ್ರಕ ಮತ್ತು ಪರಿಶೋಧಕರನ್ನು ತೆಗಳುವ, ಅವಾಚ್ಯವಾಗಿ ದೂಷಿಸುವ ಮಟ್ಟಕ್ಕೆ ಹೋಗಿದ್ದಾರೆ ರಾಜೀವ್ ಗಾಂಧಿ. ಅಧ್ಯಕ್ಷ ಪದವಿಯನ್ನು ಲೋಕಸಭೆಯ ಎಲ್ಲಾ ಸಮಿತಿಗಳನ್ನು, ಲೋಕ ಸಭೆಯನ್ನು ಒಂದೊಂದಾಗಿ ಹೀಗೆಳೆಯುತ್ತಾ, ಅವರ ಹಕ್ಕುಗಳನ್ನೆಲ್ಲಾ ತುಳಿಯುತ್ತಾ ಬಂದ ರಾಜೀವ್ ಗಾಂಧಿ ಕೊನೆಗೆ ಇಡೀ ಲೋಕ ಸಭೆಯನ್ನೇ, ಲೋಕ ಸಭೆಯಲ್ಲಿ ಕಾಂಗ್ರೆ ಪಕ್ಷಕ್ಕಿರುವ ಬಹುಮತವನ್ನೇ ತನ್ನ ರಕ್ಷಣಾ ಕವಚವನ್ನಾಗಿ ಮಾಡಿಕೊಳ್ಳುವ ಪ್ರಯತ್ನಕ್ಕೆ ಕೊಡಲಿ ಪೆಟ್ಟು ನೀಡಲು ವಿರೋಧ ಪಕ್ಷಗಳು ನಿರ್ಧರಿಸಿದ್ದಾರೆ. ಮಿಂಚಿನ ವೇಗದಲ್ಲಿ ತೆಗೆದುಕೊಂಡ ಈ ನಿರ್ಧಾರ ಭಾರತದ ಜನತೆಯ

ಆಶೋತ್ತರಗಳನ್ನು ಪ್ರತಿಬಿಂಬಿಸಿದೆ.


ಲೋಕಸಭೆಯಲ್ಲಿ ಸಿ.ಎ.ಜಿ.ವರದಿ ಮಂಡನೆಯೊದ ದಿನದಿಂದ ದಿನಕ್ಕೆ ತೀವ್ರವಾದ ಬಿಕ್ಕಟ್ಟು ಕೊನೆಗೆ ಲೋಕಸಭೆಯಲ್ಲಿನ ಕಾಂಗ್ರೆ ವಿರೋಧಿ ಪಕ್ಷಗಳ ಎಲ್ಲಾ ಸದಸ್ಯರು ರಾಜೀನಾಮೆ ನೀಡುವಲ್ಲಿ ಪರ್ಯಾವಸಾನವಾಯಿತು.

84ರ ಲೋಕಸಭೆ ಚುನಾವಣೆಗಳು ನಡೆದ ವಿಶಿಷ್ಟ ಪರಿಸ್ಥಿತಿಯಲ್ಲಿ ಭಾರತದ ಜನತೆ ತಮ್ಮ ದೈನಂದಿನ ಜೀವನದ ಸಂಕಷ್ಟ, ನೋವುಗಳನ್ನು ಮರೆತು, ಅಪೂರ್ವ ರಾಜಕೀಯ ಪ್ರಜ್ಞೆಯನ್ನು ಪ್ರದರ್ಶಿಸಿ ಭಾರತದ ಐಕ್ಯತೆಯ ರಕ್ಷಣೆ ತಮ್ಮ ಧ್ಯೇಯವೆಂದು ಘೋಷಿಸಿದ ರಾಜೀವ್‌ಗಾಂಧಿಯವರ ಮಾತನ್ನು ನಂಬಿ ಮತ ನೀಡಿದರು. ತಿಂಗಳು ಗಳುರುಳಿದಂತೆ ಇದು ಐಕ್ಯತೆಯ ಸರ್ಕಾರವಲ್ಲ, ಭಾರತದ ಅನೈಕ್ಯತೆಯ ಹರಿಕಾರ ಎಂಬಂತಾಯಿತು. ಜನತೆಯ ಸಮಸ್ಯೆಗಳು ಹಿಂದೆಂದೂ ಇಲ್ಲದಷ್ಟು ವೇಗವಾಗಿ ತೀವ್ರವಾಗ ತೊಡಗಿದುವು. ಸಮಾಜವಾದಿ ದೇಶಗಳಲ್ಲಿರುವಂತೆ ಚುನಾಯಿತ ಎಂ.ಪಿ.ಗಳನ್ನು ಹಿಂದಕ್ಕೆ ಕರೆಸಿಕೊಳ್ಳುವಂತಿದ್ದರೆ ಬಹಳ ಹಿಂದೆಯೇ ಕಾಂಗ್ರೆ ಬಹುಮತವನ್ನು ಕಳೆದುಕೊಂಡು ರಾಜೀನಾಮೆ ಕೊಡ ಬೇಕಾಗುತ್ತಿತ್ತು. ಜನತೆಯ ಮಧ್ಯೆ ಬಹಳ ಹಿಂದೆಯೇ ಕಳೆದುಕೊಂಡ ಬಹುಮತವನ್ನು ಲೋಕಸಭೆಯಲ್ಲಿ ತನ್ನ ಸ್ಥಾನದ ಬಲದಾನ ಮೂಲಕ ಇಡೀ ದೇಶದ ಮೇಲೆ ಹೇರಬೇಕೆಂದು ಕಾಂಗ್ರೆ ನಡೆಸುತ್ತಿರುವ ಪ್ರಯತ್ನಕ್ಕೆ ಕೊನೆ ಹಾಡಿದಂತಾಗಿದೆ.

ಭಾರತ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಅಪೂರ್ವವಾದ ವಿದ್ಯಮಾನ ಲೋಕಸಭೆಯ ಅವಧಿ ಮುಗಿಯುವ ಮುನ್ನವೇ ಲೋಕ ಸಭೆಯನ್ನು ನಿರಾಕರಿಸಿ ವಿರೋಧ ಪಕ್ಷಗಳೆಲ್ಲಾ ಒಗ್ಗಟ್ಟಾಗಿ ರಾಜೀನಾಮೆ ನೀಡಿದ ಅಪೂರ್ವ ಘಟನೆ: ಜನತೆಯ ಮನದಾಳದ ಬಯಕೆಯನ್ನು ವಿರೋಧ ಪಕ್ಷಗಳು ಪ್ರತಿಬಿಂಬಿಸಿದ್ದಾರೆ. ಮಿಂಚಿನ ವೇಗದಿಂದ ನಡೆದ ವಿರೋಧ ಪಕ್ಷಗಳು ತಮ್ಮತ್ತ ಬರುವುದನ್ನೇ ನೇತೃತ್ವ ನೀಡುವುದನ್ನೇ ಎದುರುನೋಡುತ್ತಿರುವ ಜನತೆಯಲ್ಲಿ ಈಬೆಳವಣಿಗೆಗಳು ಜನತೆಯಲ್ಲಿ ಆಶಾ ಭಾವನೆಯನ್ನು ಎಚ್ಚರಗೊಳಿಸಿದೆ.

ಕಾಮ್ರೇಡ್ ಮುಝಫ್ಫರ್ ಅಹ್ಮದ್

“ಒಂದು ಮುದ್ರಣಾಲಯ, ಪತ್ರಿಕೆಗಳು, ಪುಸ್ತಕಗಳಿಲ್ಲದೆ ನಾನು ಬದುಕಲಾರೆ”



ರಾಜಕೀಯ ಮತ್ತು ಸೈದ್ಧಾಂತಿಕ ಐಕ್ಯತೆ ಹೊಂದಿದ್ದ ಕಾರ್ಮಿಕ ವರ್ಗದ ಒಂದು ಪಕ್ಷ ಸ್ಥಾಪಿಸುವುದು ಅವರ ಧ್ಯೇಯವಾಗಿತ್ತು. ಮಾರ್ಕ್ಸ್‌ವಾದಿ ಸಾಹಿತ್ಯ ಮತ್ತು ಪಕ್ಷದ ಪತ್ರಿಕೆಗಳ ಪ್ರಕಟಣೆಯ ಮೇಲೆ, ಪಕ್ಷದ ತರಗತಿಗಳನ್ನು, ಶಾಲೆಗಳನ್ನು ನಡೆಸುವುದರ ಮೇಲೆ ಅವರು ವಿಶೇಷ ಒತ್ತು ನೀಡಿದರು.

ಭಾರತೀಯ ಜನಸಮೂಹಗಳ ಈ ಮಹಾನ್ ನೇತಾರನ ಜನ್ಮ ಶತಾಬ್ದಿಯ ವಿಶೇಷ ನೆನಪಿನಲ್ಲಿ ವಿಚಾರ ಸಂಕಿರಣಗಳನ್ನು, ಪಾರ್ಟಿ ತರಗತಿಗಳನ್ನು ನಡೆಸಬೇಕೆಂದು, ಮಾರ್ಕ್ಸ್‌ವಾದಿ ಸಾಹಿತ್ಯ ಪ್ರಕಟಿಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಮಹಾಧಿವೇಶನ ಕರೆ ನೀಡುತ್ತದೆ.

–ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನದ ಒಂದು ನಿರ್ಣಯದಿಂದ.

ಕಾಮ್ರೇಡ್ ಮುಝಫ್ಫರ್ ಕುರಿತು ಬಿ.ಟಿ.ಆರ್.ಲೇಖನಕ್ಕೆ ಪುಟ 4-5ರಲ್ಲಿ.

ಆಗಸ್ಟ್ 30, ಭಾರತ್ ಬಂದ್

ಬಂಗಾಲದ ಕಾರ್ಮಿಕ ವರ್ಗ, ಕೇರಳದ ಎಡರಂಗ ಈಗಾಗಲೇ ಚರ್ಚಿಸಿ ಆಗಸ್ಟ್ 30ರಂದು ಬಂದ್ ನಡೆಸಲು ನಿರ್ಧರಿಸಿದ ಹಿನ್ನೆಲೆಯಲ್ಲಿ ಪಕ್ಷದ ಕೇಂದ್ರ ಸಮಿತಿ ಇತ್ತೀಚಿಗೆ ನಡೆದ ಸಭೆಯಲ್ಲಿ ಆಗಸ್ಟ್ 24ರಿಂದ 30ರವರೆಗೆ 'ರಾಜೀವ್ ಹಟಾವ್' ರಾಜಕೀಯ ಚಳುವಳಿ ನಡೆಸಲು ನಿರ್ಧರಿಸಿತ್ತು.

ಈಗ ಅದರ ಹಿಂದೆಯೇ ಲೋಕಸಭೆಗೆ ಎಲ್ಲಾ ವಿರೋಧ ಪಕ್ಷಗಳ ಸದಸ್ಯರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ, 'ರಾಷ್ಟ್ರೀಯ ರಂಗ' (ನ್ಯಾಷನಲ್‌ಫ್ರಂಟ್) ಆಗಸ್ಟ್ 9ಅನ್ನು 'ಭಾರತ ರಕ್ಷಿಸಿ' ದಿನವಾಗಿ ಹಾಗೂ ಆಗಸ್ಟ್ 30ರಂದು ಭಾರತ ಬಂದ್ ಆಚರಿಸಲು ಕರೆ ನೀಡಿದೆ. ಇದನ್ನು ಬೆಂಬಲಿಸಿದ ಎಡರಂಗ ಬೋಫೋರ್ಸ್‌ನ ಅನಾಚಾರದ ಜೊತೆಗೆ ಭೂಸುಧಾರಣೆ ಕುರಿತಾದ, ಭಾರತದ ಐಕ್ಯತೆ, ಬೆಲೆಏರಿಕೆ ಮುಂತಾದ ಪ್ರಶ್ನೆಗಳನ್ನು ಎತ್ತಿ ಪ್ರಚಾರ ಪ್ರತಿಭಟನೆ ನಡೆಸಲು, ಭಾರತ ಬಂದ್‌ನ ಬೇಡಿಕೆಗಳ ಭಾಗವಾಗಿಸಲು ನಿರ್ಧರಿಸಿದೆ.

ಹನ್ನೆರಡು ಬೇಡಿಕೆಗಳ ಮೇಲೆ ಒಂದು ದಿನದ ರಾಷ್ಟ್ರವ್ಯಾಪೀ ಮುಷ್ಕರಕ್ಕೂ ಸಿದ್ಧತೆ ನಡೆಸಬೇಕೆಂದು ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಈ ಸಭೆ ಕರೆ ನೀಡಿದೆ. ಮುಷ್ಕರದ ದಿನವನ್ನು ಆಗಸ್ಟ್ 16ರ ಸಮಾವೇಶದಲ್ಲಿ ನಿರ್ಧರಿಸಲಾಗುವುದು.

ಸಿ.ಐ.ಟಿ.ಯು ಕೇಂದ್ರದ ಪರವಾಗಿ ಕಾರ್ಯದರ್ಶಿಗಳಾದ ಕಾಂ.ಎಂ.ಕೆ. ಫಂಡೆ ಮತ್ತು ಕಾಂ.ಪಿ.ಕೆ. ಗಂಗೂಲಿಯವರು ನಡೆಸಿದ ಈ ಸಭೆಯಲ್ಲಿ ವಿವಿಧ ಸಿ.ಐ.ಟಿ.ಯು ರಾಜ್ಯಸಮಿತಿಗಳ 21 ಮುಖಂಡರು ಭಾಗವಹಿಸಿದ್ದರು. ಕರ್ನಾಟಕದಿಂದ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಹಾಗೂ ರಾಜ್ಯ ಸಮಿತಿ ಸದಸ್ಯ ಕಾಂ. ಇ.ಕೆ.ಎನ್. ರಾಜನ್ ಭಾಗವಹಿಸಿದ್ದರು.

ಭಾರತದಲ್ಲಿ ಪ್ರಸ್ತುತ ಅಸಂಘಟಿತ ಕಾರ್ಮಿಕರ ಕಷ್ಟವೇತನದ ಸ್ಥಿತಿ-ಗತಿಯನ್ನು ಪರಾಮರ್ಶಿಸಿದ ಸಭೆ ಸರಕಾರ ದೊಡ್ಡ-ದೊಡ್ಡ ಮಾತುಗಳನ್ನಾಡಿ, ಭರವಸೆಗಳನ್ನು ನೀಡಿದ್ದರೂ ಈ ಕಾರ್ಮಿಕರ ಬದುಕಿನ ಕ್ರಮಕ್ಕೆ ನಿಗದಿ ಮಾಡಿರುವ ಕನಿಷ್ಠ ಕೂಲಿ ಬದುಕಿನ ರೇಖೆಗಿಂತಲೂ ತುಂಬಾ ಕೆಳಗಿದೆ ಎಂದು ಗಮನಿಸಿತು. ಕೃಷಿ ಕೂಲಿಗಾರರ ಕೂಲಿ ಇನ್ನೂ ಕಡಿಮೆ.

ಸಿ.ಐ.ಟಿ.ಯು ನಿರ್ಧಾರ
ದೇಶವ್ಯಾಪೀ ಕನಿಷ್ಠ ಕೂಲಿ ಆಂದೋಲನ

ಜುಲೈ 3 ರಂದು ನವದೆಹಲಿಯಲ್ಲಿ ಸಿ.ಐ.ಟಿ.ಯು ಕೇಂದ್ರದ ಆಶ್ರಯದಲ್ಲಿ ನಡೆದ ಅಖಿಲಭಾರತ ಸಭೆ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿಯ ಪ್ರಶ್ನೆಯ ಮೇಲೆ ದೇಶವ್ಯಾಪೀ ಹೋರಾಟ ಆರಂಭಿಸಲು ನಿರ್ಧರಿಸಿದೆ. ಹನ್ನೆರಡು ಮುಖ್ಯಬೇಡಿಕೆಗಳ ಮೇಲೆ ಒಂದು ಕಾರ್ಯಾಚರಣೆಯ ಯೋಜನೆಯನ್ನು ಕೂಡಾ ಅದು ರೂಪಿಸಿದೆ. ಇದರ ಮೊದಲ ಹಂತವಾಗಿ ಆಗಸ್ಟ್ 2 ರಂದು ದೇಶಾದ್ಯಂತ “ರಾಷ್ಟ್ರೀಯ ಕನಿಷ್ಠ ಕೂಲಿ ದಿನ” ಆಚರಿಸಲಾಗುವುದು. ನಂತರ ಆಗಸ್ಟ್‌ನ ಮೊದಲೆರಡು ವಾರಗಳಲ್ಲಿ ಅಸಂಘಟಿತ ಕಾರ್ಮಿಕರ ರಾಜ್ಯವಾರು/ಪ್ರದೇಶವಾರು ಸಮಾವೇಶಗಳು ನಡೆಯಲಿವೆ.

“ಗರೀಬೀ ಹಟಾವೋ” ಕೇವಲ ಮಾತಿನ ಬುರುಡೆಯಾಗಿದೆ.

15 ನೇ ತ್ರಿಪಕ್ಷೀಯ ಸಮ್ಮೇಳನದಲ್ಲಿ ಭಾರತ ಸರಕಾರ ಕೂಡಾ ಅವಶ್ಯಕತೆ-ಆಧಾರಿತ ಕನಿಷ್ಠ ಕೂಲಿ ನಿರ್ಧಾರ ಮಾಡುವ ಸೂತ್ರವನ್ನು ಒಪ್ಪಿಕೊಂಡಿದ್ದರೂ ಅದನ್ನು ಜಾರಿಮಾಡಲು ಅದು ನಿರಾಕರಿಸಿದೆ. ಅಷ್ಟೇ ಅಲ್ಲ, ಬೇರೆ ಯಾವುದೇ ಸೂತ್ರವನ್ನು ನಿಗದಿಪಡಿಸಬೇಕೆಂಬ ಬೇಡಿಕೆಯನ್ನು ಕೂಡಾ ಅದು ನಿರಾಕರಿಸಿದೆ. ಇದರಿಂದಾಗಿ ಕನಿಷ್ಠ ಕೂಲಿ ಹಾಗೂ ತುಟ್ಟಿ ಭತ್ಯೆಯನ್ನು ಮನಬಂದಂತೆ ನಿಗದಿಪಡಿಸ

ಪುಟ [illegible] ಕ್ಕೆ

ಏಳು ಎಡಪಂಥೀಯ ರೈತ ಕೃಷಿ ಕಾರ್ಮಿಕ ಸಂಘಟನೆಗಳು ಸೇರಿ ಭಾರತದ ಸಾಮಾಜಿಕ ಬದಲಾವಣೆಯ ಮುಖ್ಯ ಪ್ರಶ್ನೆಯಾದ ಭೂಮಿಯ ಬಗ್ಗೆ ಒಂದು ಒಮ್ಮತದ ನಿಲುವಿಗೆ ಬಂದು ದೇಶಾದ್ಯಂತ ದೀರ್ಘ ಕಾಲದ ಹೋರಾಟಕ್ಕೆ ಹಾಗೂ ನೇರ ಕ್ರಮಕ್ಕೆ ನೀಡಿರುವ ಕರೆ ರೈತ ಚಳುವಳಿಯ ಬೆಳವಣಿಗೆಯಲ್ಲಿನ ಒಂದು ನಿರ್ಣಾಯಕ ಘಟ್ಟ. ಈ ಕರೆ ತೆಲಂಗಾಣ ಹೋರಾಟದ ಕೇಂದ್ರವಾದ ಖಮ್ಮಂನಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ 26ನೇ ಸಮ್ಮೇಳನದಲ್ಲಿ ಅನುರಣಗೊಂಡಿದೆ. ದೇಶದೆಲ್ಲೆಡೆಯಲ್ಲಿ ಪ್ರತಿಧ್ವನಿಗೊಳ್ಳುತ್ತಾ ಸಾಗಿದೆ.

ಈ ಹಿನ್ನಲೆಯಲ್ಲಿ ಕರ್ನಾಟಕದ ಭೂಸುಧಾರಣೆಯ ವೈಫಲ್ಯದ ಬಗ್ಗೆ ವಿಶ್ಲೇಷಣೆಯಿದು.

ಕರ್ನಾಟಕದಲ್ಲಿ ಭೂಸುಧಾರಣೆ

– ಜಿ.ಎನ್. ನಾಗರಾಜ್

ಕರ್ನಾಟಕ ಏಕೀಕರಣವಾಗುವುದಕ್ಕೆ ಮುಂಚೆ ವಿವಿಧ ಪ್ರಾಂತಗಳಲ್ಲಿ ಹಂಚಿಹೋಗಿದ್ದ ರಾಜ್ಯ ಅಲ್ಲಿ ನಡೆದ ರೈತ ಹೋರಾಟಗಳ ಮುಖ್ಯವಾಗಿ ಭೂ ಸಂಬಂಧೀ ಹೋರಾಟಗಳ ಪ್ರಭಾವಕ್ಕೆ ಒಳಗಾಯಿತು. ಮಲಬಾರಿನಲ್ಲಿ ನಡೆದ ಹೋರಾಟದ ಪ್ರಭಾವ ದಕ್ಷಿಣ ಕನ್ನಡ ಜಿಲ್ಲೆಯ ಮೇಲೆ ಆಗಿ ಅಲ್ಲಿಯೂ ರೈತ ಸಂಘಟನೆ ಗೇಣಿದಾರರ ಹೋರಾಟಗಳು ಆರಂಭವಾದವು. ಬಾಂಬೆ ಪ್ರದೇಶದಲ್ಲಿ ನಡೆದ ಹೋರಾಟದ ಪ್ರಭಾವ ಉತ್ತರ ಕನ್ನಡ ಜಿಲ್ಲೆಯ ಗೇಣಿ ಹೋರಾಟದಲ್ಲಿ ಫಲಿಸಿತು. ಬಿಜಾಪುರದಲ್ಲಿ ಕೂಡ ಕಾಣಿಸಿತು. ತೆಲಂಗಾಣ ಹೋರಾಟದ ಪ್ರಭಾವ ತೆಳುವಾಗಿಯಾದರೂ ಹೈದರಾಬಾದ್ ಕರ್ನಾಟಕದ ಗುಲ್ಬರ್ಗ ಜಿಲ್ಲೆಗೆ ತಟ್ಟಿತು.

ಈ ಹೋರಾಟಗಳ ಪರಿಣಾಮವಾಗಿ ವಿವಿಧ ಪ್ರಾಂತಗಳಲ್ಲಿ ಜಾರಿಗೆ ಬಂದ ಗೇಣಿ ಕಾನೂನುಗಳ ಅಲ್ಪಸ್ವಲ್ಪ ರಕ್ಷಣೆಯು ಅಲ್ಲಿನ ರೈತ ಸಮುದಾಯಕ್ಕೆ ದಕ್ಕಿತು. 1948ರ ಬಾಂಬೆ ಗೇಣಿ ಸುಧಾರಣೆ ಕಾನೂನು, 1950ರ ಹೈದರಾಬಾದ್ ಗೇಣಿ ಸುಧಾರಣೆ ಕಾನೂನು, 1956ರ ಮದ್ರಾಸ್ ಗೇಣಿ ಸುಧಾರಣೆ ನಿಯಮಗಳಿಗೆ . ಆ ಪ್ರದೇಶಗಳು ಒಳಪಟ್ಟವು. ಆದರೆ ಮೈಸೂರು ಸಂಸ್ಥಾನದಲ್ಲಿ ಇಲ್ಲಿ ನಡೆದ ಜೋಡಿ ಇನಾಂ ರದ್ಧತಿ ಹೋರಾಟಗಳ ಹಿನ್ನಲೆಯಲ್ಲಿ ನಿಧಾನವಾಗಿಯಾದರೂ ಕಾನೂನುಗಳು ರೂಪುಗೊಂಡವು. ಕೊಡಗಿಗೆ ಯಾವ ಕಾನೂನು ಅನ್ವಯವಾಗಿರಲಿಲ್ಲ. ಏಕೀಕರಣದ ನಂತರ, ಅಂದಿನ ಪಂಚ ವಾರ್ಷಿಕ ಮುಖ್ಯವಾಗಿ ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಒತ್ತಡದ ಫಲವಾಗಿ ಜತ್ತಿ ಸಮಿತಿ ಎಂದು ಪ್ರಸಿದ್ಧವಾದ ಸಮಿತಿಯೊಂದು 1957ರಲ್ಲಿ ನೇಮಕವಾದರೂ ಭೂ ಸುಧಾರಣ ವಿಧೇಯಕ ಕಾನೂನಾಗುವುದಕ್ಕೆ 1962ರ ಚುನಾವಣೆಯ ಒತ್ತಡ ಸಂದರ್ಭವೇ ಬೇಕಾಯಿತು. ಇಷ್ಟಾದರೂ ಕಾನೂನುಗಳು ರಚನೆಯಾಗಿ ಜಾರಿಗೆ ಬರುವುದಕ್ಕೆ 1965ರಷ್ಟಾಯಿತು.

ಈ ಕಾನೂನಿನಲ್ಲಿ ಭೂ ಮಾಲೀಕರ ಒತ್ತಡದಿಂದಾಗಿ ಒದಗಿಸಿದ್ದ ಬಿರುಕುಗಳಿಂದಾಗಿ ಕರ್ನಾಟಕದ ಭೂ ಸುಧಾರಣೆಯೆಂಬುದು ಎಷ್ಟು ಮಾತ್ರಕ್ಕೂ ಜಾರಿಯಾಗಲಿಲ್ಲ. ಇಡೀ ಭಾರತದಲ್ಲಿಯೇ ರಾಜಸ್ತಾನವನ್ನು ಬಿಟ್ಟರೆ ಅತಿ ಗರಿಷ್ಠ ಭೂಮಿತಿಯನ್ನು ಹೊಂದಿದ್ದ (ಕುಟುಂಬವೊಂದಕ್ಕೆ ಗರಿಷ್ಠ 432ಎಕರೆಗಳು ಈ ಕಾನೂನು ಯಾವ ಮಿಗತೆ ಭೂಮಿಯನ್ನು ಒದಗಿಸುವುದೂ ಸಾಧ್ಯವಿರಲಿಲ್ಲ. ಒಂದು ಎಕರೆ ಮಿಗತೆ ಭೂಮಿಯೂ ಘೋಷಿಸಲ್ಪಡಲಿಲ್ಲ. ಆದರೆ 1950 ದಶಕದಿಂದಲೇ ಆರಂಭವಾಗಿ 1965ರವರೆಗೂ ತಳ್ಳಿದ ಗೇಣಿ ಕಾನೂನುಗಳ ವಿಳಂಬದ ಪರಿಣಾಮವಾಗಿ ಲಕ್ಷಾಂತರ ಗೇಣಿದಾರರು ಹೊರ ಹಾಕಲ್ಪಟ್ಟರು. 1951 ರಲ್ಲಿ 61,36,173 ಎಕರೆಯಷ್ಟಿದ್ದ ಗೇಣಿದಾರರ ಜಮೀನು 1971ರ ಜನಗಣತಿ ಪ್ರಕಾರ ಕೇವಲ20,87,772 ಎಕರೆಗೆ ಇಳಿಯಿತು. ಅಂದರೆ 40ಲಕ್ಷ ಎಕರೆ ಭೂಮಿಯಿಂದ ಗೇಣಿದಾರರು ಹೊರಹಾಕಲ್ಪಟ್ಟರು ಎಂಬುದು ಸರ್ಕಾರದ ಅಂಕಿ ಅಂಶಗಳಿಂದಲೇ ತಿಳಿಯುವ ವಿಷಯ. ಈ ಅಂಕಿ ಅಂಶಗಳ ಹೊರತಾಗಿ ಹೊರ ಹಾಕಲ್ಪಟ್ಟವರ ಸಂಖ್ಯೆ ಅಗಣಿತ.

1970ರ ದಶಕದಲ್ಲಿ ಮತ್ತೆ ಗ್ರಾಮೀಣ ಪ್ರದೇಶದ ವರ್ಗ ಸಂಘರ್ಷಗಳು ಹಾಗೂ ಕಾಂಗ್ರೆಸ್ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡದ್ದರ ಪರಿಣಾಮವಾಗಿ ಕೇಂದ್ರ ಸರ್ಕಾರದ ಒತ್ತಡದೊಂದಿಗೆ ಮತ್ತೆ ಭೂ ಸುಧಾರಣಾ ತಿದ್ದುಪಡಿಗಳು ಜಾರಿಯಾದವು.

ಈ ತಿದ್ದುಪಡಿ ಕಾನೂನಿನ ಪರಿಣಾಮವಾಗಿ 1988ರ ವರೆಗೆ 2,92,537 ಎಕರೆ ಹೆಚ್ಚುವರಿ ಭೂಮಿಯೆಂದು ಘೋಷಿತವಾಗಿದೆ. ಅದರಲ್ಲಿ ಸ್ವಾಧೀನ ಪಡಿಸಿಕೊಂಡಿರುವುದು 1,54,090ಎಕರೆ ಮಾತ್ರ. ಕೇವಲ 27,023ಜನರಿಗೆ 1,17, 259ಎಕರೆಗಳು ಹಂಚಲಾಗಿದೆ.

ಇದು ಹೆಚ್ಚುವರಿ ಭೂಮಿಯ ಪ್ರಶ್ನೆಯಾದರೆ ಗೇಣಿದಾರರಿಗೆ ಭೂಮಿ ಎಂದು ಉಬ್ಬರದ ಘೋಷಣೆ ಮಾಡಿದ ಈ ಸುಧಾರಣೆಗಳ ಫಲವಾಗಿ 20,94,115 ಎಕರೆಯನ್ನು 4,84,671ರ ಜನರಿಗೆ ಕಾನೂನು ನಿಗದಿತ ದರದಲ್ಲಿ ಮಾರಲಾಗಿದೆ. ಅದರಲ್ಲಿ ಕೆಲವೇ ಜನರಿಗೆ ಜನತಾ ಸರ್ಕಾರ ನೀಡಿದ ವಿನಾಯಿತಿಯಂತೆ ಉಚಿತನ ದಕ್ಕಿದೆ. ಈ ರೀತಿ ಭೂಮಿ ದಕ್ಕಿಸಿಕೊಂಡವರಲ್ಲಿ ಬಹಳ ಭಾಗ ಭೂಮಿಯಿಂದ ಹೊರಕ್ಕೆ ಹಾಕಲಾಗದ ಬಲಿಷ್ಠ ಗೇಣಿದಾರರು. ಅನೇಕ ಜಿಲ್ಲೆಗಳಲ್ಲಿ ಗೇಣಿದಾರರು ಪಡೆದುಕೊಂಡ ಸರಾಸರಿ

ಈ ಭೂ ಸುಧಾರಣೆಯ ಬಣ್ಣ ಬಯಲು ಮಾಡಬೇಕಾದರೆ ಪ್ರತಿ ಜಿಲ್ಲೆಯಲ್ಲಿ ಭೂಮಾಲೀಕರು ಅಡಗಿಸಿಟ್ಟ ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಸಲ್ಲಬೇಕಾದ ಭೂಮಿಯನ್ನು ಬೊಟ್ಟು ಮಾಡಿ ತೋರಿಸ ಬೇಕಾಗಿದೆ. ಕಾಂಗ್ರೆ ಭೂಸುಧಾರಣೆಗಳಲ್ಲಿ ನಿರ್ಮಿಸಿರುವ ಸಂದಿಗೊಂದಿಗಳನ್ನು ಉಲ್ಲೇಖಿಸಿ ಅವನ್ನು ಮುಚ್ಚಲು ಒತ್ತಾಯ ತರಬೇಕು.

ದಕ್ಷಿಣ ಕರ್ನಾಟಕದಲ್ಲಿ ಸರ್ಕಾರಿ ಭೂಮಿಯ ಆಕ್ರಮಣ, ಹಂಚಿಕೆಯ ಪ್ರಶ್ನೆಯೇ ಮುಖ್ಯ ಪ್ರಶ್ನೆಯಾಗಿದೆ.

ಭೂಮಿ ಸುಮಾರು8 ಎಕರೆಯಿಂದ16 ಎಕರೆ ಯವರೆಗೂ ಇದೆ ಎನ್ನುವುದಾದರೆ ಇದರಲ್ಲಿ ಅಲ್ಪಸಂಖ್ಯೆಯ ಬಲಿಷ್ಠ ಗೇಣಿದಾರರ ಈ ಸಂಖ್ಯೆಯ ಎಷ್ಟು ಪಾಲಿನಷ್ಟು ಭೂಮಿಯನ್ನು ಪಡೆದಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಭೂಮಿಯನ್ನು ಕಳೆದುಕೊಂಡವರ ವಿಭಾಗ ಗಳನ್ನು ನೋಡಿದರೆ ದುರ್ಬಲ ವಿಭಾಗಗಳೇ ಹೆಚ್ಚು ಭೂಮಿಯನ್ನು ಕಳೆದು ಕೊಂಡಿರುವುದು ಸ್ಪಷ್ಟ ವಾಗುತ್ತದೆ. ಇದರಲ್ಲಿ ಶೇ. 30ರಷ್ಟು ವಿಧವೆಯರು, ಮೈನರ್‌ಗಳು, ಮದುವೆಯಾಗದ ಹೆಣ್ಣು ಮಕ್ಕಳು, ದೈಹಿಕ ಹಾಗೂ ಮಾನಸಿಕ ದೌರ್ಬಲ್ಯವುಳ್ಳವರಾದರೆ, ಸಣ್ಣ ಹಿಡುವಳಿದಾರರ ಸಂಖ್ಯೆ ಶೇ. 32ರವರೆಗೂ ಇದೆ. ಸಮಾಜದ ದುರ್ಬಲ ವಿಭಾಗಗಳಿಗೆ ಹಾಗೂ ಸಣ್ಣ ಹಿಡುವಳಿ ದಾರರಿಗೆ ಗೇಣಿ ಕಾನೂನಿನಲ್ಲಿ ರಕ್ಷಣೆ ನೀಡದಿ ರುವುದರ ಪರಿಣಾಮ ಇದು. ಇದರಿಂದ ಭೂ ಸುಧಾರಣೆಯ ಪರವಾಗಿ ಭೂ ಮಾಲೀಕರ ವಿರೋಧವಾಗಿರಬೇಕಾದವರೂ ಕೆಳ ಮಧ್ಯಮ ಹಾಗೂ ಮಧ್ಯಮ ವರ್ಗದವರೂ ಭೂ ಸುಧಾರಣೆಯೆಂದರೆ ಹೆದರುವಂತಾಗಿದೆ.

ಒಟ್ಟಿನಲ್ಲಿ ಭೂ ಸುಧಾರಣಾ ಕ್ರಮಗಳಿಂದ ಭೂ ಹೀನರಿಗೆ ರೈತಾಪಿ ವರ್ಗಕ್ಕೆ ಆದುದು ಲಾಭಕ್ಕಿಂತ ಹಾನಿಯೇ ಹೆಚ್ಚು. ಅವರ ಹಿಡಿತದಲ್ಲಿದ್ದ ಭೂಮಿಯನ್ನು ಕಳೆದುಕೊಂಡುದೇ ಅಗಣಿತ. ಪಡೆದ ಭೂಮಿ ಅದರಲ್ಲಿಯೂ ಭೂ ಹೀನರು ಹಾಗೂ ಸಣ್ಣರೈತರು ಪಡೆದದ್ದು ಬಹಳ ಅಲ್ಲ.

ಪ್ರಾಂತ ರೈತ ಸಂಘದ ಚಳುವಳಿ ತೀವ್ರವಾಗಿದ್ದ ದಕ್ಷಿಣ ಕನ್ನಡದಲ್ಲಿ ಮಾತ್ರ ಗಣನೀಯ ಲಾಭ ಗೇಣಿದಾರರಿಗೆ ದಕ್ಕಿದೆ.1,36,786 ಜನರು 3,57 ,323ಎಕರೆ ಪಡೆದಿದ್ದಾರೆ.

ಭೂ ಸುಧಾರಣಾ ಕ್ರಮಗಳಿಂದ ಭೂ ಒಡೆತನದಲ್ಲಿ ಯಾವುದೇ ಹೆಚ್ಚು ಪರಿಣಾಮವಾಗದ್ದು ಭೂ ಹಿಡುವಳಿಗಳ [illegible] ಗಣತಿಯಲ್ಲಿಯೂ ವ್ಯಕ್ತವಾಗಿದೆ. 1951ರಿಂದ 198[illegible]ರವರೆಗಿನ ಗಣತಿಯಲ್ಲಿ ಭೂ ಒಡೆತನ ಚಿತ್ರ ಒಂದೇ ರೀತಿ ಇದೆ. ಆದುದರಿಂದ ಭೂಮಿಯ ವರ್ಗಾವಣೆಯಾಗಿದ್ದರೆ ಅದು ಭೂ ಮಾಲೀಕರೊಳಗೆ ಆಗಿದೆಯೆಂಬುದು ಸ್ಪಷ್ಟ. ತಮ್ಮ ತಮ್ಮೊಳಗೇ ಆದ ಈ ಭೂ ಸುಧಾರಣೆಯನ್ನೇ ಭಾರತದಲ್ಲಿಯೇ ಅತ್ಯಂತ ಯಶಸ್ವೀ ಭೂ ಸುಧಾರಣೆಯೆಂದು ನಗಾರಿ ಬಡೆದು ಘೋಷಿಸಿದರು.

ಈ ಭೂ ಸುಧಾರಣೆಯ ಬಣ್ಣ ಬಯಲು ಮಾಡಬೇಕಾದರೆ ಜಿಲ್ಲೆ ಜಿಲ್ಲೆಗಳಲ್ಲಿಯೂ ಭೂ ಮಾಲೀಕರು ಅಡಗಿಸಿಟ್ಟ ಹೆಚ್ಚುವರಿ ಭೂಮಿಯನ್ನು, ಭೂ ಹೀನರಿಗೆ ಸಲ್ಲಬೇಕಾದ ಭೂಮಿಯನ್ನು ಬೊಟ್ಟು ಮಾಡಿ ತೋರಿಸಬೇಕಾಗಿದೆ. ಭೂಹೀನರ ಕೃಷಿ ಕಾರ್ಮಿಕರಲ್ಲಿ ಕೆರಳಿರುವ ಭೂ ದಾಹವನ್ನನುಸರಿಸಿ ಆಕ್ರಮಿಸಬೇಕಾಗಿದೆ.

ಕಾಂಗ್ರೆ ಭೂ ಸುಧಾರಣೆಗಳ ಅಳವಿನಲ್ಲಿಯೇ ಅಡಗಿಸಿಟ್ಟ ಮಿಗುತೆ ಭೂಮಿಯನ್ನು ವಶ ಪಡಿಸಿಕೊಳ್ಳಲು ಹಂಚಲು ಪ್ರಯತ್ನ ಮಾಡುವುದರ ಜೊತೆ ಜೊತೆಯಲ್ಲಿಯೇ ಅದರಲ್ಲಿ ನಿರ್ಮಿಸಿರುವ ಸಂದಿಗೊಂದಿಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಅದನ್ನು ಮುಚ್ಚುವ ತೀವ್ರತರ ಭೂ ಸುಧಾರಣೆಗಳಿಗೆ ಒತ್ತಾಯ ಪಡಿಸುವ ಕೆಲಸವನ್ನು ಮಾಡಬೇಕು.

ಭೂಮಿ, ಕೃಷಿ ಕುಟುಂಬದ ವಿವರಣೆಗಳಲ್ಲಿ, ಪ್ಲಾಂಟೇಷನ್ ಮೊದಲಾದುವಕ್ಕೆ ಕೊಟ್ಟ ವಿನಾಯ್ತಿ, ಭೂ ವರ್ಗೀಕರಣಗಳಲ್ಲಿರುವ ದೋಷವನ್ನು ಅದರಿಂದ ಭೂ ಹೀನರಿಗಾದ ಅನ್ಯಾಯವನ್ನು ಮನವರಿಕೆ ಮಾಡಬೇಕಾಗಿದೆ.

ಪ್ರಾದೇಶಿಕ ಭಿನ್ನತೆಗಳು:

ಕರ್ನಾಟಕದಲ್ಲಿ ಇಂದಿನ ಪರಿಸ್ಥಿತಿಯನ್ನು

ಕರಾವಳಿ ಕರ್ನಾಟಕದಲ್ಲಿ ಅಕ್ರಮ ಭೂಮಿ ಸಾಗುವಳಿಯ ಪ್ರಶ್ನೆ ಗೇಣಿದಾರರ ಸಮಸ್ಯೆಗಳನ್ನು ತೀವ್ರವಾಗಿ ಎತ್ತಬೇಕಾಗಿದೆ. ಹೆಚ್ಚುವರಿ ಭೂಮಿಯ ಪ್ರಶ್ನೆಯ ಬಗ್ಗೆ ವಿಶ್ಲೇಷಿಸಬೇಕಾಗಿದೆ

ಪರಿವೀಕ್ಷಿಸಿದಾಗ ಮೂರು ಭಿನ್ನವಾದ ಸಂಬಂಧಗಳು ಅದಕ್ಕನುಗುಣವಾಗಿ ಮೂರು ಭಿನ್ನ ಪರಿಸ್ಥಿತಿಗಳು ಎದ್ದು ಕಾಣುತ್ತವೆ.

ಸರ್ಕಾರಿ ಭೂಮಿ, ಅರಣ್ಯ ಭೂಮಿಯ ಲಭ್ಯತೆ , ಭೂ ಕೇಂದ್ರೀಕರಣ, ಗೇಣಿದಾರಿಕೆಯ ಪ್ರಮಾಣ ಹಾಗೂ ಕೃಷಿ ಕೂಲಿಕಾರರ ಪ್ರಮಾಣಗಳಲ್ಲಿ ಈ ವಿಭಿನ್ನತೆ ವ್ಯಕ್ತವಾಗುತ್ತದೆ.

ದಕ್ಷಿಣ ಕರ್ನಾಟಕ:

ಇಡೀ ರಾಜ್ಯಕ್ಕೆ ಹೋಲಿಸಿದರೆ ದಕ್ಷಿಣ ಕರ್ನಾಟಕದಲ್ಲಿಯೇ ಉಳುಮೆಯಾಗದ ಸರ್ಕಾರಿ ಭೂಮಿಯೇ ಹೆಚ್ಚಿದೆ. ಕೆಲವು ಜಿಲ್ಲೆಗಳಲ್ಲಿ ಈ ಭೂಮಿಯನ್ನು ಭೂ ಮಾಲೀಕರು, ಕೃಷಿ ಕಾರ್ಮಿಕರು ಬಡ ರೈತರು ಉತ್ತಿದ್ದರೂ ಇನ್ನೂ ಅನೇಕ ಜಿಲ್ಲೆಗಳಲ್ಲಿಯ ಯಥೇಚ್ಛವಾಗಿ ಸರ್ಕಾರಿ ಭೂಮಿ ಹಾಗೆಯೇ ಇದೆ. ಆಕ್ರಮಣ ಮಾಡಬೇಕಾಗಿದೆ. ಇದೇ ಕಾರಣದಿಂದಲೇ ಈ ಪ್ರದೇಶದಲ್ಲಿ ರೈತರ ಸಂಖ್ಯೆ ಹೆಚ್ಚು. ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆ. ಶೇ.60 ರಿಂದ 70ರಷ್ಟು ರೈತರಾದರೆ ಶೇ12-18 ರವರೆಗೆ ಕೃಷಿ ಕಾರ್ಮಿಕರು. ಇಡೀ ರಾಜ್ಯದಲ್ಲಿಯೇ ಈ ಪ್ರದೇಶದಲ್ಲಿ ಭೂ ಕೇಂದ್ರೀಕರಣ ಕಡಿಮೆ. ಗೇಣಿದಾರಿಕೆಯೂ ಅತ್ಯಲ್ಪ ಪ್ರಮಾಣದ್ದು. 1957ರಲ್ಲಿ ಗೇಣಿಗೆ ನೀಡಿರುವ ಭೂಮಿ ಶೇ2.84 ರಿಂದ ಶೇ7.83 ಗರಿಷ್ಠ ಬೆಂಗಳೂರು ಜಿಲ್ಲೆಯಲ್ಲಿ ಮಾತ್ರ ಶೇ15.94 ರಷ್ಟಿತ್ತು. ಈಗ ಮತ್ತಷ್ಟು ಕಡಿಮೆಯಾಗಿದೆ. ಕಾಂಗ್ರೆ ಭೂ ಸುಧಾರಣೆಯ ಸಮಯದಲ್ಲಿ ಬಹಳಷ್ಟು ತಗ್ಗಿ ಈಗೀಗ ಸ್ವಲ್ಪ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದೆ. ಇಲ್ಲಿ ಸರ್ಕಾರಿ ಭೂಮಿಯ ಆಕ್ರಮಣ, ಹಂಚಿಕೆಯ ಪ್ರಶ್ನೆಯೇ ಮುಖ್ಯ ಪ್ರಶ್ನೆಯಾಗಿದೆ. ಹಿಂದೆ ಇದ್ದ ಇನಾಂ, ಜೋಡಿಗಳು ಬಹಳಷ್ಟು ರದ್ದಾಗಿರು ವುದರಿಂದ ಕೆಲ ದೇವಸ್ಥಾನದ ಇನಾಂಗಳು ಮಾತ್ರ ಉಳಿದಿವೆ. ಅದೂ ಕೂಡಾ ಸೀಮಿತವಾಗಿ ಮಾತ್ರ.

ಕರಾವಳಿ ಕರ್ನಾಟಕ:

ಕರಾವಳಿ ಕರ್ನಾಟಕದಲ್ಲಿ ಒಂದು ಕಡೆ ಭತ್ತ ಬೆಳೆಯುವ ಅತ್ಯಂತ ಚಿಕ್ಕ ಹಿಡುವಳಿಗಳು ಮತ್ತೊಂದು ಕಡೆ ಅಡಿಕೆ,ತೆಂಗಿನ ತೋಟಗಳಲ್ಲಿ ಅದನ್ನೂ ಮೀರಿ ವಿನಾಯಿತಿ ಪಡೆದಿರುವ ಪ್ಲಾಂಟೇಷನ್‌ಗಳ ಭೂಮಿ ಕೇಂದ್ರೀಕೃತವಾಗಿದೆ. ಅತಿ ದೀರ್ಘಕಾಲದಿಂದ ಗೇಣಿದಾರಿಕೆಗೆ ಒಳಪಟ್ಟ ಪ್ರದೇಶ. ಗೇಣಿದಾರಿಕೆಯ ಪ್ರಮಾಣ ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಮಾತ್ರವಲ್ಲ ರಾಜ್ಯದ ಇತರ ಪ್ರದೇಶಗಳಿಗೆ ಸಂಬಂಧವೇ ಇಲ್ಲದಷ್ಟು ಹೆಚ್ಚು.ದ.ಕನ್ನಡ ಜಿಲ್ಲೆಯಲ್ಲಿ ಗೇಣಿಗೆ ನೀಡಿದ್ದ ಶೇ 65.86, ಉ.ಕ. ಜಿಲ್ಲೆಯಲ್ಲಿ ಶೇ 55.18 .ಈಗಾಗಲೇ ಹೇಳಿದಂತೆ ದ.ಕ.ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚು ಗೇಣೀ ಅರ್ಜಿಗಳು ಬಂದದ್ದು ಭೂಮಿ ಗೇಣಿದಾರರ ವಶವಾಗಿರುವುದು.

ಇದರ ಜೊತೆಗೆ ಭತ್ತದ ಕೃಷಿಗೆ ಹೊಂದಿದಂತೆ ಕುಮ್ಕಿ, ಬಾಣೆ ಭೂಮಿಗಳ ಪ್ರಶ್ನೆ ಅವುಗಳ ಅಕ್ರಮ ಕೃಷಿಯ ಪ್ರಶ್ನೆಯಿರುವುದರಿಂದ ಭೂಸುಧಾರಣೆ ಬಹಳ ಜಟಿಲವು ಆಗಿದೆ. ಭೂ ಕೇಂದ್ರೀಕರಣವಿದ್ದರೂ ಒಂದೇ ಎಕರೆ ಹೆಚ್ಚುವರಿಭೂಮಿಯನ್ನು ವಶಪಡಿಸಿಕೊಂಡಿದ್ದಿಲ್ಲ. ಇಲ್ಲಿ ಅಕ್ರಮ ಭೂಮಿ ಸಾಗುವಳಿಯ ಪ್ರಶ್ನೆ ಗೇಣಿದಾರರ ಸಮಸ್ಯೆಗಳನ್ನು ತೀವ್ರವಾಗಿ ಎತ್ತಲಾಗಿದೆ. ಹೆಚ್ಚುವರಿ ಭೂಮಿಯ ಪ್ರಶ್ನೆಯ ಬಗ್ಗೆ ವಿಶ್ಲೇಷಿಸಬೇಕಾಗಿದೆ.

ಉತ್ತರ ಕರ್ನಾಟಕ:

ಭೂ ಕೇಂದ್ರೀಕರಣ ಇನ್ನೂ ತೀವ್ರವಾಗಿರುವ ಪಾಳೆಯಗಾರಿ ಸಂಸ್ಥೆಗಳ ಹಿಡಿತ ಇನ್ನೂ ಬಿಗಿಯಾಗಿರುವ ಮಠ ಮಾನ್ಯಗಳ ಪ್ರದೇಶ. ರೈತರು ಶೇ.30-36 ರಷ್ಟಿದ್ದರೆ ಕೃಷಿ ಕಾರ್ಮಿಕರು ಶೇ.40-46 ರಷ್ಟಿದ್ದಾರೆ. ರೈತ ಸಂಘಟನೆ 80ರ ದಶಕದಲ್ಲಿ ತೀವ್ರವಾಗಿರುವ ಈ ಪ್ರದೇಶದಲ್ಲಿ ಬಹಳಷ್ಟು ಗೇಣಿದಾರರು ಭೂವಂಚಿತರಾಗಿ ಕೃಷಿ ಕಾರ್ಮಿಕ ರಾಗಿದ್ದಾರೆ. ಅಥವಾ ಕಾನೂನು ಬಾಹಿರ ಗೇಣಿದಾರರಾಗಿ ಉಳಿದಿದ್ದಾರೆ. ಈ ಪ್ರದೇಶದಲ್ಲಿಯೇ ಬೇನಾಮಿ ಭೂಮಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿದೆ. ಈಗೀಗ ಗೇಣಿದಾರಿಕೆ ಹೆಚ್ಚುತ್ತಿರುವಂತೆ ಕಾಣುತ್ತಿದೆ. ಇಲ್ಲಿಯ ನೀರಾವರಿ ಪ್ರದೇಶಗಳಲ್ಲಿ ವರ್ಷಕ್ಕೆ ಸುಮಾರು 2000ರಿಂದ 3000ವರೆಗೆ ಹಣ ನೀಡುವ ಬಂಡವಾಳಶಾಹಿ ಕೃಷಿಕರ ಲೀಸ್ ಪದ್ಧತಿ ಪ್ರಬಲವಾಗಿದ್ದರೆ ಒಣ ಬೇಸಾಯ ಪ್ರದೇಶದಲ್ಲಿ ಕೃಷಿ ಕೂಲಿಕಾರರು ಬಟಾಯಿದಾರರಾಗಿದ್ದಾರೆ. ಕೆಲವು ಪ್ರದೇಶಗಳಲ್ಲಿ ಹಿಂದೆ ಶೇ. 50ರಷ್ಟಿದ್ದ ಗೇಣಿ ಈಗ ಮೂರನೇ ಎರಡು ಭಾಗ, ಮುಕ್ಕಾಲು ಭಾಗದ ಹಂತವನ್ನು ಮುಟ್ಟುತ್ತಿರುವ ವರದಿಯಿದೆ. ಸರ್ಕಾರಿ ಭೂಮಿ ಅತಿ ಕಡಿಮೆ ಇರುವ ಈ ಪ್ರದೇಶದಲ್ಲಿಯೂ ಭೂಮಿಯ ಬಗ್ಗೆ ನಡೆದಿರುವ ಹೋರಾಟ ಸರ್ಕಾರಿ ಭೂಮಿಯ ಮೇಲೆಯೇ ಕೇಂದ್ರೀಕೃತವಾಗಿದೆ. ಹೆಚ್ಚುವರಿ ಕಾಂಗ್ರೆಸ ಎಂ.ಪಿ. ಶಾಸಕರುಗಳು ಜನತಾ ದಳ ನಾಯಕರು ಅತಿ ಹೆಚ್ಚು ಭೂಮಿಯುಳ್ಳ ಪ್ರದೇಶದ ರಾಜಕೀಯವನ್ನೇ ನಿಯಂತ್ರಿಸುವ ಭೂ ಒಡೆಯರಾಗಿದ್ದಾರೆ. ಹಳೆಯ ದೇಸಾಯಿ, ದೇಶಮುಖ್ ಪಾಟೀಲರ ಪ್ರಭಾವ ಗಟ್ಟಿಯಾಗಿದೆ. ಇತರ ಪ್ರದೇಶಗಳಲ್ಲಿ ದೇವಸ್ಥಾನ ಮಠ ಮಾನ್ಯಗಳು ಭೂಮಿ ಕಳೆದುಕೊಂಡರೆ ಈ ಪ್ರದೇಶದಲ್ಲಿ ಇನ್ನೂ ಲಕ್ಷಾಂತರ ಎಕರೆ ಭೂಮಿ ವೀರಶೈವ ಮಠ ಮಾನ್ಯಗಳ ವಶದಲ್ಲಿವೆ. ಮಠಾಧೀಪತಿಗಳ ರಾಜಕೀಯ ಪ್ರಭಾವ ಶಿಕ್ಷಣ ರಂಗದ ಮೇಲಿನ ಹಿಡಿತ ತೀವ್ರವಾಗಿದೆ.

ಈ ವಿವಿಧ ಪ್ರದೇಶಗಳಲ್ಲಿ ಭಿನ್ನ ಭಿನ್ನವಾಗಿರುವ ಪರಿಸ್ಥಿತಿ ಹಾಗೂ ಸಂಘಟನೆಯ ಶಕ್ತಿ, ಕೂಲಿಕಾರ ಹಾಗೂ ರೈತರು ಪ್ರಜ್ಞೆಯ ಮಟ್ಟಕ್ಕನುಗುಣವಾಗಿ ಹಂತ ಹಂತವಾದ ದೀರ್ಘಕಾಲಿನ ಹೋರಾಟವನ್ನು ರೂಪಿಸಬೇಕಾಗಿದೆ.

ಭೂಕೇಂದ್ರೀಕರಣ ಇನ್ನೂ ತೀವ್ರವಾಗಿರುವ, ಪಾಳೆಯಗಾರಿ ಹಿಡಿತ ಇನ್ನೂ ಬಿಗಿಯಾಗಿರುವ ಮಠ ಮಾನ್ಯಗಳ ಪ್ರದೇಶ, ಬೇನಾಮಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿರುವ ಪ್ರದೇಶ ಉತ್ತರ ಕರ್ನಾಟಕ.

ರಾಮಾಪುರ 200 ರೈತರ ಬಂಧನ ಜೈಲು

ದೇಶದ ನಾಲ್ಕು ಎಡಪಕ್ಷಗಳು ಹಾಗೂ ಏಳು ರೈತ-ಕೃಷಿಕೂಲಿಗಾರ ಸಂಘಟನೆಗಳು ಮೇ25 ರಂದು ದೇಶಾದ್ಯಂತ ರೈತರ ಭೂಮಿ ಪ್ರಶ್ನೆಗಾಗಿ ಚಳುವಳಿ ಸಂಘಟಿಸಲು ನೀಡಿದ ಕರೆಯಂತೆ ಬೆಳಗಾಂ ಜಿಲ್ಲೆಯ ಸೌದತ್ತಿ ತಾಲೋಕಿನ ರಾಮಾಪುರ ಗ್ರಾಮದ ರೈತರು ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಲು ಹೋದಾಗ ಪೋಲಿಸರು ಮಹಿಳೆಯರನ್ನು ಒಳಗೊಂಡು ಇನ್ನೂರು ರೈತರನ್ನು ಬಂಧಿಸಿ ಜೈಲಿನಲ್ಲಿಡಲಾಗಿದೆ.

ರಾಜ್ಯದಲ್ಲಿರುವ ಲಕ್ಷಾಂತರ ಎಕರೆ ಅರಣ್ಯ ಭೂಮಿ, ಬಂಜರು ಭೂಮಿ ಮತ್ತು ಸಿ.ಮತ್ತು ಡಿ. ಭೂಮಿಯನ್ನು ಭೂರಹಿತ ಕೃಷಿ ಕೂಲಿಗಾರರು ಸಾಗುವಳಿ ಮಾಡುತ್ತಿದ್ದ ಆ ಭೂಮಿಯನ್ನು ಸಕ್ರಮಗೊಳಿಸದೇ ಆ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಪೋಲಿಸ್ ಇಲಾಖೆ ಹಾಗೂ ಅರಣ್ಯ ಇಲಾಖೆಗಳ ಇಂತಹ ರೈತ ವಿರೋಧಿ ನೀತಿಗಳ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ ಸತತ ಹೋರಾಟ ನಡೆಸುತ್ತಾ ಬರುತ್ತಿದೆ.

ಇದೇ ರೀತಿ ಪೋಲಿಸರು ಹಾಗೂ ಅರಣ್ಯ ಇಲಾಖೆಯ ಸತತ ಕಿರುಕುಳ ಹಾಗೂ ದೌರ್ಜನ್ಯ ಕಂಡ ರಾಮಾಪುರ ರೈತರು ಚಳುವಳಿ ಆರಂಭಿಸಿದರು.

ರಾಮಾಪುರ ರೈತರ ಬಂಧನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾಂ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿ ಬಂಧನ, ಜೈಲುವಾಸಕ್ಕೆ ಬೆದರದೇ ರೈತರು ಚಳುವಳಿಯನ್ನು ತೀವ್ರಗೊಳಿಸ ಬೇಕೆಂದು ಕರೆ ನೀಡಿದೆ. ಈ ಕುರಿತು ಸಧ್ಯದಲ್ಲೇ ಜಿಲ್ಲಾ ಸಮಿತಿ ವಿಸ್ತತ ಸಭೆ ಕರೆದು ಚಳುವಳಿ ರೂಪಿಸಲಾಗುವುದೆಂದು ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾ॥ ಎಸ್.ಎಚ್. ಕಪ್ಪಣ್ಣನವರ ಹಾಗೂ ಪ್ರಧಾನ ಕಾರ್ಯದರ್ಶಿ ಕಾ॥ ವಿ.ಪಿ. ಕುಲಕರ್ಣಿಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಲಾಡ ಮುಗಳಿ

ಜುಲೈ 6 ರಂದು ಇಲ್ಲಿನ ರೈತ ಸಂಘ ಹಾಗೂ ಡಿ.ವೈ.ಎಫ್.ಐ.ಗಳ ಜಂಟಿ ಆಶ್ರಯದಲ್ಲಿ ಸುತ್ತಲ ಗ್ರಾಮಗಳ ಪ್ರಮುಖ ಬೇಡಿಕೆಗಳಾದ ರಸ್ತೆ ನಿರ್ಮಾಣ, ಡಾಂಬರ ರಸ್ತೆ, ಸೇತುವೆ ಕಾರ್ಯ ಕೈಗೊಳ್ಳಬೇಕೆಂಬ ಬೇಡಿಕೆ ಮುಂದಿರಿಸಿ ರಸ್ತೆ ತಡೆ ಚಳುವಳಿ ನಡೆಸಿದ ಸುಮಾರು 50ರೈತ-ಯುವಜನತೆಯನ್ನು ಪೋಲಿಸರು ಬಂಧಿಸಿದರು.

ಈ ಬೇಡಿಕೆಗಳ ಕುರಿತು ಹಲವಾರು ಬಾರಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವ ಕ್ರಮ ಕೈಗೊಳ್ಳದ ಕಾರಣ ಈ ರಸ್ತೆ ತಡೆ ಚಳುವಳಿ ಕೈಗೊಳ್ಳ ಲಾಯಿತು. ಕಾ॥ ಬಾಬೂ ಮುಗಳಿ, ಅರವಿಂದ ನಾಗೂರ, ಅಂಬ ಮಾನಗುತ್ತೆದಾರ,ಭೀಮ, ಶಾಮೊಹರಕ್ ಯುವನಾಯಕರಾದ ವೀರಣ್ಣಾ ಕಲಬರ್ಗಿ, ನಾಗಪ್ಪಾ ನಾಗೂರ್, ರಮೇಶ್ ಜಿಪಟೆಯವರು ಬಂಧಿತರಲ್ಲಿ ಪ್ರಮುಖರು. ಅಂದು ಸಂಜೆ ಬಂಧಿತರನ್ನು ಬಿಡುಗಡೆ ಮಾಡಲಾ ಯಿತು.

ರೈತರ ಹೆಸರಿನಲ್ಲಿ ಹಣ ನುಂಗಿದ ಭೂಪರು

ಬಿಜಾಪುರ ತಾಲೋಕು ಜಾಲಗೇರಿ ಗ್ರಾಮದ ದೊಕಳೆವಾಡಿ ಬಡಜನರು ಐ.ಆರ್.ಡಿ.ಪಿ. ಸಾಲಕ್ಕಾಗಿ ಅರ್ಜಿ ಸಲ್ಲಿಸದೇ 15 ಜನರ ಹೆಸರಿನಲ್ಲಿ ಆರಕೇರಿ ಮಂಡಳ ಪ್ರಧಾನರು, ಮತ್ತು ಕಾರ್ಯದರ್ಶಿಗಳು. ಬಿ.ಡಿ.ಓ. ಕಛೇರಿಯಲ್ಲಿ ವಿಸ್ತರಣಾಧಿಕಾರಿ ಔದ್ಯೋಗಿಕ ಸಹಕಾರಿ ಬ್ಯಾಂಕಿನ ಮ್ಯಾನೇಜರ್‌ಗಳು ಸೇರಿ ವಂಚನೆ ಮಾಡಿ ಕುತಂತ್ರದಿಂದ ಹಣ ಮಂಜೂರು ಮಾಡಿಸಿ ಕೊಂಡಿರುವುದು ವರದಿಯಾಗಿದೆ. ಒಂದು ಆಶ್ಚರ್ಯವೆಂದರೆ ಒಂದು ವರ್ಷದ ಹಿಂದೆ ಮೃತನಾದ ಮನ್ನು ದುಬ್ಬು ಚವ್ಹಾಣ (2-1-1988) ನ ಹೆಸರಿನಲ್ಲಿ 22-3-89 ರಂದು ಹಣವನ್ನು ತೆಗೆದು ಕೊಳ್ಳಲಾಗಿದೆ. ಈ ಹಣ ಮಂಜೂರಿಗಾಗಿ ರಾಜಕಾರಣಿಗಳ ಒತ್ತಾಸೆ ಪತ್ರ ಕೊಡಲಾಗಿದೆ.

ಮಂಡಳದ ಭಷ್ಟರ ಜೊತೆ ಕೈ ಜೋಡಿಸಿದ ಬಿ.ಡಿ.ಓ. ಅಧಿಕಾರಿಗಳು ಶಾಮೀಲಾಗಿ ಬಡವರಿಗೆ ಸಲ್ಲಬೇಕಾದ ಸೌಲಭ್ಯ ನೀಡದೇ ದ್ರೋಹ ಬಗೆದವರ ವಿರುದ್ಧ ಉಗ್ರಕ್ರಮ ಕೈಗೊಂಡು ಕ್ರಿಮಿನಲ್ ಕೇಸು ದಾಖಲು ಮಾಡಿ ಸಸ್ಪೆಂಡ್ ಮಾಡಬೇಕೆಂದು ಡಿ.ವೈ.ಎಫ್.ಐ. ಬಿಜಾಪುರ ಜಿಲ್ಲಾ ಸಮಿತಿ ಒತ್ತಾಯಿಸಿದೆ. ಈ ಕುರಿತು ಕ್ರಮ ಕೈ ಗೊಳ್ಳದಿದ್ದರೆ ಸತ್ಯಾಗ್ರಹ ಚಳುವಳಿ ಕೈಗೊಳ್ಳುವುದಾಗಿ ಅಧ್ಯಕ್ಷ ಮನ್ನುಸಾಬ ಕಲಾದಗಿ ಕಾರ್ಯದರ್ಶಿ ಸದಾನಂದಮೋದಿ ಎಚ್ಚರಿಸಿದ್ದಾರೆ.

ಕೃಷಿಕೂಲಿಗಾರರ ಜಾಗೃತಿ ಸಭೆಗಳು

ಉಡುಪಿ ನಗರದ ಸುತ್ತ-ಮುತ್ತಲಿನ ಹಲವಾರು ಗ್ರಾಮಗಳಲ್ಲಿ ಕೃಷಿಕೂಲಿಗಾರರ ಸಭೆಗಳನ್ನು ಸಂಘಟಿಸಿ ಹಸಿರು ಕಾರ್ಡ್ ವಿತರಣೆ, ಮನೆ ನಿವೇಶನ, ವೃದ್ಧಾಪ್ಯವೇತನ, ಕನಿಷ್ಠ ಕೂಲಿ ಜಾರಿ ಮುಂತಾದ ಬೇಡಿಕೆ ಒತ್ತಾಯಿಸಿ ನಡೆಸುವ ಹೋರಾಟದ ಪೂರ್ವ ಭಾವಿಯಾಗಿ ನಡೆದ ಈ ಸಭೆಗಳಲ್ಲಿ-ಸಾವಿರ ರೈತರನ್ನು ಸದಸ್ಯರಾಗಿ ನೊಂದಾಯಿಸಿ 21 ಗ್ರಾಮ ಸಮಿತಿಗಳನ್ನು ರಚಿಸಲಾಯಿತು.

ದಿನದ ಕೂಲಿಯಾಗಿ 2 1/2 ಅಥವಾ 3 1/2 ಸೇರು ಅಕ್ಕಿ ಪಡೆಯುವ ರೈತರಿಗೆ ಹೆಚ್ಚಿನ ಧಾನ್ಯ ಹಾಗೂ ಕೂಲಿಗಾಗಿ ನಡೆಸಿದ ಒತ್ತಾಯದ ಪರಿಣಾಮವಾಗಿ ರೈತರು ಇಂದು 4 ಸೇರು ಅಕ್ಕಿ ಪಡೆಯುತ್ತಿದ್ದಾರೆ. ಕೃಷಿ ಕೂಲಿಗಾರರ ಹಿತ ರಕ್ಷಣೆಗೆ ಕೇಂದ್ರ ಸರ್ಕಾರದ ಕಾನೂನೊಂದನ್ನು ಜಾರಿಗೊಳಿಸಲು ಒತ್ತಾಯಿಸಿ ಹೋರಾಟ ರೂಪಿಸಲಾಗುವುದೆಂದು ರೈತ ಸಂಘದ ತಾಲೋಕು ಮುಖಂಡ ಕಾ॥ ಡೇವಿಡ್ ಎ.ಕರ[illegible] ತಿಳಿಸಿದ್ದಾರೆ.

ಗ್ರಾಮಘಟಕಗಳ ಉದ್ಘಾಟನೆ

ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲೋಕಿನ ಹೆಬ್ಬಾಳ ಗ್ರಾಮದಲ್ಲಿ 12-6-89 ರಂದು ಗ್ರಾಮ ಘಟಕವನ್ನು ಉದ್ಘಾಟಿಸಲಾಯಿತು. ಬಿಜಾಪುರ ತಾಲೋಕಿನ ಹಿಟ್ಟಿನಹಳ್ಳಿ ಗ್ರಾಮ ಘಟಕದ ಉದ್ಘಾಟನಾ ಸಮಾರಂಭ ಜುಲೈ 3 ರಂದು ಜರುಗಿತು. ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕಾ॥ ಭೀಮಸಿ ಕಲಾದಗಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಘಟಕಗಳನ್ನು ಉದ್ಘಾಟಿಸಿದರು. ಯುವ ನಾಯಕರಾದ ಕಾ॥ ಮನ್ನುಸಾಬಕಲಾದಗಿ, ಸದಾನಂದ ಮೋದಿಯವರು ಹಾಗೂ ಜಿಲ್ಲಾ ರೈತ ಮುಖಂಡರುಗಳು ಭಾಗವಹಿಸಿದ್ದರು. ಗ್ರಾಮ ಸಮಿತಿಗಳನ್ನು ಆರಿಸಲಾಯಿತು.

ವಿಟ್ಲ ರೈತರ ಧರಣಿ

ಬಂಟ್ವಾಳ ತಾಲೋಕಿನ ವಿಟ್ಲರ ಫಿರ್ಕಾದ ಕಂದಾಯ ನಿರೀಕ್ಷಕರು ಕಛೇರಿಗೆ ಬರುವ ರೈತರ ಜೊತೆ ಅಸಭ್ಯವಾಗಿ ವರ್ತಿಸುವುದು ಬೆದರಿಸಿ ಹಣ ಕೇಳುವ ಅನುಚಿತ ವರ್ತನೆಯನ್ನು ಪ್ರತಿಭಟಿಸಿ ರೈತಸಂಘ ಜೂನ್ 5 ರಂದು 100 ಮಂದಿ ರೈತರು ಧರಣಿ ನಡೆಸಿದರು. ತಹಸೀಲ್ದಾರ್‌ರವರು ಮನವಿ ಸ್ವೀಕರಿಸಿ ಮಾತುಕತೆ ನಡೆಸಿದರು. ನಂತರ ನಡೆದ ಸಭೆಯಲ್ಲಿ ತಾಲೋಕು ರೈತಸಂಘದ ಅಧ್ಯಕ್ಷ ಕಾ॥ಬಿ.ವಾಸು ಗಟ್ಟಿಯವರು ಮಾತನಾಡಿದರು. ಕಾ॥ಎ.ರಾಮಣ್ಣ ಮತ್ತು ರಂಗಪ್ಪ ನ್ಯಾಕ ನೇತೃತ್ವವಹಿಸಿದ್ದರು.

ಅಂಗನವಾಡಿ ಕಾರ್ಯಕರ್ತರ ರಾಷ್ಟ್ರ ಸಮಾವೇಶ

1989 ಏಪ್ರಿಲ್ 22 ಮತ್ತು 23 ರಂದು ದೆಹಲಿಯಲ್ಲಿ ಜರುಗಿದ ಅಂಗನವಾಡಿ ಕಾರ್ಯಕರ್ತರ ಅಖಿಲ ಭಾರತ ಸಮಾವೇಶವು ನೀಡಿದ ಕರೆಯ ಮೇರೆಗೆ ಜುಲೈ 10 ರಂದು ದೇಶದಾದ್ಯಂತ ಬೇಡಿಕೆ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

ಹಿಮಾಚಲ ಭವನದಲ್ಲಿ 15 ರಾಜ್ಯಗಳಿಂದ ಒಟ್ಟು ಸುಮಾರು 500 ಮಂದಿ ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡಿದ್ದ ಸಮಾವೇಶವನ್ನು ಸಿ.ಐ.ಟಿ.ಯು.ಅಧ್ಯಕ್ಷರಾದ ಕಾಂ।ಬಿ.ಟಿ.ರಣದಿವೆಯವರು ಉದ್ಘಾಟಿಸಿದರು. ಕರ್ನಾಟಕದಿಂದ ಎಸ್.ಆರ್.ಲೀಲಾವತಿ ಮತ್ತು ಲೇಖನಿ ನಾಯಕ್‌ರವರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಬಹುತೇಕ ಅಸಂಘಟಿತರಾಗಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಸಂಘಟಿಸಿ ಅಖಿಲಭಾರತ ಮಟ್ಟದ ಒಕ್ಕೂಟವೊಂದನ್ನು ರಚಿಸಲು ದೆಹಲಿ ಸಮಾವೇಶವು ನಿರ್ಧರಿಸಿರುತ್ತದೆ. ಯಾವುದೇ ಟ್ರೇಡ್ ಯೂನಿಯನ್ ಸಂಘಟನೆಗೆ ನೊಂದಣಿಯಾಗಿರುವ ಅಥವಾ ಸ್ವತಂತ್ರವಾಗಿರುವ ರಾಜ್ಯಮಟ್ಟದ ಅಂಗನವಾಡಿ ನೌಕರರ ಸಂಘಟನೆಗಳನ್ನು ಒಕ್ಕೂಟಕ್ಕೆ ನೊಂದಾಯಿಸಬಹುದೆಂದು ನಿರ್ಣಯ ಕೈಗೊಳ್ಳಲಾಗಿದೆ. 1990 ಮಾರ್ಚ್ ತಿಂಗಳಿನಲ್ಲಿ ರಾಷ್ಟ್ರಮಟ್ಟದ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಗಿದ್ದು ಇದಕ್ಕೆ ಪೂರ್ವಭಾವಿಯಾಗಿ ಎಲ್ಲಾ ರಾಜ್ಯಗಳಲ್ಲೂ ಅಂಗನವಾಡಿ ಕಾರ್ಯಕರ್ತರನ್ನು ಸಂಘಟಿಸಲು ಮತ್ತು ಜುಲೈ ರಂದು ದೇಶ ದಾದ್ಯಂತ ಬೇಡಿಕೆ ದಿನಾಚರಣೆಯನ್ನು ಆಚರಿಸಲು ಕರೆ ನೀಡಲಾಗಿತ್ತು. ಕಾಂ। ವಿಮಲಾ ರಣದಿವೆಯವರು ಸಂಚಾಲಕಿಯಾಗಿರುವ ಸಿದ್ಧತಾ ಸಮಿತಿಯೊಂದನ್ನು ಸಹ ರಚಿಸಲಾಗಿದೆ.

1. ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರನ್ನು ಕೇಂದ್ರ ಸರ್ಕಾರ ಪೂರ್ಣಕಾಲ ಪರಿಗಣಿಸಬೇಕು. ಅದುವರೆಗೆ ಅನುಕ್ರಮವಾಗಿ ಮಾಸಿಕ 600ರೂ/- ಹಾಗೂ 400ರೂ/- ಸಂಭಾವನೆಯನ್ನು ನಿಗಧಿಪಡಿಸಬೇಕು.
2. ವಿದ್ಯಾರ್ಹತೆ ಮತ್ತು ಸೇವಾನುಭವದ ಆಧಾರದಲ್ಲಿ ಬಡ್ತಿ ಅವಕಾಶವಿರಬೇಕು.
3. ಪೂರ್ಣ ವೇತನದೊಂದಿಗೆ ಮೂರು ತಿಂಗಳ ಕಾಲ ಹೆರಿಗೆ ರಜೆ ಮತ್ತು ಭತ್ಯೆ ನೀಡಬೇಕು.
4. ಕೇಂದ್ರ ಸರ್ಕಾರದ ನಿಯಮಾವಳಿಯ ಪ್ರಕಾರ ಸಂಪಾದಿಸಿದ ರಜೆ ಮತ್ತು ವೈದ್ಯಕೀಯ ರಜೆ ಸೌಲಭ್ಯ ನೀಡಬೇಕು.
5. ಭಾನುವಾರ ಮತ್ತು ಸಾರ್ವಜನಿಕ ರಜಾದಿನಗಳಂದು ಸಹ ರಜಾ ನೀಡಬೇಕು.
6. ಕೇಂದ್ರ ಸರ್ಕಾರಿ ನೌಕರರಿಗೆ ಸಮಾನವಾದ ದರಗಳಲ್ಲಿ, ಹಬ್ಬದ ಬೋನಸ್ ನೀಡಬೇಕು.
7. [illegible]
8. 3. ಕಿ.ಮೀ.ಗಳಿಗಿಂತಲೂ ಹೆಚ್ಚಿನ ದೂರ ಕರ್ತವ್ಯ ನಿರ್ವಹಣೆಯ ಮೇಲೆ ಪ್ರಯಾಣಿಸಬೇಕಾದಲ್ಲಿ ಪ್ರಯಾಣ ಭತ್ಯೆ ನೀಡಬೇಕು.
9. ಅಂಗನವಾಡಿ ಕೇಂದ್ರಗಳಿಗೆ ಸರ್ಕಾರವು ಭೂಮಿ ಮತ್ತು ಧನಸಹಾಯವನ್ನು ಒದಗಿಸಿ, ಸೌದೆ, ಅಕ್ಕಿ, ದ್ವಿದಳಧಾನ್ಯ, ಇತ್ಯಾದಿಗಳನ್ನೂ ಸರಬರಾಜು ಮಾಡಬೇಕು. ಅಂಗನವಾಡಿ ಕೇಂದ್ರಗಳ ಸಮೀಪದಲ್ಲಿ ಮಕ್ಕಳ ಕ್ರೆಷ್‌ಗಳನ್ನು ಸ್ಥಾಪಿಸಬೇಕು.
10. ದಿಢೀರನೆ ದೂರದ ಊರುಗಳಿಗೆ ವರ್ಗಾಯಿಸಿದಲ್ಲಿ, ವಸತಿಸೌಲಭ್ಯ ಒದಗಿಸಬೇಕು.
11. ಅಧಿಕಾರಿಗಳ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಬೇಕು.
12. ಖಾಯಿದೆ ತೀರಿದ ಔಷಧಿಗಳನ್ನು ಸರಬರಾಜು ಮಾಡುವುದನ್ನು ತಕ್ಷಣ ನಿಲ್ಲಿಸಬೇಕು.
13. ಯೋಜನಾ ಸಮಿತಿಗಳಲ್ಲಿ, ಅಂಗನವಾಡಿ ಕಾರ್ಯಕರ್ತರ ಸಂಘದ ಪ್ರತಿ [illegible]

ಅಂಗನವಾಡಿ ಕಾರ್ಯಕರ್ತೆಯರ ಬವಣೆ: ಬಗೆಹರಿಯದೆ ಉಳಿದಿರುವ ಸಮಸ್ಯೆಗಳು

—ಲೀಲಾ ಸಂಪಿಗೆ.

ಭಾರತ ಸರಕಾರದ 'ಸಮಗ್ರ ಬಾಲವಿಕಾಸ ಯೋಜನೆ' (ICDS)ಯಲ್ಲಿ ಇಂದು ಲಕ್ಷಾಂತರ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕರು ಸೇವೆ ಸಲ್ಲಿಸುತ್ತಿದ್ದಾರೆ. ಕೇಂದ್ರ ಸರಕಾರದ ಘೋಷಿತ ಕನಿಷ್ಠ ಕೂಲಿಗಿಂತಲೂ ಕಡಿಮೆ (ಮಹೆಯಾನ ರೂ.225-275) ಸಂಭಾವನೆ ಪಡೆದು ಸೇವೆ ಸಲ್ಲಿಸುತ್ತಿರುವ ಇವರ ಬದುಕು ಅತ್ಯಂತ ದುಸ್ತರ ವಾದದ್ದು. ಕೇಂದ್ರ ಸರಕಾರ ಇತ್ತೀಚಿನ ದಿನಗಳಲ್ಲಿ ಅದರಲ್ಲೂ ವಿಶೇಷವಾಗಿ ಮುಂಬರುವ ಪಾರ್ಲಿಮೆಂಟ್ ಚುನಾವಣೆಯನ್ನು ಗಮನದಲ್ಲಿರಿಸಿ ಕೊಂಡು,ಹಲವಾರು ಮಹಿಳಾ ಪ್ರಾಶಸ್ತ್ಯದ ಯೋಜನೆಗಳನ್ನು, ಕಲ್ಯಾಣ ಕಾರ್ಯಕ್ರಮಗಳನ್ನು, ಮೀಸಲಾತಿಗಳನ್ನು ಘೋಷಿಸುತ್ತಿದೆ. ಆದರೆ ಅದೇ ಸರಕಾರ ಈಗಾಗಲೇ ಘೋಷಿತ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುವ ಈ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಕೆ ಬಗ್ಗೆ ಯಾವುದೇ ಭರವಸೆ ನೀಡಲು ಸಿದ್ಧವಿಲ್ಲದಿರುವುದು ಸರಕಾರದ ಘೋಷಣೆಯನ್ನೇ ಸಂದೇಹಾಸ್ಪದವಾಗಿ ನೋಡುವ ಪರಿಸ್ಥಿತಿಯನ್ನು ನಿರ್ಮಿಸಿದೆ.

ಇದೇ ವರ್ಷದ ಏಪ್ರಿಲ್ 22-23 ರಂದು ದೆಹಲಿಯಲ್ಲಿ ನಡೆದ ಅಂಗನವಾಡಿ ಕಾರ್ಯಕರ್ತೆಯರ ಸಮಾನವೇಶವು ಅವರ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಬೆಳಕನ್ನು ಚೆಲ್ಲಿ ಅಖಿಲಭಾರತ ಮಟ್ಟದಲ್ಲಿ ಸಾಮಾನ್ಯವಾಗಿರುವ ಬೇಡಿಕೆಗಳನ್ನು ಗುರುತಿಸಿರುವುದು ಮಾತ್ರವಲ್ಲದೆ ಪ್ರಬಲವಾದ ಸಂಘಟನೆ ಕಟ್ಟಲೂ ಕರೆ ನೀಡಿರುವುದನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿ ಕೊಳ್ಳಬಹುದು."ಸಮಾಜಸೇವಾ ಕಾರ್ಯಕರ್ತರು" ಎಂಬ ಹಣೆಪಟ್ಟಿ ಅಂಟಿಸಿ "ಗೌರವಧನ" ಮಾತ್ರ ಕೊಡಲು ನಾವು ಬಾಧ್ಯರು ಎಂದು ಹೇಳುತ್ತಾ ಕೇಂದ್ರ ಸರಕಾರವು ಮಹಿಳೆಯರೇ ಪ್ರಮುಖವಾಗಿರುವ ಈ ಯೋಜನೆಯಡಿಯಲ್ಲಿ ಯಾವುದೇ ಕಾನೂನು ಬದ್ಧ ಸೌಲಭ್ಯಗಳು ಅವರಿಗೆ ತಲುಪದಂತೆ ಮಾಡಿದೆ. ಇದನ್ನು ದೆಹಲಿ ಸಮಾವೇಶವು ಗುರುತಿಸಿದೆ.

ವಿದೇಶಿ ಹಣ:

ಎಳೆ ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು. ಆರೋಗ್ಯ ಸೌಲಭ್ಯ ವಿಸ್ತರಿಸುವುದು. ವಿದ್ಯಾಭ್ಯಾಸ ನೀಡುವುದು. ಕುಟುಂಬ ಕಲ್ಯಾಣದ ಬಗ್ಗೆ ತಾಯಂದಿರಿಗೆ-ಕುಟುಂಬಕ್ಕೆ ಶಿಕ್ಷಣ ನೀಡುವುದು....ಹೀಗೆ ಕೆಲವಾರು ಉದ್ದೇಶಗಳನ್ನು ಸಮಗ್ರ ಬಾಲವಿಕಾಸ ಯೋಜನೆಯಲ್ಲಿ ರೂಪಿಸುವುದಾಗಿ ಕೇಂದ್ರ ಸರಕಾರ ಸಾರಿದು-ಈ ಬಗ್ಗೆ ಕೋಟ್ಯಾಂತರ ರುಪಾಯಿ ವೆಚ್ಚ ಮಾಡುತ್ತಿರುವುದಾಗಿ ಅಂಕಿ ಸಂಖ್ಯೆ ಬಿಡುಗಡೆ ಮಾಡುತ್ತಿದೆ. 1987-88ನೇ ವರ್ಷದ ಪಾಲಿನ ಸಮಾಜ ಕಲ್ಯಾಣ ಸಚಿವಾಲಯವು ಈ ಯೋಜನೆ ಬಗ್ಗೆ ಪ್ರಕಟಿಸಿದ ವರದಿ ರೀತ್ಯ ಹಲವಾರು ವಿದೇಶಿ ಸಂಸ್ಥೆಗಳು ಸರಕಾರದ ಈ ಯೋಜನೆಗೆ ಹಣ ನೆರವು ನೀಡುತ್ತಿವೆ. ಕೆಲವಾರು ಯೋಜನೆಗಳು ನೇರವಾಗಿ ಈ ವಿದೇಶಿ ಸಂಸ್ಥೆಗಳಿಂದ ಹಣ ಪಡೆದು ಜಾರಿಯಾಗುತ್ತಿವೆ. ಗ್ರಾಮಾಂತರ ಪ್ರದೇಶದ ಬಡವರಿಗೆ ನೆರವಾಗುವ ನೆಪದಲ್ಲಿ ವಿದೇಶಿ ಸಂಸ್ಥೆಗಳು ನೇರವಾಗಿ ನಮ್ಮ ದೇಶದೊಳಗೆ ಪ್ರವೇಶಿಸಲು ಅವಕಾಶ ನೀಡುವ ಅತ್ಯಂತ ಅಪಾಯಕಾರಿ ಪರಿಸ್ಥಿತಿ ಇದರಿಂದ ನಿರ್ಮಾಣವಾಗಿದೆ. ಸರಕಾರ ಈ ಅಪಾಯವನ್ನು ಅರಿಯಬೇಕು.

1987 ರಲ್ಲಿ ಪ್ರಕಟವಾದ ಸಮಾಜ ಕಲ್ಯಾಣ ಸಚಿವಾಲಯದ ದಾಖಲೆಯ ಪ್ರಕಾರ ಈ ಯೋಜನೆಯಲ್ಲಿ 7ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ದೇಶದಲ್ಲಿ 22 ಲಕ್ಷ ಅಂಗನವಾಡಿ ಕೇಂದ್ರಗಳು ಸುಮಾರು 66 ಲಕ್ಷ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಲಿವೆ. 1986ರಲ್ಲಿ ಈ ಯೋಜನೆಯನ್ವಯ ಒಳಗೊಂಡ ಜಿಲ್ಲೆಗಳು 2.200 ಆಗಿದ್ದು ಸರಕಾರವು ಪ್ರತಿಯೊಂದು ಗ್ರಾಮ, ವಾರ್ಡ್ ಹಾಗು ಕೊಳಚೆ ಪ್ರದೇಶಗಳಲ್ಲಿ ಇದರ ಅಂಗವಾಗಿ ಅಂಗನವಾಡಿಗಳನ್ನು ಆರಂಭಿಸುವುದಾಗಿ ಸಾರಿದೆ. ತನ್ನ ಸಾಧನೆಯ ಹಿರಿಮೆ ತೋರ್ಪಡಿಸಲು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳ ಮುಂದೆ ಭಿಕ್ಷೆಯ ಪಾತ್ರೆಯನ್ನೊಡ್ಡುವ ನೀತಿಯು ತೀರಾ ನಾಚಿಕೇಡಿನ ವಿಚಾರ ಮಾತ್ರವಲ್ಲದೆ ಅಪಾಯಕಾರಿಯೂ ಆಗಿದೆ.

ನ್ಯಾಯಬದ್ಧ ಬೇಡಿಕೆಗಳು:

ಕೇಂದ್ರ ಸರಕಾರವು ಯೋಜನೆ ಬಗ್ಗೆ ದೀರ್ಘವಾದ ಹೇಳಿಕೆಗಳನ್ನು ನೀಡುತ್ತಾ ಅದರ ವಿಸ್ತರಣೆ ಬಗ್ಗೆ ಅಂಕಿ ಸಂಖ್ಯೆ ಬಿಡುಗಡೆ ಮಾಡುತ್ತಿದೆ ವಿನಾ: ಕಾಲಿ ಇರುವ ಅಂಗನವಾಡಿ ಕೇಂದ್ರಗಳ ಸ್ಥಿತಿಗತಿ, ಅಲ್ಲಿ ದುಡಿಯುವ ಶಿಕ್ಷಕಿಯರ ಬವಣೆ, ಅವರು ಮೇಲಿನ ಅಧಿಕಾರಿಗಳಿಂದ ಅನುಭವಿಸುತ್ತಿರುವ ಕಿರುಕುಳ ಇವುಗಳ ಪರಿಹಾರಕ್ಕೆ ಕ್ರಮಕೈಗೊಳ್ಳುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರ ದೆಹಲಿ ಸಮಾವೇಶವು ಇವರುಗಳ ಪ್ರಮುಖವಾದ ಭೇಡಿಕೆ ಗಳನ್ನು ಗುರುತಿಸಿ ಪ್ರಮುಖ ಬೇಡಿಕೆಗಳನ್ನು ಕೇಂದ್ರ ಸರಕಾರದ ಮುಂದಿರಿಸಿದೆ. ಪ.ಬಂಗಾಳ ಮತ್ತು ಕೇರಳ ಸರಕಾರಗಳು ಇವರ ಕೆಲವಾರು ಬೇಡಿಕೆಗಳಿಗೆ ಮಾನ್ಯತೆ ನೀಡಿ ತನ್ನದೇ ಹಣದಿಂದ ಅದನ್ನು ಪೂರೈಸಿದೆ.ಇತರ ಬಹುತೇಕ ರಾಜ್ಯಗಳಲ್ಲಿ ಅಂಗನವಾಡಿ ಕಾರ್ಯಕರ್ತರ ಸ್ಥಿತಿ ಶೋಚನೀಯವಾಗಿಯೇ ಮುಂದುವರಿದಿದೆ.

ಹೋರಾಟದ ಅನಿವಾರ್ಯತೆ:

ಮಹಿಳೆಯರೇ ಪ್ರಮುಖವಾಗಿರುವ ಐ.ಸಿ.ಡಿ.ಎಸ್.ಯೋಜನೆಯಡಿಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರ ಪ್ರಬಲವಾದ ಸಂಘಟನೆಯಡಿಯಲ್ಲಿ ಒಂದಾಗುವುದು-ಸಂಘಟಿತರಾಗುವುದು ಅನಿವಾರ್ಯವಾಗಿದೆ. ಸಂಘಟನೆ-ಹೋರಾಟ ವಿನಾ: ಇವರ ಪ್ರಶ್ನೆಗಳಿಗೆ ಬೇಡಿಕೆಗಳಿಗೆ ಪರಿಹಾರ ಕಾಣಲು ಸಾಧ್ಯವಾಗಲಾರದು. ಕರ್ನಾಟಕ ರಾಜ್ಯದಲ್ಲೂ ಈ ಪ್ರಯತ್ನ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಜುಲೈ 10ರಂದು ದೇಶದಾದ್ಯಂತ ಅಂಗನವಾಡಿ ಶಿಕ್ಷಕಿಯರು ಮತ್ತು ಸಹಾಯಕಿಯರು ನಡೆಸುವ 'ಬೇಡಿಕಾ ದಿನಾಚರಣೆ' ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಸಿ.ಐ.ಟಿ.ಯು ಇವೇ ಮೊದಲಾದ ಕೇಂದ್ರ ಸಂಘಟನೆಗಳು ಅಂಗನವಾಡಿ ಕಾರ್ಯಕರ್ತೆಯರ ಧೀಮಂತ, ನ್ಯಾಯಬದ್ಧ ಹೋರಾಟಕ್ಕೆ ಬೆಂಬಲ ನೀಡಿ [illegible] ನಡೆಸುವುದು ಸ್ವಾಗತಾರ್ಹ [illegible] ಇಂದಿನ ಅನಿವಾರ್ಯತೆಯಾಗಿದೆ.

ಕಮ್ಯೂನಿಸ್ಟ್ ಪಥ ಪ್ರದರ್ಶನ

- ಕಾಮ್ರೇಡ್ ಮುಝುಫ್ಫರ್ ಅಹಮ್ಮದ್-ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಪ್ರಮುಖರು ಅನುರೂಪವಾದ ರೀತಿಯಲ್ಲಿ ಅವರ ಜನ್ಮ ಶತಾಬ್ದಿಯನ್ನು ಆಗಸ್ಟ್ 5, 1989 ವರೆಗೆ ಆಚರಿಸಬೇಕೆಂ ಅಂಗೀಕರಿಸಿದ ಒಂದು ನಿರ್ಣಯ ಕರೆಕೊಟ್ಟಿತು. ಯಾವುದೇ ಅರ್ಥದಲ್ಲಿ ನೋಡಿದರೂ ನಿಜವಾದ ಕಮ್ಯು ಮತ್ತು ಇತರರು ಪ್ರೀತಿಯಿಂದ ಕರೆಯುತ್ತಿದ್ದ ಅವರ ಜೀವನ, ಕಾರ್ಯಶೈಲಿ ಎಲ್ಲಾ ಕಮ್ಯುನಿಸ್ಟರಿಗೆ ಪಥಪ್ರದರ್ಶನ ಕಮ್ಯುನಿಸ್ಟರ ನೆನಪಿಗೆ ಗೌ
ಈ ಸಮರ್ಪಿತ ಮಾರ್ಕ್ಸ್‌ವಾದಿ, ಉತ್ಕೃಷ್ಟ ಸಂಘಟಕ ಹಾಗೂ ಸ್ಫೂರ್ತಿದಾಯಕ ಮುಖಂಡರ ರಾಜಕೀಯ ಯವರು "ದಿ ಮಾರ್ಕ್ಸಿಸ್ಟ್"ನ ಇತ್ತೀಚಿನ ಸಂಚಿಕೆಯಲ್ಲಿ ನೀಡಿದ್ದಾರೆ. ಆ ಲೆ

ಜನತೆಯನ್ನು ಬೂರ್ಜ್ವಾ-ಭೂಮಾಲಕ ವರ್ಗ ಆಳ್ವಿಕೆಯಿಂದ

ಕಾಮ್ರೇಡ್ ಮುಝುಫ್ಫರ್ ಅಹಮದ್‌ರ ಜೀವನ ಚರಿತ್ರೆಯನ್ನು ಅವಲೋಕಿಸುವುದೆಂದರೆ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನ ಮೊಳಕೆಯೊಡೆಯುತ್ತಿದ್ದ ನಂತರ ಬದುಕುಳಿಯಲು, ವಿಸ್ತಾರಗೊಳ್ಳಲು ಅದು ನಡೆಸಿದ ಹೋರಾಟದ, ಅನನ್ಯ ತ್ಯಾಗದ ವೀರಗಾಥೆಗಳ ಕಾಲಾವಧಿಯ ಇತಿಹಾಸವನ್ನು ಅವಲೋಕಿಸಿದಂತೆ. ಅದೇ ವೇಳೆಗೆ ಅದು ಅತ್ಯಂತ ವಿಷಮ ಪರಿಸ್ಥಿತಿಗಳಲ್ಲೂ ತನ್ನ ಬಾಳಿನುದ್ದಕ್ಕೂ ಮಾರ್ಕ್ಸ್‌ವಾದ ಲೆನಿನ್‌ವಾದದ ಸೈದ್ಧಾಂತಿಕ ಪತಾಕೆಯನ್ನು ಸದಾ ಎತ್ತಿ ಹಿಡಿದ ಯಾವುದೇ ಆಸೆ ಆಮಿಷಗಳಿಗೆ ಬಲಿಬೀಳದ ಕಮ್ಯುನಿಸ್ಟನೊಬ್ಬನ ಕಥೆ ಕೂಡಾ; ದೇಶ ಗುಲಾಮ ಸ್ಥಿತಿಯಲ್ಲಿದ್ದಾಗ, ಜನತೆಗೆ ಯಾವ ಹಕ್ಕುಗಳೂ ಇಲ್ಲದಿದ್ದ ಪರಿಸ್ಥಿತಿಯಲ್ಲಿ ಕೆಲಸ ಆರಂಭಿಸಿದ ಒಬ್ಬ ಕಮ್ಯುನಿಸ್ಟ್ ಪಥಪ್ರದರ್ಶಕನ ಅಸಾಮಾನ್ಯ ಸಮರ್ಪಣಾ ಭಾವದ ಕಥೆಯೂ ಕೂಡಾ.

ಮುಝುಫ್ಫರ್ ಅಹ್ಮದ್ 1889 ರ ಆಗಸ್ಟ್ 5 ರಂದು ಬಂಗಾಳದ ಮುಸ್ಲಿಂ ಕುಟುಂಬವೊಂದರಲ್ಲಿ ಕೊನೆಯ ಮಗನಾಗಿ ಹುಟ್ಟಿದರು. ಅವರ ತಂದೆ ಬಂಗಾಳಿ ಶಾಲೆಗೆ ಹೋಗುವುದು ಸಾಧ್ಯವಾಗಿರಲಿಲ್ಲ. ಆದರೆ "ಮುಕ್ತಿಯಾರ್" ಪರೀಕ್ಷೆಯನ್ನು ಪಾಸು ಮಾಡಿ ಕೋರ್ಟಿನಲ್ಲಿ ವಾದಿಯಾದರು. ಚಿಕ್ಕ ಮುಝುಫ್ಫರ್ 1902ರಲ್ಲಿ ಶಾಲೆ ಬಿಡಬೇಕಾಯಿತು. ಕಾರಣ ತಂದೆ ಆ ದಿನಗಳಲ್ಲಿನ ಅತ್ಯಲ್ಪ ಶಾಲಾ ಶುಲ್ಕವನ್ನೂ ಭರಿಸುವ ಸ್ಥಿತಿಯಲ್ಲಿರಲಿಲ್ಲ.

ದಲ್ಲಿಯೇ ಬಂಗಾಳಿ ಕಲಿತರು. ಈ ಬಂಗಾಳಿ ಕಲಿಕೆ ಅವರಲ್ಲಿ ಇಂಗ್ಲೀಷ್ ಕಲಿಯುವ ಆಸಕ್ತಿಯನ್ನೂ ಉಂಟು ಮಾಡಿತ.

ಪುನರುತ್ಥಾನವಾದಕ್ಕೆ ವಿರೋಧ

ಮುಝುಫ್ಫರ್ ಅಹ್ಮದ್ ಸಾರ್ವಜನಿಕ ಜೀವನಕ್ಕೆ ಬಂದದ್ದು ಮತ್ತು ಅಲ್ಲಿಂದ ಅವರು ಕಮ್ಯೂನಿಷ್ಟರಾದದ್ದು ಬಹಳ ವಿಶಿಷ್ಟ ರೀತಿಯಲ್ಲಿ. ಅಂದಿನ ದಿನಗಳಲ್ಲಿ, ಅಂದರೆ 1920ರ ಸುಮಾರು-ಕಮ್ಯೂನಿಷ್ಟರಾದವರೆಲ್ಲ ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿಯ ಮೂಲಕ ಕಮ್ಯೂನಿಸಂನತ್ತ ತಿರುಗಿದರು. ಆದರೆ ಮುಝುಫ್ಫರ್ ಇದಕ್ಕೆ ಹೊರತು. ಬಂಗಾಳದಲ್ಲಿಯ ವಿಭಜನಾ ವಿರೋಧಿ ಮತ್ತು ಭಯೋತ್ಪಾದಕ ಚಳುವಳಿಗಳ ಜೊತೆಗೆ ಅವರ ತೊಂದರೆಗಳು ಪ್ರಾರಂಭವಾದವು. ಅಂದಿನ ಸಂದರ್ಭದಲ್ಲಿ ಪ್ರಚಲಿತವಿದ್ದ ರಾಷ್ಟ್ರೀಯ ಮತ್ತು ಬ್ರಿಟಿಷ್ ವಿರೋಧಿ ಚಳುವಳಿಗಳೊಡನೆ ಒಬ್ಬ ಧರ್ಮನಿಷ್ಠ ಮುಸ್ಲಿಂ ಯುವಕ ತನ್ನನ್ನು ತಾನು ಗುರುತಿಸಿ ಕೊಳ್ಳುವಲ್ಲಿ ಇದ್ದ ತೊಂದರೆಗಳು ಅವಾಗಿದ್ದವು. ಅವರೇ ಬರೆದಿರುವಂತೆ "ಬಂಗಾಳದಲ್ಲಿ ಭಯೋತ್ಪಾದಕ ಕ್ರಾಂತಿಕಾರಿಗಳ ಉಗಮ ಒಂದು ಸ್ಮರಣೀಯ ಘಟನೆ. ಬಂಕಿಮ ಚಂದ್ರ ಚಟ್ಟೋಪಾಧ್ಯಾಯರ 'ಆನಂದ ಮಠ'ದಿಂದ ಪ್ರಭಾವಿತರಾಗಿದ್ದರು. ಈ ಪುಸ್ತಕ ಪ್ರಾರಂಭದಿಂದ ಕೊನೆಯವರೆಗೂ ಕೋಮು ವಿದ್ವೇಷದಿಂದ ಕೂಡಿತ್ತು. ಬಂಕಿಮ ಚಂದ್ರರ ಮೂಲಭೂತ ಸಂದೇಶ ಅವರ 'ವಂದೇ ಮಾತರಂ' ಪದ್ಯದಲ್ಲಿತ್ತು.

ನೀನು ಜನರ ತೋಳುಗಳ ಶಕ್ತಿ,
ನೀನು ಹೃದಯಗಳೊಳಗೆ
ಬಲವಾಗಿ ಮೆರೆವೆ.
ಕೀರ್ತಿಯಿಂದ ಕೀರ್ತಿಗೆ
ನಿನ್ನದು ಓ ದೇವಿ,
ಹತ್ತು ದುರ್ಗೆಯರ ಬಲ.....

ತೊಂದರೆಯೇನೂ ಇಲ್ಲವಲ್ಲ!

ಬಂಗಾಳೀ ವರ್ಷ ೧೨೯೬ರ ಶ್ರಾವಣ ತಿಂಗಳ ಒಂದು ಸೋಮವಾರ ನಾನು ಮೇಘನಾ ನದಿಯ ಎದುರು ಸಾಗರದಲ್ಲಿ ತೇಲುತ್ತಿರುವ ಸಂದ್ವೀಪ ಎಂಬ ಸಣ್ಣ ದ್ವೀಪದ ಮುಸಾಪುರ ಗ್ರಾಮದಲ್ಲಿ ಹುಟ್ಟಿದೆ. ತುಂಬಾ ಬಡವರಾದ್ದರಿಂದ ನಮ್ಮ ಕುಟುಂಬ ಎಂದೂ ನನ್ನ ಜನ್ಮ ದಿನ ಆಚರಿಸಿಲ್ಲ. ಆದ್ದರಿಂದ ನನ್ನ ನಿಕರವಾದ ಜನ್ಮ ದಿನಾಂಕ ನನಗೆ ತಿಳಿದಿಲ್ಲ. ನನ್ನ ತಾಯಿಯಿಂದ ಕೇಳಿರುವುದನ್ನು ನೆನಪಿಸಿಕೊಳ್ಳುತ್ತಿದ್ದೇನಷ್ಟೇ. ಗುಪ್ತಾ ಪ್ರೆಸ್ ಪಂಜಿಕಾ (ಪಂಚಾಂಗ)ವನ್ನು ಪರಿಶೀಲಿಸಿದಾಗ ೧೨೯೬ರಲ್ಲಿ ೭ನೇ, ೧೪ನೇ, ೨೧ನೇ ಹಾಗೂ ೨೮ನೇ ದಿನಗಳು ಸೋಮವಾರವಾಗಿದ್ದವೆಂದು ತಿಳಿಯಿತು. ಕ್ರಿಶ್ಚಿಯನ್ ಗಣತಿಯಲ್ಲಿ ಇದು ೧೮೮೯ರ ಜುಲೈ ೨೨, ೨೯, ಆಗಸ್ಟ್ ೫ ಮತ್ತು ೧೨ ಆಗುತ್ತದೆ. ಈ ನಾಲ್ಕು ದಿನಗಳಲ್ಲಿ ಯಾವುದು ನನ್ನ ಸರಿಯಾದ ಜನ್ಮ ದಿನ ಎಂದು ತಿಳಿಯಲು ಈಗ ಸಾಧ್ಯವಿಲ್ಲ. ಆಗಸ್ಟ್ ೫, ೧೮೮೯ ನನ್ನ ಜನ್ಮ ದಿನವೆಂದು ನಿರ್ಧರಿಸಿದೆ. ಇದು ಅಷ್ಟೊಂದು ನಿಖರವೆಂದು ಹೇಳಲಾಗದು. ಆದರಿಂದ ತೊಂದರೆಯೇನೂ ಇಲ್ಲವಲ್ಲ!

—ಮುಝುಫ್ಫರ್ ಅಹಮದ್

"ನಾನು ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ" ಗ್ರಂಥದಿಂದ.

ಆಂಗ್ಲ ಭಾಷೆಯನ್ನು ಕಲಿಯುವ ಉತ್ಕಟೇಚ್ಛೆಯಿಂದ ಮುಝುಫರ್ ಪಕ್ಕದ ಜಿಲ್ಲೆಗೆ ಹೋದರು. ಅವರ ಅಣ್ಣ ಅವರನ್ನು ಶಾಲೆಗೆ ಕಳುಹಿಸುವ ಭರವಸೆ ನೀಡಿ ವಾಪಸ್ಸು ಕರೆತಂದರು. ಹೀಗೆ ಭವಿಷ್ಯತ್ತಿನ ಕಮ್ಯೂನಿಷ್ಟ್ ಚಳುವಳಿಯ ನಾಯಕ 1906 ರಲ್ಲಿ, ಅಂದರೆ 16-17ನೇ ವಯಸ್ಸಿನಲ್ಲಿ ಕೆಳತರಗತಿಯೊಂದನ್ನು ಸೇರಿದರು. ಮುಝುಫ್ಫರೇ ಬರೆಯುವಂತೆ

" ಅದೃಷ್ಟವಶಾತ್ ನನ್ನ ಕ್ಲಾಸಿನ ಪುಟ್ಟ ಪುಟ್ಟ ಹುಡುಗರು ನನ್ನನ್ನ ಹೊರಗಟ್ಟದೆ, ಅವರೊಂದಿಗೆ ಕಲಿಯಲು ಬಿಟ್ಟರು. ಅವರು ನನ್ನನ್ನು ಸ್ವೀಕರಿಸಿದ್ದಕ್ಕೆ ಕಾರಣ, ನನ್ನ ಬಂಗಾಳಿ ಭಾಷೆಯ ಜ್ಞಾನ. 'ಅವರಿಗಿಂತ ಚೆನ್ನಾಗಿ ನನಗೆ ಬಂಗಾಳಿ ಗೊತ್ತಿತ್ತು." ನಾನು ಮದ್ರಸುದಲ್ಲಿರುವಾಗಲೂ ಬಂಗಾಳಿ ಕಲಿಕೆಯನ್ನು ಬಿಟ್ಟಿರಲಿಲ್ಲ..........."

ಬಂಗಾಳಿ ಜನರ (ಅವರು ಹಿಂದುಗಳೇ ಇರಲಿ ಮುಸ್ಲಿಮರೇ ಇರಲಿ) ಭಾಷೆಯಾದ ಬಂಗಾಳಿಯ ಪ್ರೇಮವೇ ಮುಝುಫ್ಫರ್‌ರನ್ನು ಮುಂದೆ ಸಾರ್ವಜನಿಕ ಜೀವನಕ್ಕೆಳೆ ತಂದಿತೆಂದು ಹೇಳಬಹುದು. ಮುಸ್ಲಿಂ ಸಂಪ್ರದಾಯ [illegible] ಕೊರಿದ ಅವರು ಮುಷ್ಟು[illegible]

ಈ ಸಾಲುಗಳ ಬಗ್ಗೆ ಬರೆಯುತ್ತ ಮುಝುಫ್ಫರ್ ಹೇಳುತ್ತಾರೆ.

" ಒಬ್ಬನೇ ದೇವರೆಂದು ನಂಬುವ ಮುಸ್ಲಿಂ ಯುವಕನೊಬ್ಬ ಈ ಪ್ರಾರ್ಥನೆಯನ್ನು ಹೇಗೆ ತಾನೇ ಉಚ್ಚರಿಸಿಯಾನು? ಯಾವುದೇ ಹಿಂದೂ ಕಾಂಗ್ರೆಸ್ ನಾಯಕ ಈ ಸಮಸ್ಯೆಯನ್ನು ಅರ್ಥಮಾಡಿ ಕೊಳ್ಳಲಾರ. ಭಯೋತ್ಪಾದಕ ಕ್ರಾಂತಿಕಾರಿ ಚಳುವಳಿ ಬಂಗಾಳದಲ್ಲಿ ಖಂಡಿತವಾಗಿಯೂ ಬ್ರಿಟಿಷ್ ವಿರೋಧಿಯಾಗಿತ್ತು. ಆದರೆ ಇದು ಹಿಂದೂ ಪುನರುತ್ಥಾನವಾದೀ ಚಳುವಳಿಯೂ ಆಗಿತ್ತು. ಅದರ ಉದ್ದೇಶ ಹಿಂದೂ ಆಡಳಿತವನ್ನು ಪುನಃ ಸ್ಥಾಪಿಸುವುದಾಗಿತ್ತು"

ಹೀಗೆ ಆರಂಭದ ದಿನಗಳಲ್ಲಿ ಬ್ರಿಟಿಷ್ ವಿರೋಧಿ ಚಳುವಳಿಗಳಿಂದ ಮುಸ್ಲಿಂ ಯುವಕರು ದೂರವಾಗಿರಲು ಈ ಪುನರುತ್ಥಾನವಾದೀ ಧೋರಣೆಗಳು ಕಾರಣವಾಗಿದ್ದವು. ಮೊದಲ ಹಂತಗಳಲ್ಲಿ ಅದು ಸಹಜವೇ ಆಗಿತ್ತು. ಪ್ರಾರಂಭಿಕ ದಿನಗಳ ಮುಸ್ಲಿಂ ಕ್ರಾಂತಿಕಾರಿಗಳೂ ಮುಸ್ಲಿಂ ಆಡಳಿತವನ್ನು ಪುನಃ ಸ್ಥಾಪಿಸುವ ವಿಚಾರವನ್ನೇ ಮಾಡಿದ್ದರು. ಈ ಬಗೆಗೂ ಮುಝುಫ್ಫರ್ ಬರೆದಿದ್ದಾರೆ. "ನಾನು ಭಯೋತ್ಪಾದಕ ಕ್ರಾಂತಿಕಾರಿ ಚಳುವಳಿಯನ್ನು ದ್ವೇಷಿಸುವುದಿಲ್ಲ. ಅದು ಧರ್ಮಾಂಧತೆಯಿಂದ ತುಂಬಿತ್ತು. ನಿಜ. ಮೊದ ಮೊದಲು ಮುಸ್ಲಿಮರೂ ಇದನ್ನೇ ಮಾಡಿದ್ದರು. ಮುಸ್ಲಿಂ ಆಡಳಿತದ ಪುನರ್‌ಸ್ಥಾಪನೆಯನ್ನೇ ಅವರೂ ಸಹ ಬಯಸಿದ್ದರು. ಆದರೆ ಮುಸ್ಲಿಮ್ ಚಳುವಳಿ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿತ್ತು ಅವರು ಸಶಸ್ತ್ರವಾಗಿ ಸಿಖ್ಖರ ಮತ್ತು ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಿದ್ದರು. ಅವರ ಈ ಹೋರಾಟದಲ್ಲಿ ರೈತರೂ ಭಾಗಿಗಳಾಗಿದ್ದರು. ಅವರ ತ್ಯಾಗಗಳೂ ದೊಡ್ಡದಾಗಿದ್ದವು".

ಹಿಂದೂ ಮತ್ತು ಮುಸ್ಲಿಂ ಹೋರಾಟಗಾರರಿಗೆ ಭೂತಕಾಲದತ್ತ ಒಲವು ತೋರುವ ಈ ರೀತಿ ಅನಿವಾರ್ಯವೇ ಆಗಿತ್ತು. ಮಾರ್ಕ್ಸ್‌ನೇ ಹೇಳಿರುವಂತೆ ಅಳಿದು ಹೋದ ಜನಾಂಗಗಳ ಎಲ್ಲಾ ಸಂಪ್ರದಾಯಗಳೂ ಬದುಕಿರುವ ಜನರ ಮನದಲ್ಲಿ ಸ್ವಪ್ನ ಪಿಶಾಚಿಯಂತೆ ತೂಗುತ್ತಿರುತ್ತದೆ. ಕ್ರಾಂತಿಕಾರಿ ಪ್ರಕ್ರಿಯೆಯ ಬಿಕ್ಕಟ್ಟಿನ ಸಂದರ್ಭದಲ್ಲಿ ಅವರು ಉದ್ವೇಗದಿಂದ ಭೂತಕಾಲದ ಶಕ್ತಿಗಳನ್ನೂ ಆಹ್ವಾನಿಸುತ್ತಾರೆ. ಇಂದಿನ ಹೊಸ ಪರಿಸ್ಥಿತಿಗೆ ಗೌರವಾರ್ಹತೆಯನ್ನು ತಂದು ಕೊಡಲು ಆ ಕಾಲದ ಹೆಸರುಗಳು ವಸ್ತ್ರಗಳು, ಯುದ್ಧ ಘೋಷಣೆಗಳನ್ನು ಅವರು ಬಳಸುತ್ತಾರೆ.

ಆದರೆ ರಾಷ್ಟ್ರೀಯ ಹೋರಾಟ ಬೆಳೆದಂತೆಲ್ಲ ಪ್ರಜಾಪ್ರಭುತ್ವ ಬಲಿಯಿತು. ಸ್ವಾತಂತ್ರ್ಯ ಹೋರಾಟ, ಆಧುನಿಕ ಪ್ರಜಾಪ್ರಭುತ್ವ-ಇವು ಆದರ್ಶವಾಗಿ ಜನಮನ ಮುಟ್ಟಿದುವು.ಹಿಂದೂ ಅಥವಾ ಮುಸ್ಲಿಂ ಆಡಳಿತದ ಕಲ್ಪನೆ ಇನ್ನು ಸ್ವಾತಂತ್ರ್ಯ ಹೋರಾಟವನ್ನು ಮುಂದುವರೆಸುವ ಸಾಧ್ಯತೆ ಇರಲಿಲ್ಲ. ಆದರೆ ಪುನರುತ್ಥಾನವಾದ ಆಗೀಗ ಹಣಿಕಿ ಹಾಕುತ್ತಲೇ ಇತ್ತು. ನಮ್ಮ ಬೂರ್ಜ್ವಾ ನಾಯಕತ್ವ ಊಳಿಗಮಾನ್ಯ ಶಕ್ತಿಗಳೊಂದಿಗೆ ಮಾಡಿಕೊಂಡಿದ್ದ ರಾಜಿ ಇದಕ್ಕೆ ಕಾರಣವಾಗಿತ್ತು.

ಬಂಗಾಳದ ರಾಜಕೀಯ ಕೇಂದ್ರವಾದ ಕಲ್ಕತ್ತಕ್ಕೆ ಮುಝುಫ್ಫರ್ 1913 ರಲ್ಲಿ ಬಂದರು. ಹಿಂದೂ ಪುನರುತ್ಥಾನವಾದ ವಿರುದ್ಧದ ಅವರ ಬಂಡಾಯ ಅವರನ್ನು ದೇಶದಲ್ಲಿನ ಸಾಮಾನ್ಯ ಬೆಳವಣಿಗೆಗಳಿಂದ ದೂರ ಮಾಡಲಿಲ್ಲ. ಜನತೆಗೆ ಏನನ್ನಾದರೂ ಮಾಡಬೇಕೆಂಬ ತೀವ್ರ ಹಂಬಲ ಅವರಲ್ಲಿತ್ತು. ಮುಸ್ಲಿಂ ನೆರವಿನಿಂದ ಅವರು ಇನ್ನೂ ಪೂರ್ತಿ ಮುಕ್ತರಾಗಿರಲಿಲ್ಲ. ಆದರೆ ಬಂಗಾಳಿಭಾಷೆಯ ಪ್ರೇಮ, ಮುಸ್ಲಿಂ ಜೀವನದ ವಿವಿಧ ಮುಖಗಳನ್ನು ಹಿಂದೂಗಳಿಗೆ ತಿಳಿಯಪಡಿಸುವ ಆಕಾಂಕ್ಷೆ ಇವುಗಳೊಂದಿಗೆ ಅವರು 'ಬಂಗೀಯ ಮುಸಲ್ಮಾನ್ ಸಾಹಿತ್ಯ ಸಮಿತಿಯನ್ನು ಸೇರಿದರು.

ಅವರೇ ಮುಂದೆ ಬರೆದಂತೆ ಇದು ಕೋಮುವಾದಿ ಸಂಘಟನೆಯಾಗಿರಲಿಲ್ಲ. ಬಂಗೀಯ ಸಾಹಿತ್ಯ ಪರಿಷತ್‌ನ ಸ್ಪರ್ಧಿಯೂ ಆದಾಗಿರಲಿಲ್ಲ.ಈ ಸಂಘಟನೆಗೆ (ಅಂದರೆ ಬಂಗೀಯ ಮುಸಲ್ಮಾನ ಸಾಹಿತ್ಯ ಪರಿಷತ್‌ಗೆ) ವಿಶೇಷ ಗುರಿಯೊಂದಿತ್ತು. "ಅದೆಂದರೆ ಬಂಗಾಳಿಗಳಿಗೆ ಅದರಲ್ಲೂ ಹಿಂದೂಗಳಿಗೆ ಮುಸ್ಲಿಂ ನಾಗರೀಕತೆಯ ವಿವಿಧ ಮುಖಗಳನ್ನು ಪರಿಚಯಿಸುವುದಾಗಿತ್ತು. ಅನೇಕ ಬಂಗಾಳಿ ಹಿಂದೂಗಳು ಇದನ್ನು ಮುಸ್ಲಿಮರಿಂದ ಅಪೇಕ್ಷಿಸಿದ್ದರು".

ಸಾಹಿತ್ಯವೋ ರಾಜಕೀಯವೋ

ಇವೆಲ್ಲವೂ ಸರಿ. ಆದರೆ ದೇಶವನ್ನು ರಾಜಕೀಯ ಹೋರಾಟಗಳು ಅಲ್ಲಾಡಿಸುತ್ತಿದ್ದವು. ಮೊದಲನೇ ಮಹಾಯುದ್ಧ ಭಾರತೀಯರಿಗೆ ಅಪಾರ ನೋವನ್ನು ನೀಡಿತ್ತು. ಬಂಗಾಳದ ಕೆಲವು ಭಾಗಗಳಲ್ಲಿ ಬಟ್ಟೆಯ ಅಭಾವ ಎಷ್ಟು ತೀವ್ರವಾಗಿತ್ತೆಂದರೆ ತಮ್ಮ ಮೈ ಮುಚ್ಚಿಕೊಳ್ಳುವಷ್ಟೂ ಬಟ್ಟೆಯಿಲ್ಲದೇ ಎಷ್ಟೋ ಹೆಂಗಸರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು ಭಾರತ ಕುದಿಯತೊಡಗಿತ್ತು.ಜಲಿಯನ್ ವಾಲಾ ಬಾಗ್ ನರಮೇಧದ ನಂತರ ಬ್ರಿಟಿಷ್ ಆಡಳಿತದ ವಿರುದ್ಧ ಪ್ರಕ್ಷೋಭೆ ಸ್ಫೋಟಗೊಂಡಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ತನ್ನೆಲ್ಲ ಹಿಂಜರಿತಗಳನ್ನೂ ಕಳೆದುಕೊಳ್ಳುತ್ತ, ಎದುರಾದ ಅಡೆತಡೆಗಳನ್ನು ಮೀರಿ ಜನಸಾಮಾನ್ಯರ ಹೋರಾಟಗಳ ಭಾಗವಾಗಲು ಬಯಸಿದ ಯುವ ಉತ್ಸಾಹಿಯೊಬ್ಬನ ಜೀವನ ಗುರಿಯನ್ನು ಸಾಹಿತ್ಯ ಸಮಿತಿಯೊಂದು ಹೇಗೆ ನಿರ್ಧರಿಸೀತು?

" ನನ್ನ ಜೀವನದಲ್ಲಿ ರಾಜಕೀಯ ಮುಖ್ಯವಾಗಬೇಕೋ, ಸಾಹಿತ್ಯವೋ ಎಂಬುದನ್ನು ನಾನು 1919ರ ಇಡೀ ವರ್ಷ ಆಲೋಚಿಸಿದೆ. ನಿಜದಲ್ಲಿ ಸಾಹಿತ್ಯ ಮತ್ತು ರಾಜಕೀಯಗಳ ನಡುವೆ ದೊಡ್ಡ ಹೋರಾಟವೊಂದು ನನ್ನೊಳಗೆ ನಡೆಯುತ್ತಿತ್ತು. ಕೊನೆಯಲ್ಲಿ ರಾಜಕೀಯವೇ ಗೆದ್ದಿತು. ಯಾವುದಾದರೊಂದು ಮಹತ್ಕಾರ್ಯಕ್ಕೆ ನನ್ನನ್ನು ಸಮರ್ಪಿಸಿಕೊಳ್ಳಬೇಕೆಂಬ ನಿರ್ಧಾರವನ್ನು ನಾನಾಗಲೇ ಕೈಗೊಂಡಿದ್ದೆ. ಈ ಕಾರಣದಿಂದಲೇ ನಾನು 'ಬಂಗೀಯ ಮುಸಲ್ಮಾನ ಸಾಹಿತ್ಯ ಸಮಿತಿಯ ಪೂರ್ಣಾವಧಿ ಕಾರ್ಯಕರ್ತನಾಗಲು ಸಾಧ್ಯವಾಯಿತು. ರಾಜಕೀಯವನ್ನು ನನ್ನ ವೃತ್ತಿಯಾಗಿಸಿಕೊಳ್ಳಬೇಕೆಂದು 1920ರ ಪ್ರಾರಂಭದಲ್ಲಿಯೇ ನಾನು ನಿರ್ಧರಿಸಿದೆ. ಸಭೆ, ಧರಣಿ ಇತ್ಯಾದಿಗಳಲ್ಲಿ ಭಾಗವಹಿಸುವುದನ್ನು ನಾನು 1916ರಿಂದಲೇ ಪ್ರಾರಂಭಿಸಿದ್ದೆ..." ಎಂದು ಅವರೇ ಬರೆದಿದ್ದಾರೆ. ಸಾಹಿತ್ಯ ಮತ್ತು ರಾಜಕೀಯಗಳ ನಡುವೆ ನಡೆದ ಹೋರಾಟದಲ್ಲಿ ರಾಜಕೀಯವೇ ಗೆದ್ದಿತು.

ಜಲಿಯನ್‌ವಾಲಾಬಾಗ್‌ನ ನರಮೇಧದ ನಂತರ ಹಿಂದೂ ಮುಸ್ಲಿಂ ಒಗ್ಗಟ್ಟು ಬೆಳೆಯತೊಡಗಿತು. ಬ್ರಿಟಿಷರಿಗೆ ಇದು ಭಯ ಹುಟ್ಟಿಸಿತು. ಸಹಸ್ರ ಸಹಸ್ರ [illegible] ಧುಮುಕಿದರು. ಲಾಠಿ, ಜೈಲುಗಳ ಭಯತೊರೆದು ಬ್ರಿಟಿಷ್ ಕಾಯಿದೆಗಳ ಉಲ್ಲಂಘನೆ ಮಾಡಿದರು. ಆದರೆ ಮುಝುಫ್ಫರ್ ಈ ಪ್ರಕ್ಷೋಭೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಲಿಲ್ಲ. ಬಂಗಾಳ ಪ್ರಾದೇಶಿಕ ಖಿಲಾಫಾತ್ ಸಮಿತಿಯ ಸದಸ್ಯರನ್ನಾಗಿ ಅವರನ್ನು 1920ರಲ್ಲಿ ನೇಮಿಸಲಾಯಿತು. ಆದರೆ ಈ ಹುದ್ದೆಯನ್ನು ಅವರು ಸ್ವೀಕರಿಸಲಿಲ್ಲ. ಆದರೆ ಖಿಲಾಫತ್-ಅಸಹಕಾರ ಚಳುವಳಿಯ ಜಂಟೀ ಸಭೆಗಳಲ್ಲಿ ಅವರು ಭಾಗವಹಿಸಿದರು. ದುಡಿವ ಜನರಿಗಾಗಿ ರಾತ್ರಿ ಹೊತ್ತು ನಡೆವ ಸಭೆಗಳಲ್ಲೂ ಅವರು ಭಾಗವಹಿಸುತ್ತಿದ್ದರು.

ಮಾರ್ಕ್ಸ್‌ವಾದದತ್ತ

ರಾಜಕೀಯ ಸರಿ. ಆದರೆ ಎಂತಹ ರಾಜಕೀಯ? ಈ ಪ್ರಶ್ನೆ ಅವರನ್ನು ಕೆಣಕುತ್ತಿತ್ತು. ಈ ಸಮಯದಲ್ಲೇ ಅವರು ಆಕಸ್ಮಿಕವಾಗಿ ದುಡಿವ ಜನರ ಸ್ಥಿತಿಗತಿಯ ಸಂಪರ್ಕ ಪಡೆದರು. ಇದು ದುಡಿದ ಜನರ ಚಳುವಳಿಗಳಲ್ಲಿ ಅವರ ಆಸಕ್ತಿಯನ್ನು ಕೆರಳಿಸಿತು. ಪ್ರಾಮಾಣಿಕ ಕಳಕಳಿಯ ವ್ಯಕ್ತಿ ಮಾರ್ಕ್ಸ್‌ವಾದಿಯಾಗಲು ಬೇಕಾಗಿದ್ದ ಹಿನ್ನೆಲೆಯ ರಚನೆ ಆಗಲೇ ಪೂರ್ಣವಾಗಿತ್ತು. ಕಾಯಿ ಮಾಗಿ ಹಣ್ಣಾಗುವ ಸಂಕ್ರಮಣ ಕಾಲ ಮುಂದಿತ್ತು. ಅಂತಹ ಪರಿವರ್ತನೆಯ ಕಾಲದ ಬಗ್ಗೆ ಅವರ ಮಾತುಗಳಲ್ಲೇ ಹೇಳುವುದಾದರೆ

"ಬಂಗಾಳದಲ್ಲಿ ಆ ದಿನಗಳಲ್ಲಿ ನಡೆಯುತ್ತಿದ್ದ ಕಾರ್ಮಿಕರ ಮುಷ್ಕರ ಮತ್ತು ಇತರೇ ಚಳುವಳಿಗಳು ನನ್ನನ್ನು ತಟ್ಟದೇ ಹೋದವೆಂದು ಹೇಳುವಂತಿಲ್ಲ. 'ನವಯುಗ'ದ ಸಂಪಾದನೆಯ ಪ್ರಕ್ರಿಯೆಯಲ್ಲಿ ದುಡಿವ ಜನರ ಸಮಸ್ಯೆಗಳ ಬಗೆಗೆ ಆಸಕ್ತನಾದೆ. ಕಲ್ಕತ್ತದ ನಾವಿಕರ ಜೊತೆಗೆ ಒಡನಾಟವನ್ನೂ ನಾನು ಬೆಳೆಸಿಕೊಂಡಿದ್ದೆ. ಅವರೊಂದಿಗೆ ಚಳುವಳಿ ಹುಟ್ಟು ಹಾಕುವ ಉದ್ದೇಶವೇನೂ ನನಗೆ ಆಗ ಇರಲಿಲ್ಲ. ಆ ದಿನಗಳಲ್ಲಿ ನನ್ನ ಹುಟ್ಟು ಸ್ಥಳವಾದ ಸಂದ್ವೀಪ್‌ನ ಬಹಳ ಜನ ನಾವಿಕರಾಗಿ ದುಡಿಯುತ್ತಿದ್ದರು. ನನ್ನ ನಿಜವಾದ ಉದ್ದೇಶ ಈ ಜನಗಳನ್ನು ಸಂಪರ್ಕಿಸುವುದಾಗಿತ್ತು. ಆದರೆ ಈ ಪ್ರಕ್ರಿಯೆಯಲ್ಲಿ ನಾನು ನಾವಿಕರ ಸಮಸ್ಯೆಗಳಲ್ಲಿ ಆಸಕ್ತನಾದೆ. ಈ ನಾವಿಕರ ಬೇಡಿಕೆಗಳ ಬಗೆಗೆ 'ನವಯುಗ'ದಲ್ಲಿ ಸಾಕಷ್ಟು ಬರೆದೆ..."

ಈ ಸಂಪರ್ಕ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅವರ ಆಸಕ್ತಿ ಕೆರಳಿಸಿದ ನಂತರ ಅಂದರೆ 1912ರ ನವೆಂಬರ್‌ನಲ್ಲಿ-ಅಂದರೇ ಸುಮಾರು ಒಂದೂವರೆ ವರ್ಷಗಳ ನಂತರ-ಅವರು ಮಾರ್ಕ್ಸ್‌ವಾದೀ ಸಾಹಿತ್ಯದ ಸಂಪರ್ಕ ಪಡೆದರು. ಅಂದಿನ ದಿನಗಳಲ್ಲಿ ಮಾರ್ಕ್ಸ್‌ವಾದೀ ಸಾಹಿತ್ಯವನ್ನು ಬಹಿಷ್ಕರಿಸಲಾಗಿತ್ತು. ಕಾನೂನುಬಾಹಿರವಾಗಿ ಅವರು [illegible]

"ಬೋಲ್ಶೆವಿಕರು ರಾಜ್ಯಾಧಿಕಾರ ಉಳಿಸಿಕೊಳ್ಳಬಲ್ಲರೇ". "ಎಡ ಕಮ್ಯುನಿಸಂ ಮತ್ತು ಶೈಶವದ ಅವ್ಯವಸ್ಥೆ." "ಜನತೆಯ ಮಾರ್ಕ್ಸ್" ಮತ್ತು "ಕ್ಯಾಪಿಟಲ್"ನ ಸಂಕ್ಷಿಪ್ತ ಆವೃತ್ತಿ ಈ ಹೊತ್ತಿಗೆ ಮುಝಫ್ಫರ್ ಮುನ್ನಡೆವ ದಿಕ್ಕು ಸ್ಪಷ್ಟವಾಗಿತ್ತು. ಅವರು ಮುಂದೆಂದೂ ಮಾರ್ಕ್ಸ್‌ವಾದ ಲೆನಿನ್‌ವಾದದ ಪಥದಿಂದ ಬಹಳಕಾಲ ಕಮ್ಯುನಿಸಂನಲ್ಲಿ ತಮ್ಮ ನಂಬಿಕೆ ಕಾದುಕೊಳ್ಳುವುದು ಸಾಧ್ಯವಾಗಲಿಲ್ಲ. ಒಬ್ಬೊಬ್ಬರಾಗಿ ಅವರು ಪುನರುತ್ಥಾನವಾದದತ್ತ ಹಿಂದೆ ಸರಿದರು, ಅಥವಾ ಬೂರ್ಜ್ವಾ ರಾಜಕೀಯದತ್ತ ತಿರುಗಿದರು, ಪರಿಷ್ಕರಣವಾದಿಗಳಾದರು, ಅಥವಾ ಕಾಂಗ್ರೆಸ್ ಅನುಯಾಯಿಗಳಾದರು.

...ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವಲ್ಲಿ ಅವರ ಕೊಡುಗೆಗೆ
...ತಪುರದಲ್ಲಿ ನಡೆದ ಸಿ.ಪಿ.ಐ. (ಎಂ)ನ 13ನೇ ಮಹಾಧಿವೇಶನ
... "ಕಾಕಾಬಾಬು" ಎಂದು ಪಕ್ಷದ ಸಂಗಾತಿಗಳು, ಹಿತಚಿಂತಕರು
...ಕರ್ಣೀಯ ಮಾದರಿ ಎಂದು ಮಹಾಧಿವೇಶನ ಈ ಧೀಮಂತ
...ು.
...ತ್ರವನ್ನು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾಂ.ಬಿ.ಟಿ.ರಣದಿವೆ
...ವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

...ೀವನ ಸಂದೇಶ

...ಹೋರಾಟದಲ್ಲಿ ಸ್ಫೂರ್ತಿಯ ಸೆಲೆ

ಹಿಂದಿರುಗಿ ನೋಡಲಿಲ್ಲ.

ಒಬ್ಬ ನಿಷ್ಠಾವಂತ ಮುಸ್ಲಿಂ ಹುಡುಗ, ಹಿಂದೂ ಪುನರುತ್ಥಾನವಾದಿ ಭಾವನೆಗಳಿಂದಾಗಿ ದೂರನಿಂತವ, ಜನತೆಯ ಸೇವೆ ಮಾಡುವ ಸಮಾಧಾನವನ್ನು ಸಾಹಿತ್ಯದಲ್ಲಿ ಕಂಡಾತ, ಮುಸ್ಲಿಂ ಸಂಸ್ಕೃತಿಯನ್ನು,ಸಮಸ್ಯೆಗಳನ್ನುಹಿಂದೂಗಳಿಗೆ ವಿವರಿಸಿದರೆ ಹಿಂದೂ-ಮುಸ್ಲಿಂ ಐಕ್ಯತೆಯ ತನ್ನ ಗುರಿಸಾಧನೆಗೆ ದುಡಿದಂತೆ ಎಂದು ಭಾವಿಸಿದಾತ, ಖಿಲಾಫತ್ ಪುನರುತ್ಥಾನವಾದದೊಂದಿಗೆ ತನ್ನನ್ನು ಗುರುತಿಸಿಕೊಳ್ಳಲಾರದ ಹುಡುಗನೊಬ್ಬ ಈಗ ಒಂದು ಸರಿಯಾದ ರಾಜಕೀಯ ಕಂಡುಕೊಂಡ; ಭಾರತೀಯ ಸಮಾಜವನ್ನು ರೂಪಿಸುತ್ತಿದ್ದ ಹೊಸ ಪ್ರಭಾವಗಳನ್ನು ರಕ್ತಗತ ಮಾಡಿಕೊಂಡ, ಒಂದು ಬಡಕುಟುಂಬದಿಂದ ಬಂದ ಯುವಕನಿಗೆ ಸೂಕ್ತವಾದ ರಾಜಕೀಯ ಕಂಡುಕೊಂಡ.

ಇದು ಕೂಡಾ ಹತ್ತೊಂಭತ್ತನೇ ಶತಮಾನ ಅಂತ್ಯಗೊಳ್ಳುವ ಮೊದಲು ಹುಟ್ಟಿದ ಮುಸ್ಲಿಂ ಯುವಕರು ಸರ್ವಸಾಮಾನ್ಯ ರಾಷ್ಟ್ರೀಯ ಹೋರಾಟವನ್ನು ಸೇರುವಲ್ಲಿ ಎದುರಿಸ ಬೇಕಾದ ಅಪಾರ ಕಷ್ಟಗಳನ್ನು ಸರಿಯಾಗಿ ಬಿಂಬಿಸುವುದಿಲ್ಲ. ಪ್ರಜಾಸತ್ತಾತ್ಮಕ ದೃಷ್ಟಿಕೋನ ಮತ್ತು ಜಾತ್ಯತೀತ ಐಕ್ಯತೆಗೆ ವಿರುದ್ಧವಾದ ಪ್ರತಿಬಂಧನೆಗಳನ್ನು,ಮಿತಿಗಳನ್ನು ಹಿಂದೂ ಪುನರುತ್ಥಾನವಾದದ ರೂಪದಲ್ಲಿ

> ಕಾಮ್ರೇಡ್ ಮುಝಫ್ಫರ್ ಅಹಮ್ಮದ್‌ರವರಿಗೆ ಜೀವನ ಎಂಬುದು ಬ್ರಿಟಿಶ್ ಜೈಲಿನಿಂದ, ಜೈಲಿಗೆ ಅನಂತ ಮೆರವಣಿಗೆಯಾಗಿತ್ತು. ಸುಮಾರು ಎರಡು ದಶಕಗಳನ್ನು ಅವರು ಜೈಲುಗಳಲ್ಲಿ ಕಳೆದಿರಬೇಕು.

ವ್ಯಕ್ತಗೊಳ್ಳುತ್ತಾ ಮುಸ್ಲಿಂ ಯುವಕರು ಅಪಾರ ಸಂಖ್ಯೆಯಲ್ಲಿ ಈ ಪ್ರವಾಹವನ್ನು ಸೇರುವಲ್ಲಿ, ದೊಡ್ಡ ಅಡ್ಡಿಯಾಗಿದ್ದ ಕಾಲದಲ್ಲಿ, ಜಾತ್ಯತೀತತೆಯ ಸೊಲ್ಲೆತ್ತುವುದು ಕೂಡಾ ಅಕ್ಷಮ್ಯ ಅಪರಾಧವಾಗಿದ್ದ ಆ ಕಾಲದಲ್ಲಿ, ಚಾರಿತ್ರಿಕ ಭೌತವಾದದತ್ತ, ಕಮ್ಯುನಿಸಮ್ಮಿನತ್ತ ಮುನ್ನಡೆಯುವುದು ಕೇವಲ ಮುಝಫ್ಫರ್ ಮತ್ತು ಅಬ್ದುಲ್ ಹಲೀಂ, ಫಿರೋಜುದ್ದೀನ್ ಮನ್ಸೂರ್‌ರಂತಹ ಕೆಲವೇ ಮಂದಿ [illegible]

ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ.

ಸರಿಯಾದ ಪಥದ ಆಯ್ಕೆಯಾದ ಮೇಲೆ ಮುಝಫ್ಫರ್ ಕಮ್ಯುನಿಸ್ಟ್ ಪಕ್ಷಕಟ್ಟುವಲ್ಲಿ ತೊಡಗಿದರು. ಇದರಲ್ಲಿ ಮುಝಫ್ಫರ್ ಮತ್ತು ಇತರ ಪಥ ಪ್ರದರ್ಶಕರು ಅಸಾಧ್ಯ ಕಷ್ಟಗಳನ್ನು ಎದುರಿಸಬೇಕಾಯಿತು.

ಈ ದಿಸೆಯಲ್ಲಿ ಯಾವುದೇ ಅನುಭವದ ಹಿನ್ನೆಲೆ ಅವರಿಗಿರಲಿಲ್ಲ. ಆಗಾಗ ಹೊರದೇಶದಿಂದ ಬರುವ ಮಾರ್ಗದರ್ಶನಬಿಟ್ಟರೆ ಇನ್ನಾವುದೇ ಮಾರ್ಗದರ್ಶನ ಅವರಿಗಿರಲಿಲ್ಲ. ಭಾರತಿಯ ಸಮಾಜದ ವರ್ಗ ವಿಶ್ಲೇಷಣೆ, ಹೋರಾಟಗಳಲ್ಲಿ ಅನಸರಿಸಬೇಕಾದ ತಂತ್ರ ಇವುಗಳನ್ನು ನಿರ್ಧರಿಸಬೇಕಾಗಿತ್ತು. ಸ್ಫೂರ್ತಿಯ ಸೆಲೆಯಾದ ಅಕ್ಟೋಬರ್ ಕ್ರಾಂತಿಯ ಬಗೆಗೂ ಹೆಚ್ಚಿನ ಅರಿವು ಇರಲಿಲ್ಲ. ಇಂತಹ ನೂರಾರು ತೊಡಕುಗಳಿದ್ದವು. ಪಕ್ಷದ ರಚನೆ ಒಂದೇ ಕೇಂದ್ರದಿಂದ ಪ್ರಾರಂಭವಾಗಲಿಲ್ಲ. ಏಕ ಕಾಲದಲ್ಲಿ ನಾಲ್ಕು ಕೇಂದ್ರಗಳಲ್ಲಿ ಇದು ಪ್ರಾರಂಭವಾಯಿತು. ಕಲ್ಕತ್ತ, ಮುಂಬೈ, ಲಾಹೋರ್ ಮತ್ತು ಮದ್ರಾಸ್ ಇವೇ ಆ ನಾಲ್ಕು ಕೇಂದ್ರಗಳು.

ಮುಝಫ್ಫರ್ ಭಾರತೀಯ ಕಮ್ಯುನಿಷ್ಟ್‌ಪಕ್ಷ 17, ಅಕ್ಟೋಬರ್ 1920 ರಲ್ಲಿ ಸೋವಿಯತ್ ಯೂನಿಯನ್‌ನ ತಾಷ್ಕೆಂಟನಲ್ಲಿ ಪ್ರಾರಂಭವಾಯಿತು ಎಂದು ಒತ್ತಿ ಹೇಳುತ್ತಾರೆ. ಅವರ ಸಮಕಾಲೀನರಲ್ಲಿ ಬಹುಮಂದಿಯ ಅಭಿಪ್ರಾಯದಿಂದ ಇದು ಭಿನ್ನವಾಗಿದೆ. ಈ ಘಟನೆಯೊಂದಿಗೆ ಅವರಿಗೆ ನೇರ ಸಂಬಂಧವಿರದಿದ್ದರೂ ಈ ಘಟನೆ ಅವರ ಮತ್ತು ಇತರೆ ಸಂಗಾತಿಗಳ ಮೇಲೆ ಬಹಳ ಪ್ರಭಾವ ಬೀರಿತು.

ಪಿತೂರಿ ಮೊಕದ್ದಮೆಗಳು

ಪಕ್ಷದ ಕಾರ್ಯಕ್ರಮ ಮತ್ತು ಅದರ ಪ್ರಭಾವ ಕಾನಪುರ ಸಂಚಿನ ಮೊಕದ್ದಮೆ ಹೂಡಲು ಬ್ರಿಟಿಷ್ ಸರ್ಕಾರವನ್ನು ಪ್ರೇರೇಪಿಸಿತು. ಈ ಮೊಕದ್ದಮೆಯನ್ನು ಬೋಲ್ಶೆವಿಕ್ ಮೊಕದ್ದಮೆ ಎಂದೂ ಕರೆಯಲಾಯಿತು. ನಾಲ್ಕು ಮಂದಿಯನ್ನು ಅಂತಿಮವಾಗಿ ಅಪಾದಿತರೆಂದು ಗುರುತಿಸಲಾಯಿತು. ಅವರೆಂದರೆ ಮುಝಫರ್ ಅಹ್ಮದ್, ಡಾಂಗೆ, ಶೌಕತ್ ಉಸ್ಮಾನಿ ಮತ್ತು ನಳಿನಿ ಗುಪ್ತಾ. ಅಪಾದಿತರಿಗೆ ನಾಲ್ಕು ವರ್ಷಗಳ ಶಿಕ್ಷೆ ವಿಧಿಸಲಾಯಿತು. ಈ ಮೊಕದ್ದಮೆ ಸಾಮ್ರಾಜ್ಯಶಾಹಿಗಳ ನೇರ [illegible]

ಕರು ಕಮ್ಯುನಿಸ್ಟ್ ಆಂದೋಲನ ನೇರ ದಂತೆ ತಡೆಯುವುದು, ಜನತೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳನ್ನು ಹೆದರಿಸುವುದು ಮತ್ತು ಅವರು ಕಮ್ಯುನಿಸ್ಟ್ ದ್ವೇಷಿಗಳಾಗುವಂತೆ ಮಾಡುವುದು, ರಾಷ್ಟ್ರೀಯ ಆಂದೋಲನದಲ್ಲಿ ಕಮ್ಯುನಿಸ್ಟರ ವಿರುದ್ಧ ಪೂರ್ವಾಗ್ರಹ ಉಂಟುಮಾಡುವುದು ಇದರ ಉದ್ದೇಶವಾಗಿತ್ತು. ಆದ್ದರಿಂದ ಉದ್ದೇಶ ಪೂರ್ವಕವಾಗಿಯೇ ಇದನ್ನು ಬೋಲ್ಶೆವಿಕ್ ಪಿತೂರಿ ಮೊಕದ್ದಮೆ ಎಂದು ಹೆಸರಿಸಲಾಯಿತು. ಸ್ವಲ್ಪ ಸಮಯದಲ್ಲೇ ಸಾಮ್ರಾಜ್ಯಶಾಹಿಗಳು ಒದಗಿಸಿದ ಪದಪುಂಜಗಳನ್ನೇ ದೇಶದ ಕೈಗಾರಿಕಾ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ರಾಷ್ಟ್ರೀಯ ಮುಖಂಡತ್ವದ ಒಂದು ವಿಭಾಗ ಬಳಸಿಕೊಂಡು ಕಮ್ಯುನಿಸ್ಟರನ್ನು ಮಾಸ್ಕೋ ಏಜಂಟರೆಂದು ಜರೆಯಲಾರಂಭಿಸಿತು.

ಈ ಮೊಕದ್ದಮೆಯಲ್ಲಿ ವಿಧಿಸಿದ ವಿಪರೀತ ಶಿಕ್ಷೆಯಿಂದಾಗಿ ಅಪಾದಿತರ ಆರೋಗ್ಯ ಕೆಟ್ಟಿತು. ವಿಶೇಷವಾಗಿ ಮುಝಫ್ಫರ್‌ರವರ ಮೇಲೆ ತೀವ್ರ ದುಷ್ಪರಿಣಾಮ ಉಂಟಾಯಿತು. ಅವರು ಕ್ಷಯರೋಗಕ್ಕೆ ತುತ್ತಾದರು. ಸರಕಾರ ನಿರ್ವಾಹವಿಲ್ಲದೆ ಅವರನ್ನು ಬಿಡುಗಡೆಗೊಳಿಸಬೇಕಾಯಿತು.

ಬಿಡುಗಡೆಯಾಗಿ ಹೊರಬರುತ್ತಿದ್ದಂತೆ ಕಾಮ್ರೇಡ್ ಮುಝಫ್ಫರ್ ಪಕ್ಷ ಕಟ್ಟುವ ಕೆಲಸದಲ್ಲಿ, ಸಾಮೂಹಿಕ ಚಟುವಟಿಕೆಗಳಲ್ಲಿ ವ್ಯಸ್ತರಾದರು. ಸಿ.ಪಿ.ಐ. ಮತ್ತು ರೈತ-ಕಾರ್ಮಿಕ ಪಕ್ಷದ ಪರವಾಗಿ ಕಾರ್ಮಿಕ ಆಂದೋಲನದಲ್ಲಿ, ಮುಷ್ಕರಗಳಲ್ಲಿ ಭಾಗವಹಿಸಿದರು. 1927ರ ಅಂತ್ಯ, 1928 ಮತ್ತು 1929ರ ಮೊದಲ ಭಾಗದಲ್ಲಿ ಕಲ್ಕತ್ತಾ ಮತ್ತು ಸುತ್ತಮುತ್ತಲ ಎಲ್ಲಾ ಮುಷ್ಕರಗಳಲ್ಲಿ ಅವರ ಪಾತ್ರವಿತ್ತು. ರೈತರ ಹೋರಾಟಗಳನ್ನು ಸಂಘಟಿಸಿದರು. 1929ರಲ್ಲಿ ಭಾರತದ ಬ್ರಿಟಿಷ್ ಸರ್ಕಾರ ಕುಖ್ಯಾತ ಮೀರಠ್ ಮೊಕದ್ದಮೆ ಆರಂಭಿಸಿತು. ಬೆಳೆಯುತ್ತಿದ್ದ ಕಮ್ಯುನಿಸ್ಟ್ ಮತ್ತು ಎಡ ಆಂದೋಲನದಿಂದ ರಾಷ್ಟ್ರೀಯ ಮುಖಂಡತ್ವವನ್ನು ಬೇರ್ಪಡಿಸುವುದೇ ಇದರ ನಿರ್ದಿಷ್ಟ ಉದ್ದೇಶವಾಗಿತ್ತು. ಫಿರ್ಯಾದಿಯ ಮೊದಲ ಮಂಡನೆಯಲ್ಲೇ ಕಮ್ಯುನಿಸ್ಟರನ್ನು ದೇಶ-ವಿರೋಧಿಗಳು ಎಂದು ಹೇಳಲಾಗಿತ್ತು. ಮುಝಫ್ಫರ್ ಅಹ್ಮದ್ ಸೇರಿದಂತೆ ಒಟ್ಟು 31 ವ್ಯಕ್ತಿಗಳನ್ನು ಬಂಧಿಸಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಇವರಲ್ಲಿ ಅರ್ಧದಷ್ಟು ಮಂದಿ ಕಮ್ಯುನಿಸ್ಟರಲ್ಲ, ಎಡಪಂಥೀಯ ರಾಷ್ಟ್ರವಾದಿಗಳಾಗಿದ್ದರು.

> ಒಬ್ಬ ನಿಷ್ಠಾವಂತ ಮುಸ್ಲಿಂ ಹುಡುಗ, ಹಿಂದೂ ಪುನರುತ್ಥಾನವಾದೀ ಭಾವನೆಗಳಿಂದಾಗಿ ದೂರ ನಿಂತವ, ಜನತೆಯ ಸೇವೆ ಮಾಡುವ ಸಮಾಧಾನವನ್ನು ಸಾಹಿತ್ಯದಲ್ಲಿ ಕಂಡಾತ, ಮುಸ್ಲಿಂ ಸಂಸ್ಕೃತಿಯನ್ನು, ಸಮಸ್ಯೆಗಳನ್ನು ಹಿಂದೂಗಳಿಗೆ ವಿವರಿಸಿದರೆ ಹಿಂದೂ-ಮುಸ್ಲಿಂ ಐಕ್ಯತೆಯ ತನ್ನ ಗುರಿಸಾಧನೆಗೆ ದುಡಿದಂತೆ ಎಂದು ಭಾವಿಸಿದಾತ, ಖಿಲಾಫತ್ ಪುನರುತ್ಥಾನವಾದದೊಂದಿಗೆ ತನ್ನನ್ನು ಗುರುತಿಸಿಕೊಳ್ಳಲಾರದ ಹುಡುಗ ಒಂದು ಸರಿಯಾದ ರಾಜಕೀಯ ಕಂಡುಕೊಂಡ: ಒಂದು ಬಡಕುಟುಂಬದಿಂದ ಬಂದು, ಭಾರತೀಯ ಸಮಾಜವನ್ನು ರೂಪಿಸುತ್ತಿದ್ದ ಹೊಸ ಪ್ರಭಾವಗಳನ್ನು ರಕ್ತಗತ ಮಾಡಿಕೊಂಡ ಒಬ್ಬ ಯುವಕನಿಗೆ ಸೂಕ್ತವಾದ ರಾಜಕೀಯ ಕಂಡುಕೊಂಡ. ಇದು ಮುಝಫ್ಫರ್‌ರಂತಹ ಕೆಲವೇ ವ್ಯಕ್ತಿಗಳು ಸಾಧಿಸಬಹುದಾಗಿದ್ದ ಕೌತುಕ.

ದೇಶದಲ್ಲಿನ ಮತ್ತು ವಿಶ್ವದಲ್ಲಿನ ಹೊಸ ಸನ್ನಿವೇಶದಲ್ಲಿ ತಮ್ಮ ಗುರಿ, ಉದ್ದೇಶ, ಸಿದ್ಧಾಂತಗಳನ್ನು ಸಾರ್ವಜನಿಕವಾಗಿ ತಿಳಿಯಪಡಿಸಲು ಈ ವಿಚಾರಣೆಯನ್ನು ಬಳಸಿಕೊಳ್ಳಲು ಕಮ್ಯುನಿಸ್ಟ್ ಅಪಾದಿತರು ನಿರ್ಧರಿಸಿದರು.

ಮುಝಫ್ಫರ್ ಬ್ರಿಟಿಷ್ ಸರ್ಕಾರದ ಅಪಪ್ರಚಾರದ ವಿರುದ್ಧ ಈ ವಿಚಾರಣೆಯ ಸಮಯದಲ್ಲಿ ತೀವ್ರವಾಗಿ ಹೋರಾಡಿದರು. ಕಮ್ಯುನಿಸ್ಟ್ ಪಕ್ಷದ ಧ್ಯೇಯ-ಧೋರಣೆಗಳನ್ನು ವಿವರಿಸಿದರು: ವಿಶಾಲ ಜನ ಸಮೂಹಗಳ ರಾಜಕೀಯ ಹೋರಾಟದ ಮಹತ್ವವನ್ನು ಒತ್ತಿಹೇಳಿದರು.

"ಒಂದು ಅಧೀನ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮತ್ತು ಆರ್ಥಿಕ ಶೋಷಣೆಯಿಂದ ಕಾರ್ಮಿಕ ವರ್ಗದ ಮತ್ತು ರೈತರ ಹೋರಾಟ ಮಧ್ಯದ ನಿಕಟ [illegible]

ಸಮಯದಲ್ಲಿ ನಾವು ಎರಡು ಹೋರಾಟಗಳನ್ನು ನಡೆಸಬೇಕಾಗಿದೆ. ಇವೆನ್ನು ಪರಸ್ಪರ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಇವೆರಡೂ ಒಟ್ಟಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಮತ್ತು ಅದರ ಭಾರತೀಯ ಮಿತ್ರರಾದ ಭೂಮಾಲಿಕರು ಸ್ಥಳೀಯ ರಾಜರುಗಳು ಮತ್ತು ಬಡ್ಡಿಕೋರ ಲೇವಾದೇವಿಗಾರರಿಗೆ ಮರಣಾಂತಿಕ ಆಘಾತ ನೀಡುತ್ತದೆ" ಎಂದು ವಿಚಾರಣೆಯ ಸಮಯದಲ್ಲಿ, ಮುಝಫ್ಫರ್ ಹೇಳಿದರು.

ವಿಚಾರಣೆ ನಾಲ್ಕು ದೀರ್ಘವರ್ಷಗಳ ಕಾಲ ನಡೆಯಿತು. ಸೆಷನ್ಸ್ ನ್ಯಾಯಾಧೀಶರು ಅಪಾದಿತರಿಗೆ 1933ರಲ್ಲಿ ಬರ್ಬರ ಶಿಕ್ಷೆ ವಿಧಿಸಿದರು. ಕಾಂ.ಮುಝಫ್ಫರ್‌ರರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಲಾಯಿತು. ಜೀವಾವಧಿ ಗಡೀಪಾರು ಶಿಕ್ಷೆಯನ್ನು ಅವರು ಅನುಭವಿಸಬೇಕಾಗಿತ್ತು. ಸಾಮ್ರಾಜ್ಯಶಾಹಿ ನ್ಯಾಯಾಲಯ ಅವರನ್ನು ಕಮ್ಯುನಿಸ್ಟ್ ಚಳುವಳಿಯ ಮುಖ್ಯ ಹೋರಾಟಗಾರ ಎಂದು ಗುರುತಿಸಿತ್ತು ಎಂಬುದು ಇದರಿಂದ ವೇದ್ಯ.

ಈ ಕಠಿಣತಮ ಶಿಕ್ಷೆಯ ವಿರುದ್ಧ ಜಗತ್ತಿನಾದ್ಯಂತ ಪ್ರತಿಭಟನೆ ಮೂಡಿಬಂತು. ಒತ್ತಡಗಳಿಗೆ ಮಣಿದು ಸರ್ಕಾರ ಶಿಕ್ಷಾವಧಿಯನ್ನು ಮೊಟಕುಗೊಳಿಸ ಬೇಕಾಯಿತು. ಮುಝಫ್ಫರ್‌ರನ್ನು 1935ರಲ್ಲಿ ಬಿಡುಗಡೆ ಮಾಡಿ ಮತ್ತೆ ಬಂಧಿಸಲಾಯಿತು. ಪುನಃ ಅವರು 1936ರಲ್ಲಿ ಬಿಡುಗಡೆಯಾದರು. ಕೂಡಲೇ ಅವರು ಇಮ್ಮಡಿ ಉತ್ಸಾಹದಿಂದ ಕಮ್ಯುನಿಸ್ಟ್ ಚಟುವಟಿಕೆಗಳಲ್ಲಿ ತೊಡಗಿದರು. ಅವರ ಕನಸಾಗಿದ್ದ ಕಮ್ಯುನಿಸ್ಟ್ ಪಕ್ಷ ಆಗಲೇ ರಚನೆಯಾಗಿತ್ತು. ಅವರ ಕಾಲದ ಇತರ ಕಮ್ಯುನಿಸ್ಟರಂತೆ ಕಾಮ್ರೇಡ್ ಮುಝಫ್ಫರ್ ಅಹಮದ್‌ರಿಗೆ ಜೀವನವೆಂಬುದು ಬ್ರಿಟಿಷ್ ಜೈಲಿನಿಂದ, ಜೈಲಿಗೆ ಅನಂತ ಮೆರವಣಿಗೆಯಾಗಿತ್ತು. ಮುಝಫ್ಫರ್ ಸುಮಾರು ಎರಡು ದಶಕಗಳನ್ನು ಜೈಲಿನಲ್ಲಿ ಕಳೆದಿರಬೇಕು. ಮೀರಠ್ ಪಿತೂರಿ ಮೊಕದ್ದಮೆಯಲ್ಲಿ ಆರೂವರೆ ವರ್ಷ ಜೈಲುವಾಸದ ನಂತರ 1936ರಲ್ಲಿ ಬಿಡುಗಡೆಮಾಡಿ ಕ್ರಿಮಿನಲ್ ಕಾನೂನು ತಿದ್ದುಪಡಿ ಶಾಸನದ ಪ್ರಕಾರ ಮತ್ತೆ ಬಂಧನ ಆಜ್ಞೆ ಹೊರಡಿಸಲಾಯಿತು. ತಾನು ಕಮ್ಯುನಿಸ್ಟ್‌ನಾಗಿ ಆಗಲೇ ತನ್ನ ಚಟುವಟಿಕೆಗಳಿಗಾಗಿ ಜೈಲುವಾಸ ಅನುಸರಿಸಿರುವಾಗ ಈ ಶಾಸನದ ಪ್ರಯೋಗ ಸರಿಯಲ್ಲವೆಂದು ಸರಕಾರ ಆಜ್ಞೆಗೆ ಮುಝಫ್ಫರು ಸವಾಲು ಹಾಕಿದರು. ಬಂಗಾಳ ಸರಕಾರ ತಕ್ಷಣ ಅವರ ಬಿಡುಗಡೆಯ ಆಜ್ಞೆ ಹೊರಡಿಸಬೇಕಾಯಿತು.

ಕ್ರಾಂತಿಕಾರಿ ಪಕ್ಷ ಕಟ್ಟುವಲ್ಲಿ

ಆಗಸ್ಟ್, 1936 ರಲ್ಲಿ ಬಂಗಾಳ ಪೊಲೀಸರ ನಿಗಾದಿಂದ ತಪ್ಪಿಸಿಕೊಳ್ಳಲು ಆಗ ಫ್ರೆಂಚ್ ವಸಾಹತುವಾಗಿದ್ದ ಚಂದ್ರನಗರಕ್ಕೆ ಸ್ಥಳಾಂತರಿಸಿದರು. ಅಲ್ಲಿಯೂ ಫ್ರೆಂಚ್ ಪೊಲೀಸರಿಂದ ತಪ್ಪಿಸಿಕೊಂಡು ಭೂಗತರಾಗಿ ಕಾರ್ಮಿಕರೊಂದಿಗೆ ಸಂಪರ್ಕವಿಟ್ಟುಕೊಂಡು ಕಮ್ಯುನಿಸ್ಟ್ ಪ್ರಚಾರ ನಡೆಸಿದರು. ಈ ಸಮಯದಲ್ಲಿ ಮತ್ತು ನಂತರ ಅವರು ತಮ್ಮ ಚಟುವಟಿಕೆಗಳನ್ನು ಬಂಗಾಳಕ್ಕೆ ಸೀಮಿತ ಗೊಳಿಸಿದರೂ ಪಕ್ಷದ ಧೋರಣೆಯನ್ನು ಎಲ್ಲಾ ಕಡೆ ಜಾರಿಯುವ ಬಗ್ಗೆ ಸದಾ ಜಾಗೃತರಾಗಿರುತ್ತಿದ್ದರು.

ಕಿಸಾನ್ ಸಭಾ ಬೆಳೆಸುವಲ್ಲಿ ಅವರು ವಿಶೇಷ ಆಸಕ್ತಿವಹಿಸಿದರು. 1937ರ ಮಾರ್ಚ್‌ನಲ್ಲಿ ನಡೆದ ಬಂಗಾಳ ಪ್ರಾಂತ ಕಿಸಾನ್ ಸಭಾದ [illegible] ಅಧ್ಯಕ್ಷ ಮಂಡಳಿಯ ಸದಸ್ಯರಾಗಿದ್ದರು. ಆಗ ಬರೆದ ಅವರ ದೀರ್ಘ ಭಾಷಣ ನಂತರ "ಭಾರತದಲ್ಲಿ ರೈತರ ಸಮಸ್ಯೆ" ಎಂದು ಪ್ರಕಟವಾಯಿತು.

ಕಮ್ಯುನಿಸ್ಟರ ಮೀರಠ್ ಜೇಲಿನಿಂದ ನಂತರ ವಿಷಯದ ಮೇಲಿನ ಮೊದಲ ದಸ್ತಾವೇಜು ಇದು. ಬಂಗಾಳ ಕಿಸಾನ್ ಸಭಾದ ಎರಡನೇ ಮತ್ತು ಮೂರನೇ ಸಮ್ಮೇಳನದ ಅಧ್ಯಕ್ಷ ಮಂಡಳಿಗೂ ಅವರು ಚುನಾಯಿತರಾದರು. 1937 ರಲ್ಲಿ, ರಾಜಕೀಯ ಬಂದಿಗಳ ಬಿಡುಗಡೆಯ, ಅಂಡಮಾನ್‌ನಲ್ಲಿ ಬಂಧಿತರಾದ ಕ್ರಾಂತಿಕಾರಿಗಳನ್ನು ವಾಪಾಸು ಕರೆಸಿಕೊಳ್ಳಬೇಕೆಂಬ ಆಂದೋಲನದಲ್ಲಿ ಭಾಗವಹಿಸಿದರು. ಅಂಡಮಾನ್ ಬಂದಿಗಳು ಕೊನೆಯ ಬಾರಿ ಉಪವಾಸ ಸತ್ಯಾಗ್ರಹ ಮಾಡಿದಾಗ ಅದನ್ನು ವಾಪಸು ಪಡೆಯಲು ಆಗ್ರಹ ಪಡಿಸಲಾಯಿತು. ಆಗ ಅವರು ಈ ಮನವಿಯಲ್ಲಿ ಮುಝಫ್ಫರ್‌ರ ಸಹಿ ಇದ್ದರೆ ಮಾತ್ರ ತಾವು ಸತ್ಯಾಗ್ರಹ ನಿಲ್ಲಿಸುವುದಾಗಿ ಹೇಳಿದರು. 1938ರಲ್ಲಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಚುನಾಯಿತರಾಗಿ ಮುಝಫ್ಫರ್ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. ಸಾಮೂಹಿಕ ಚಟುವಟಿಕೆಗಳೊಂದಿಗೆ ಮುಝಫ್ಫರ್ ಪಕ್ಷ ಕಟ್ಟುವತ್ತ ಗಮನ ಕೇಂದ್ರೀಕರಿಸಿದರು. ಈ ಹಂತದಲ್ಲಿ ಅವರು ಬಂಗಾಳದಲ್ಲಿ ಒಂದು ಕಾನೂನು ಬದ್ಧ ಕಮ್ಯುನಿಸ್ಟ್ ಪಕ್ಷದ ಪ್ರತಿಪಾದಕರ ಭ್ರಮೆಗಳ ವಿರುದ್ಧ ಹೋರಾಡ ಬೇಕಾಯಿತು. ಜಿಲ್ಲೆಗಳಿಗೆ, ಗ್ರಾಮಗಳಿಗೆ ಪಕ್ಷದ ಜಾಲ ಹರಡಿಸಲು ಅವರು ನಿರ್ಧರಿಸಿದರು. ಅಂಡಮಾನ್‌ನಿಂದ ಮರಳಿದ ಹಲವಾರು ರಾಷ್ಟ್ರೀಯ ಕ್ರಾಂತಿಕಾರಿಗಳು ಇದರಲ್ಲಿ ಅವರಿಗೆ ನೆರವಾದರು. ಕಾಮ್ರೇಡ್ ಬಿನೋಯ್ ಕೃಷ್ಣ ಚೌಧುರಿ ಮತ್ತು ಕಾಮ್ರೇಡ್ ಹರೇ ಕೃಷ್ಣ ಕೋನಾರ್ ಮುಝಫ್ಫರ್‌ರ ಸಲಹೆಯಂತೆ ಜಿಲ್ಲೆಗಳಲ್ಲಿ ಪಕ್ಷದ ವಿಸ್ತರಣೆಗೆ ದುಡಿದವರು.

ಈ ಅವಧಿಯಲ್ಲೇ ಮುಝಫ್ಫರ್ ಪಕ್ಷದ ಪ್ರಕಟಣೆಗಳನ್ನು ಪಕ್ಷದ ಪತ್ರಿಕೆಗಳನ್ನು, ಮುದ್ರಣಾಲಯವನ್ನು ಸಂಘಟಿಸಿದರು. ಹಲವಾರು ವಾರಪತ್ರಿಕೆಗಳನ್ನು ಮಾಸಿಕಗಳನ್ನು ಆರಂಭಿಸಿದರು. 1937 ರಲ್ಲಿ 'ಗಣಶಕ್ತಿ' ಮಾಸಿಕವಾಗಿ ಪ್ರಕಟಣೆಗೆ ಆರಂಭವಾಯಿತು. ಮುಝಫ್ಫರ್ ಇದರ ಸಂಪಾದಕ ಮಂಡಳಿಯಲ್ಲಿದ್ದರು. 1939 ರಲ್ಲಿ ಕೆಲವು ಸಂಗಾತಿಗಳ ನೆರವಿನಿಂದ ಪಕ್ಷದ ಹತೋಟಿಯಲ್ಲಿ ನ್ಯಾಶನಲ್ ಬುಕ್ ಏಜೆನ್ಸಿ ಆರಂಭಿಸಿದರು. 1952 ರಲ್ಲಿ ಗಣಶಕ್ತಿ ಮುದ್ರಣಾಲಯ ಸ್ಥಾಪಿಸಿದರು. "ಒಂದು ಮುದ್ರಣಾಲಯ ಪತ್ರಿಕೆಗಳಿಲ್ಲದೆ ನಾನು ಬದುಕಲಾರೆ" ಎನ್ನುತ್ತಿದ್ದರು ಅವರು.

ಸಾಮ್ರಾಜ್ಯಶಾಹೀ ಯುದ್ಧ ಆರಂಭವಾದೊಡನೆ ಮುಝಫ್ಫರ್ ಇತರ ಪ್ರಮುಖ ಕಮ್ಯುನಿಸ್ಟ್ ಮುಖಂಡರೊಂದಿಗೆ ಮತ್ತೆ ಬಂಧಿತರಾದರು. ಎರಡೂವರೆ ವರ್ಷಗಳ ನಂತರವೇ ಬಿಡುಗಡೆ ಹೊಂದಿದರು. ಆಗ ಪಕ್ಷ ಕಾನೂನು ಬದ್ಧವಾಗಿತ್ತು. ಅದರ ಸಾಮೂಹಿಕ ನೆಲೆಯನ್ನು ಬಲಗೊಳಿಸಬೇಕಾಗಿತ್ತು. ಮುಝಫ್ಫರ್ ಮತ್ತೆ ಕಿಸಾನ್ ಸಭಾದ ಚಟುವಟಿಕೆಗಳಲ್ಲಿ ತೊಡಗಿದರು.

ಈ ಎಲ್ಲಾ ಸಮಯದಲ್ಲಿ ಅವರು ಪಕ್ಷದಲ್ಲಿ, ಕೇಂದ್ರ ಸಮಿತಿಯಲ್ಲಿ ಪ್ರಮುಖ ಸ್ಥಾನಗಳಲ್ಲಿ ಮುಂದುವರಿದಿದ್ದರು. 1943ರಲ್ಲಿ ಪಕ್ಷದ ಮೊದಲ ಮಹಾಧಿವೇಶನದ ಅಧ್ಯಕ್ಷ ಮಂಡಳಿಗೆ ಅವರು ಚುನಾಯಿತರಾದರು. 1948ರ ವರೆಗೆ ಹಲವು ಮಹಾಧಿವೇಶನಗಳಲ್ಲಿ ಅವರು ಕೇಂದ್ರ ಸಮಿತಿಗೆ ಚುನಾಯಿತರಾದರು. 1951-52 ರಲ್ಲಿ ಪಕ್ಷದ ಬಂಗಾಳ ಸಮಿತಿಯ ಕಾರ್ಯದರ್ಶಿಗಳಾಗಿದ್ದರು.

1952-62 ರಲ್ಲಿ ಪಕ್ಷದಲ್ಲಿ [illegible] ಮುಝಫ್ಫರ್ [illegible]

ಬಿಜಾಪುರ ಜಿಲ್ಲಾ 2ನೇ ಡಿ.ವೈ.ಎಫ್.ಐ. ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಬಿಜಾಪುರ ಜಿಲ್ಲಾ ದ್ವಿತೀಯ ಸಮ್ಮೇಳನ ಕಾ|| ಎಸ್.ಎಲ್. ಉಪಾಧ್ಯಾಯ ನಗರ ದಲ್ಲಿ, ಬಿಜಾಪುರದಲ್ಲಿ, ಜೂನ್ 18ರಂದು ಜರುಗಿತು. ಲೋಕ ಸಭಾ ಸದಸ್ಯ ಎಸ್.ಎಂ.ಗುರಡಿ ಯವರು ಸಮ್ಮೇಳನ ಉದ್ಘಾಟಿಸಿ ದಿನದಿನಕ್ಕೆ ಹೆಚ್ಚುತ್ತಿರುವ ಬಡತನ, ನಿರುದ್ಯೋಗದ ವಿರುದ್ಧ ಸಮಾಜಿಕ, ಆರ್ಥಿಕ ಬದಲಾವಣೆಗಾಗಿ ಯುವ ಜನತೆ ಹೋರಾಟಕ್ಕಿಳಿಯಬೇಕೆಂದು ಅವರು ಕರೆ ನೀಡಿದರು.

ಸಿ.ಪಿ.ಐ.(ಎಂ) ನಾಯಕ ಕಾ|| ಎನ್.ಕೆ. ಉಪಾಧ್ಯಾಯರು ಮಾತನಾಡಿ ದೇಶದಲ್ಲಿ ಆರ್.ಎಸ್.ಎಸ್., ಬಿ.ಜೆ.ಪಿ. ಯಂತಹ ಕೋಮುವಾದೀ ಮತೀಯ ಶಕ್ತಿಗಳು ರಾಮಜನ್ಮಭೂಮಿ ಪ್ರಶ್ನೆಯನ್ನು ಮುಂದೆಮಾಡಿ ದೇಶದ ಸಮಗ್ರತೆಗೆ ಗಂಡಾಂತರ ತಂದೊಡ್ಡಿವೆ. ಮತ್ತೊಂದು ಕಡೆ ಖಾಲಿಸ್ತಾನ್ ವಾದಿಗಳಿಂದ ಗೂರ್ಖಾಲ್ಯಾಂಡ್, ಜಾರ್ಖಂಡ್ ಚಳುವಳಿಗಳಿಂದ ಇಂದು ದೇಶ ಛಿದ್ರಗೊಳ್ಳುತ್ತಿದ್ದು. ಈ ಚಳುವಳಿಗಳ ಹಿಂದೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೈವಾಡವಿದ್ದು ಈ ಪಿತೂರಿಯ ವಿರುದ್ಧ ಯುವಜನತೆ ಹೋರಾಡುವುದರೊಂದಿಗೆ ಶಿಕ್ಷಣ, ನಿರುದ್ಯೋಗ, ಮುಂತಾದ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಬೇಕೆಂದು ಉಪಾಧ್ಯಾಯರು ಕರೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಉಪಾಧ್ಯಕ್ಷ ಕಾ|| ಭೀಮಸಿ ಕಲಾದಗಿ ಎಲ್.ಐ.ಸಿ.ಯ ಸಂಗಿಯವರು, ಯುವಜನತಾ ದಳದ ಕಾರ್ಯದರ್ಶಿ ರಾಜಶೇಖರ, ಎ.ಐ.ವೈ.ಎಫ್. ನ ಸುರೇಶ ಅರಳಿ, ಮಹಿಳಾ ಸಂಘಟನೆಯ ಶ್ರೀಮತಿ ಅನಸೂಯ, ಪತ್ರಕರ್ತರ ಸಂಘದ ಸಾರವಾಡ ಮುಂತಾದವರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾ|| ಅಣ್ಣಾರಾಯ ಈಳಗೇರ ವಹಿಸಿದ್ದರು. ಮನ್ನೂಸಾಬಕಲಾದಗಿ ಸ್ವಾಗತಿಸಿ ಸದಾನಂದ ಗೋದಕ ವಂದಿಸಿದರು. ಸಮಾರಂಭದ ಪ್ರಾರಂಭದಲ್ಲಿ ಅಣ್ಣಾರಾಯ ಈಳಗೇರ ಧ್ವಜಾರೋಹಣ ನೆರವೇರಿಸಿದರು.

ರಾಜ್ಯಪಾಲರ ಬಸ್ ದರ ಏರಿಕೆ ವಾಪಸುಪಡೆಯಬೇಕು. ಬಿಜಾಪುರ ಬಾಗಲಕೋಟೆ ನೂಲಿನ ಗಿರಣಿ ತೆರೆಯಬೇಕು, ನಗರ ಸಭೆ ಕಂದಾಯ ಏರಿಕೆ ತಡೆಗಟ್ಟಬೇಕು, ಹೊಸ ಪಡಿತರ ಚೀಟಿ ನೀಡಬೇಕು. ಕೊಳಚೆ ಪ್ರದೇಶ ಅಭಿವೃದ್ಧಿ ವಿರುದ್ಧ ಕೋರ್ಟು ತಡೆಯಾಜ್ಞೆ ರದ್ದುಗೊಳಿಸಬೇಕು. ಕೈಮಗ್ಗ ನೇಕಾರರಿಗೆ ನೂಲು ಪೂರೈಕೆ, ಮುಳವಾಡ ಯಾತನೀರಾವರಿ, ಕೃಷ್ಣಾ ಮೇಲ್ದಂಡೆ ಯೋಜನೆ ಮುಂತಾದ ಬೇಡಿಕೆಗಳನ್ನೊಳಗೊಂಡ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ಅಧಿಕಾರಿಗಳು

ಮನ್ನೂಸಾಬ ಕಲಾದಗಿ (ಅಧ್ಯಕ್ಷ) ಅಣ್ಣಾರಾಯಈಳಗೇರ, ಸದಾಶಿವಗೊಂದಕರ (ಉಪಾಧ್ಯಕ್ಷರು) ಸದಾನಂದ ಮೋದಿ (ಕಾರ್ಯದರ್ಶಿ) ಎಂ.ಡಿ.ಖಲಾಸಿ, ಡಿ.ಎಸ್.ಮೋದಿ, (ಸಹಕಾರ್ಯದರ್ಶಿಗಳು) ಆರ್.ಜಿ.ಹಾದಿಮನಿ ಖಜಾಂಚಿಯಾಗಿ ಆಯ್ಕೆಗೊಂಡರು.

ಸಂಜೆ ನಡೆದ ಬಹಿರಂಗ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಕಾ|| ಎಸ್.ಶಿವರಾಂರವರು ಮಾತನಾಡಿ ರಾಜೀವ್ ಗಾಂಧಿ ಆಡಳಿತದಲ್ಲಿ, ನಿರುದ್ಯೋಗ, ಬಡತನ, ಅನಕ್ಷರತೆ ಹಾಗೂ ಹಿಂದುಳಿದ ಜನತೆಯ ಮೇಲೆ ದಬ್ಬಾಳಿಕೆ ಹೆಚ್ಚಿದೆ ಎಂದು ಹೇಳಿ ಯುವಜನತ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಗೆ ಸರಿಯಾದ ಪಾಠ ಕಲಿಸುವಂತೆ ಕರೆ ನೀಡಿದರು. ಎನ್.ಕೆ. ಉಪಾಧ್ಯಾಯರು, ಸದಾನಂದ ಮೋದಿ, ಮನ್ನೂಸಾಬ ಕಲಾದಗಿ ಮುಂತಾದವರು ಮಾತನಾಡಿದರು.

ಅಭಿವೃದ್ಧಿ ಯೋಜನೆಗಳ ಜಾರಿಗೆ ಒತ್ತಾಯ

ಜೂನ್ 10ರಂದು ಮುಕ್ತಾಯಗೊಂಡ ಡಿ.ವೈ.ಎಫ್.ಐ. ಮೈಸೂರು ಜಿಲ್ಲಾ 3ನೇ ಸಮ್ಮೇಳನ ಜಿಲ್ಲೆಯ ಯುವಜನತೆಯ ನಿರುದ್ಯೋಗ- ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹಲವಾರು ಬೇಡಿಕೆಗಳ ಕುರಿತು ನಿರ್ಣಯಗಳನ್ನು ಅಂಗೀಕರಿಸಿತು. (ಸಮ್ಮೇಳನದ ಕುರಿತು ಈ ಹಿಂದೆಯೇ ಸುದ್ದಿ ಪ್ರಕಟಿಸಿದ್ದೇವೆ)

ಬೆಂಗಳೂರು ಮೈಸೂರು ನಡುವಿನ ಬ್ರಾಡ್‌ಗೇಜ್ ರೈಲ್ವೆ ನಿರ್ಮಾಣ ಕಾರ್ಯ ತೀವ್ರಗೊಳಿಸಬೇಕು, ಮೈಸೂರಿನಲ್ಲಿ ನೋಟು ಮುದ್ರಣ ಕಾರ್ಖಾನೆಯನ್ನು ಶೀಘ್ರ ಪ್ರಾರಂಭಿಸಬೇಕು, ನಿರುದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕು, ಮುಚ್ಚಿರುವ ಎಲ್ಲಾ ಕಾರ್ಖಾನೆಗಳನ್ನು ತೆರೆಯಬೇಕು, ಹರಿಜನ ಗಿರಿಜನರ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಲ್ಲಬೇಕು, ಹಾಗೂ ಮೈಸೂರಿನಲ್ಲಿ ನಡೆಯುತ್ತಿರುವ ಮತೀಯ ಗಲಭೆ ಕುರಿತು ಆತಂಕ ವ್ಯಕ್ತಪಡಿಸಿ ಸಮ್ಮೇಳನ ನಿರ್ಣಯ ಅಂಗೀಕರಿಸಿತು.

ಸರ್ಕಾರಿ ಆಸ್ಪತ್ರೆಗಳ ಸಂಕಟ ಕೇಳಿ

ಮಳವಳ್ಳಿ ಟೌನ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೊಂದು ಸೌಲಭ್ಯಗಳಿಲ್ಲದೆ ಜನತೆ ಪಡುತ್ತಿರುವ ಸಂಕಷ್ಟವನ್ನು ಬಗೆಹರಿಸಬೇಕೆಂದು ರಾಜ್ಯದ ರಾಜ್ಯಪಾಲರನ್ನು ಒತ್ತಾಯಿಸಿ ಮೇ 5ರಂದು ಇಲ್ಲಿನ ಡಿ.ವೈ.ಎಫ್.ಐ. ಹಾಗೂ ಕರ್ನಾಟಕದ ದಲಿತ ಸಂಘರ್ಷ ಸಮಿತಿಗಳು ಜಂಟಿಯಾಗಿ ಧರಣಿ ಸತ್ಯಾಗ್ರಹ ಕೈಗೊಂಡವು. ಆಸ್ಪತ್ರೆಯ ಕರ್ಮಕಾಂಡವನ್ನು ಪಟ್ಟಿಮಾಡಿದ ಚಳುವಳಿಯ ನಾಯಕರು ಡೆಪ್ಯುಟಿ ಸರ್ಜನ್, ಪುರುಷ, ಮಹಿಳಾ ವೈದ್ಯರಿಲ್ಲದ 5ಮಂದಿ ನರ್ಸಗಳಲ್ಲಿ ಒಬ್ಬರೂ ಸಿಬ್ಬಂದಿ ಇಲ್ಲದ ತಾಲೋಕು ಕೇಂದ್ರದ ಆಸ್ಪತ್ರೆ ಹೇಗಿರಬಹುದೆಂದು ನೀವು ಊಹಿಸಿರೆಂದು ಪ್ರಶ್ನಿಸುತ್ತಾರೆ.

ರೋಗಿಗಳ ತಪಾಸಣೆ ಇಲ್ಲ, ಔಷಧಿ ಮಾತ್ರೆಗಳನ್ನು ನೀಡುವುದಿಲ್ಲ, ಹೆರಿಗೆ ವಾರ್ಡುಗಳಲ್ಲಿ, ಮುರಿದ ಮಂಚಗಳು, ಗಾಳಿಬೆಳಕಿಲ್ಲದ ಕೊಠಡಿಗಳಲ್ಲಿ, ತಿಗಣೆಗಳ ಕಾಟ, ಕೊಳೆತ ಹಾಸಿಗೆ. ಇನ್ನೂ ತುರ್ತು ಚಿಕಿತ್ಸೆ ಮತ್ತು ಕ್ಷಕಿರಣವಂತೂ ಇಲ್ಲವೇಇಲ್ಲವೆನ್ನಬಹುದು. ಹೀಗೆ ಕೊಳೆತು ನಾರುತ್ತಿರುವ ಈ ಆಸ್ಪತ್ರೆಯನ್ನು ಸರಿಪಡಿಸಲು ನಡೆಸಿದ ಚಳುವಳಿಗೆ ಸ್ವಲ್ಪ ಮಟ್ಟಿನ ಜಯ ದೊರೆತಿದೆ ಎಂದು ತಿಳಿಸಿದ ನಾಯಕರು ಇಲ್ಲಿನ ಆರೋಗ್ಯ ಸಹನಿರ್ದೇಶಕರೊಡನೆ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬರಲಾಗಿದೆ.

ಮಹಿಳಾ ಡಾಕ್ಟರ್‌ರವರನ್ನು ಮಂಜೂರು ಮಾಡುವುದಾಗಿಯೂ, ವಿದ್ಯುತ್, ಹಾಸಿಗೆ ಮಂಚ ಮುಂತಾದ ಸೌಲಭ್ಯ ದುರಸ್ಥಿಗಾಗಿ 50 ಸಾವಿರ ಹಣವನ್ನು ಮಂಜೂರು ಮಾಡುವುದಾಗಿ ತಿಳಿಸಿದ್ದಾರೆ.

ನಾಗರೀಕ ಸೌಲಭ್ಯ ಒತ್ತಾಯಿಸಿ ಮಹಿಳೆಯರ ರ‍್ಯಾಲಿ

ಕಂಕುಳಲ್ಲಿ ಕೂಸು ಕೈಯಲ್ಲಿ ಬಾವುಟ, ಬಾಯಿಂದ ಘೋಷಣೆಗಳು ಬೀದರನ ಬೀದಿ ಬೀದಿಯಲ್ಲಿ ಜನ ದಂಗಾದರು. ತಮ್ಮ ಸಂಕಷ್ಟದ ಬದುಕಿನ ಉದ್ದಕ್ಕೂ ಸಾಗಿ ಬರುತ್ತಿರುವ ಸಮಸ್ಯೆಗಳನ್ನು ಮೆಟ್ಟಿನಿಂತು ಅವುಗಳನ್ನು ಬಗೆ ಹರಿಸಬೇಕೆಂದು ತಮ್ಮನ್ನು ಆಳುವವರಿಗೆ ಮಹಿಳೆಯರ ಮಾರ್ದನಿ. ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜ್ಯಾದ್ಯಂತ ಮಹಿಳೆಯರನ್ನು ಜಾಗೃತಗೊಳಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ 'ಸ್ವಾತಂತ್ರ್ಯ', 'ಸಮಾನತೆ' 'ಮಹಿಳಾ ವಿಮೋಚನೆ' ಯ ಗುರಿಯತ್ತ ಮುನ್ನೆಡೆಯಲು ದುಡಿಯುತ್ತಿರುವ ಒಂದು ಸಮರಶೀಲ ಸಂಘಟನೆಯಾಗಿ ಹೊರ ಹೊಮ್ಮುತ್ತಿದೆ.

ಈ ಸಂಘಟನೆಯ ಬೀದರ ಘಟಕ ಇತ್ತೀಚೆಗೆ ಬೀದರ್‌ನಲ್ಲಿ ಮಹಿಳೆಯರು ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಜಿಲ್ಲಾಧಿಕಾರಿ ಗಳು ಹಾಗೂ ಜಿಲ್ಲಾಪರಿಷತ್ತನ್ನು ಒತ್ತಾಯಿಸಿ ರೈತ ಕೃಷಿ ಕಾರ್ಮಿಕ ಮಹಿಳೆಯರ ಮೆರವಣಿಗೆಯೊಂದನ್ನು ಸಂಘಟಿಸಿತು. ಅಂದು11 ಗಂಟೆಗೆ ಹೊರಟ ಮಹಿಳೆಯರ ಮೆರವಣಿಗೆ ಪ್ರಮುಖ ಬೀದಿಗಳನ್ನು ಹಾಯ್ದು ಸಾಗುತ್ತಿರುವಾಗ ಬೀದರಿನ ಜನತೆ ಈ ಮಹಿಳೆಯರ ಕಂಡು ಆಶ್ಚರ್ಯ ಚಕಿತರಾಗಿ ಅವರ ಘೋಷಣೆಗಳನ್ನು ಆಲಿಸಿದರು. ನಿವೇಶನರಹಿತರಿಗೆ ನಿವೇಶನ ಹಂಚಬೇಕು ಜನತಾ ಕಾಲೋನಿ ತಗ್ಗು ಪ್ರದೇಶಗಳನ್ನು ಸರಿಪಡಿಸಬೇಕು. 10-15 ವರ್ಷಗಳಿಂದ ವಾಸಿಸುತ್ತಿರುವ ಜನರಿಗೆ ಪಟ್ಟಾನೀಡಬೇಕು, ಸಮರ್ಪಕ ಹಸಿರು ಕಾರ್ಡು ವಿತರಿಸಬೇಕು, ಕುಡಿಯುವ ನೀರಿನ ವ್ಯವಸ್ಥೆ, ಸಾರ್ವಜನಿಕ ಶೌಚ್ಯಾಲಯ ಆಸ್ಪತ್ರೆ ದುರಸ್ಥಿ ಕೈಗೊಂಡು ಔಷಧಿ ಸೌಲಭ್ಯ ಒದಗಿಸಬೇಕು, ಅಂಗನವಾಡಿ ಕಾರ್ಯಕರ್ತೆಯರ ಖಾಯಂಗೊಳಿಸಬೇಕು ಮುಂತಾದ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೂ ಹಾಗೂ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಅರ್ಪಿಸಿ ಶೀಘ್ರದಲ್ಲಿ ಈ ಬಗೆ ಗಮನಹರಿಸಬೇಕೆಂದು ಒತ್ತಾಯಿಸಿತು.

ಮಹಿಳೆಯರ ಇಂತಹ ಪ್ರತಿಭಟನಾ ರ‍್ಯಾಲಿ ಬೀದರ ನ ಹಲವಾರು ವರ್ಷಗಳ ಚರಿತ್ರೆಯಲ್ಲಿ ಇದೇ ಪ್ರಥಮವಾಗಿರುವುದು ಒಂದು ಗಮನಾರ್ಹ ಅಂಶ.

ಅಂಗನವಾಡಿ ಕಾರ್ಯಕರ್ತೆಯರ ಅಖಿಲಭಾರತ ಬೇಡಿಕೆ ದಿನಾಚರಣೆ

ಕುಂದಾಪುರ

ಕುಂದಾಪುರ ತಾಲೋಕಿನಾದ್ಯಂತದಿಂದ ಬರುವ ನೂರಾರು ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ನೇತೃತ್ವದಲ್ಲಿ ತಮ್ಮ ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ತಹಸೀಲ್ದಾರ್ ಹಾಗೂ ಸಿ.ಡಿ.ಪಿ.ಓ ಅಧಿಕಾರಿಗಳಿಗೆ ಮನವಿ ಅರ್ಪಿಸಿತು.

ಏಪ್ರಿಲ್ 22- 23ರಂದು ದೆಹಲಿಯಲ್ಲಿ ಜರುಗಿದ ಅಖಿಲಭಾರತ ಅಂಗನವಾಡಿ ಕಾರ್ಯಕರ್ತೆಯರ ಸಮಾವೇಶ. ಅಖಿಲ ಭಾರತ ಬೇಡಿಕಾ ದಿನಾಚರಣೆಗೆ ನೀಡಿದ ಕರೆಯಂತೆ ಜುಲೈ 10ರಂದು ಸಂಘಟಿಸಿದ್ದ ಕುಂದಾಪುರತಾಲೋಕು ಮಟ್ಟದ ರ‍್ಯಾಲಿಯುಲ್ಲಿ ನೂರಾರು ಮಂದಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

ಹಲವು ವರ್ಷಗಳ ದುಡಿಮೆಯ ನಂತರವು ತಮ್ಮ ಉದ್ಯೋಗ ಭದ್ರತೆ ಸೇವಾ ಸೌಲಭ್ಯಗಳಲ್ಲಿ, ದುಡಿಮೆಯ ಸ್ಥಿತಿಗಳ ಕುರಿತು ತಿಳಿಸುವ ಬೇಡಿಕೆಗಳ ಫಲಕಗಳನ್ನು ಹಿಡಿದು ಉತ್ಸಾಹ ಭರಿತ ಆವೇಶದ ಘೋಷಣೆಗಳನ್ನು ಅವರು ಕೂಗುತ್ತಿದ್ದರು.

ಕೇಂದ್ರ ಸರ್ಕಾರಿ ಶಾಸಕರನ್ನಾಗಿ ಪರಿಗಣಿಸುವವರೆವಿಗೂ ಕ್ರಮವಾಗಿ 600 ರೂ ಹಾಗೂ 400 ರೂ ಮಾಸಿಕ ವೇತನ, ವಿದ್ಯಾರ್ಹತೆ ಅನುಗುಣವಾಗಿ ಭಡ್ತಿ ನೀಡಲು, ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಒದಗಿಸಲು, ಮೇಲಾಧಿಕಾರಿಗಳ ದೌರ್ಜನ್ಯ ತಡೆಗಟ್ಟಬೇಕು, ಪಡಿತರ ಸೌಲಭ್ಯ ಒದಗಿಸಬೇಕು ಮುಂತಾದ 14 ಬೇಡಿಕೆಗಳ ಮನವಿಯನ್ನು ಸ್ವೀಕರಿಸಿದ ತಹಸೀಲ್ದಾರ್ ಹಾಗೂ ಸಿ.ಡಿ.ಬಿ. ಪ್ರತಿನಿಧಿಗಳೊಂದಿಗೆ ದೀರ್ಘ ಚರ್ಚೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳವುದಾಗಿ ಭರವಸೆ ನೀಡಿದರು.

ಮಹಿಳಾ ಸಂಘಟನೆ ಸಂಚಾಲಕಿ ಎಸ್.ಆರ್. ಲೀಲಾವತಿ, ಡಿ.ವೈ.ಎಫ್.ಐ. ರಾಜ್ಯ ಸಹಕಾರ್ಯದರ್ಶಿ ಆರ್. ಜಯ ಕುಮರ್, ತಾಲೋಕು ಅಧ್ಯಕ್ಷ ಕೆ. ವೆಂಕಟೇಶ್ ಕೋಣಿ ಮೊದಲಾದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಹರಪನ ಹಳ್ಳಿ

ತಾಲೋಕಿನ ವಿವಧೆಡೆಗಳಿಂದ ಬಂದ 200 ಕ್ಕೂ ಹೆಚ್ಚು ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಮೌನ ಮೆರವಣಿಗೆ ತಮ್ಮ ಬೇಡಿಕೆಗಳ ಮನವಿಯನ್ನು ತಹಸೀಲ್ದಾರ್ ಹಾಗೂ ಸಿ.ಡ.ಪಿ.ಬ ರವರಿಗೆ ಅರ್ಪಿಸಿ ಬಹಿರಂಗ ಸಭೆ ನಡೆಸಿತು. ಸಂಘದ ಪ್ರತಿನಿಧಿಗಳೊಂದಿಗೆ ಚರ್ಚಿಸಲು ತಹಸೀಲ್ದಾರ್‌ರವರು ಆಗಸ್ಟ್ 5 ರಂದು ಮಾತುಕತೆಗಾಗಿ ಆಹ್ವಾನಿಸ ಲಾಗಿದೆ.

ಈ ಮೆರವಣಿಗೆಯ ನೇತೃತ್ವವನ್ನು ಸಂಘದ ಪದಾಧಿಕಾರಿಗಳಾದ ಶ್ರೀಮತಿ ಉಮಾದೇವಿ, ದೇವಿರಮ್ಮ, ಫೈರೋಜ್, ವಾಸಂತಿ, ಸುಮಂಗಲ, ವೀಣಾ, ಮಹಾಲಕ್ಷ್ಮಿಯವರುಗಳು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕ ಬಿ. ಪರಶುರಾಂ ವಿದ್ಯಾರ್ಥಿ ನಾಯಕ ಕೆ. ರೇವಣ ಸಿದ್ಧಪ್ಪನವರುಗಳು ವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಪರಶುರಾಂ, ದೇವಿರಮ್ಮ ಮತ್ತು ಉಮಾದೇವಿ ಯವರು ಮಾತನಾಡಿ ಅಖಿಲ ಭಾರತ ಬೇಡಿಕೆ ದಿನದ ಕುರಿತು ವಿವರಿಸಿ ತಾಲೋಕಿನಲ್ಲಿ ಮತ್ತಷ್ಟು ಬಲಿಷ್ಠ ಸಂಘಟನೆ ಕಟ್ಟಲು ಶ್ರಮಿಸಬೇಕೆಂದು ಕರೆ ನೀಡಿದರು.

ಅಂತರ ರಾಷ್ಟ್ರೀಯ ಮಕ್ಕಳ ದಿನಾಚರಣೆ

ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಕುಂದಾಪುರ ಸಮಿತಿ ಆಶ್ರಯದಲ್ಲಿ ಜೂನ್25 ರಂದು ಕೇಂದ್ರ ಸಮಿತಿಯ ಕರೆಯಂತೆ ಅಂತರಾಷ್ಟ್ರೀಯ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಮಿಕ ನಾಯಕರಾದ ಕಾ|| ಕೆ.ಶಂಕರ್‌ರವರು ಮಾತನಾಡಿ ಬಾಲ ಕಾರ್ಮಿಕರ ಬಗ್ಗೆ ಸರ್ಕಾರ ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸಿದರೆ ಕಾ|| ಸಿ.ನಾರಾಯಣರವರು ಪಾಲಕರ ಬಡತನ, ಹಾಗೂ ಅಜ್ಞಾನ ಮಕ್ಕಳ [illegible] ಮಾರಕವಾಗಿದೆ ಎಂದರು. ಯುವ ಮುಖಂಡ ಕಾ|| ಆರ್.ಜಯಕುಮಾರ್ ರವರು ಮಾತನಾಡಿ ವಿಶ್ವದಲ್ಲಿನ ಇಂದಿನ ಯುದ್ಧ ಭೀತಿಯಿಂದ ಮುಂದಿನ ಜನಾಂಗವನ್ನು ರಕ್ಷಿಸಬೇಕೆಂದು ಕರೆ ನೀಡಿದರು

ಮಹಿಳಾ ಸಂಘಟನೆ ತಾಲ್ಲೂಕು ಸಂಚಾಲಕಿ ಎಸ್.ಆರ್.ಲೀಲಾವತಿಯವರು ಮಕ್ಕಳದಿನಾಚರಣೆಯ ಪ್ರಮುಖ ಬೇಡಿಕೆ ಗಳನ್ನು ವಿವರಿಸಿದರು. ಸಹಸಂಚಾಲಕಿ ಉತ್ಪಲ ವಂದಿಸಿದರು.

ಕೆಲಸ ಕೊಡಿಸುವುದಾಗಿ ವಂಚನೆ

ಬಿಜಾಪುರ ನಗರದಲ್ಲಿ ಧಾರವಾಡ ಜಿಲ್ಲೆಯಿಂದ ಬಂದು ನೆಲಸಿ ಸೆಕ್ಯುರಿಟಿ ಮತ್ತು ಗಾರ್ಡ್ ಸಂಸ್ಥೆಯಲ್ಲಿ ಉದ್ಯೋಗ ಕೊಡಿಸುವುದಾಗಿ ಸುಮಾರು 200 ಮಂದಿ ಯುವಕರಿಂದ ಸಾವಿರದಿಂದ 5 ಸಾವಿರದವರೆಗೆ ಹಣ ಪಡೆದ ಆರ್.ವಿ. ಚಂಪರಗಿ ಯವರು ಪರಾರಿಯಾಗಿದ್ದಾರೆ. ಇದೇ ವ್ಯಕ್ತಿ ದಾವಣಗೆರೆ, ಜಮಖಂಡಿ, ಬನಹಟ್ಟಿ ಮುಂತಾದ ಕಡೆಗಳಲ್ಲಿ ಇದೇ ರೀತಿಯಲ್ಲಿ ಯುವಕರನ್ನೂ ವಂಚಿಸಿರುವುದಾಗಿ ವರದಿಯಾಗಿದೆ. ಪೋಲಿಸರು ಇತನನ್ನು ಬಂಧಿಸಿ ನೊಂದ ಯುವಕರಿಗೆ ನ್ಯಾಯ ದೊರಕಿಸಬೇಕೆಂದು ಡಿ.ವೈ.ಎಫ್.ಐ. ಒತ್ತಾಯಿಸಿದೆ.

ಹೊಸಪೇಟೆ ದೂರದರ್ಶನ ಪಿಕೆಟಿಂಗ್ ಬಂಧನ

ದೂರದರ್ಶನ-ಆಕಾಶವಾಣಿ ಪ್ರಸಾರ ಮಾಧ್ಯಮಗಳನ್ನು ಕಾಂಗ್ರೆಸ್ ಆಡಳಿತ ತನ್ನ ಪಕ್ಷದ ಪ್ರಚಾರ ಪ್ರತಿಷ್ಠೆಗಾಗಿ ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷಗಳನ್ನು ನಿಂದಿಸಲು ಬಳಸುತ್ತಿರುವ ನೀತಿಯನ್ನು ಪ್ರತಿಭಟಿಸಲು ರಾಷ್ಟ್ರೀಯ ರಂಗ ಹಾಗೂ ಎಡ ಪಕ್ಷಗಳು ನೀಡಿದ ಕರೆಯಂತೆ ಜೂನ್ 26ರಂದು ಬಳ್ಳಾರಿ ಜಿಲ್ಲೆಯ ಹೊಸ ಪೇಟೆಯ ದೂರದರ್ಶನದ ಕೇಂದ್ರದ ಮುಂದೆ ಸಿ.ಪಿ.ಐ(ಎಂ) ಜನತಾದಳದ ನೂರಾರು ಜನ ಕಾರ್ಯಕರ್ತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ದೇಶದಲ್ಲಿ ಬೆಳೆದು ಬರುತ್ತಿರುವ ಎಡ-ಪ್ರಜಾಸತ್ತಾತ್ಮಕ ಜನಪರ ಚಳುವಳಿ ಕುರಿತು ಮೌನ ತಾಳುವ ದೂರದರ್ಶನ ಆಕಾಶವಾಣಿ ಕಾಂಗ್ರೆಸ್ ಚಟುವಟಿಕೆ ಹಾಗೂ ರಾಜೀವ್ ಗಾಂಧಿಯವರನ್ನು ಉದ್ಧರಿಸುವ ಸುಳ್ಳು-ಅಸತ್ಯಗಳನ್ನು ಬಿತ್ತರಿಸಿ ಜನತೆಗೆ ವಂಚನೆ ಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸ ಲಾಯಿತು. ಈ ಪ್ರದರ್ಶನ ಡಿ.ವೈ.ಎಫ್.ಐ. ಕಾರ್ಯಕರ್ತರು ಪಾಲ್ಗೊಂಡು ಬಂಧನಕೊಳ್ಳಗಾದರು. ಪಕ್ಷದ ನಗರ ಕಾರ್ಯದರ್ಶಿ ಕಾ|| ಎಂ. ಜಂಬಯ್ಯ ನಾಯಕ ಜಿಲ್ಲಾ ಕಾರ್ಯದರ್ಶಿ ಕಾ||ಪ್ರಸನ್ನಕುಮಾರ್, ಪರಶುರಾಂ ಕಲಾಲ್ ಡಿ.ವೈ.ಎಫ್.ಐ.ನ ವೆಂಕಟರಮಣ ಮುಂತಾದವರು ನೇತೃತ್ವವಹಿಸಿದ್ದರು.

ಕನಿಷ್ಠ ವೇತನ ಒತ್ತಾಯಿಸಿ

ಕರ್ನಾಟಕ ರಾಜ್ಯದಲ್ಲಿ ದುಡಿಯುತ್ತಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಠ 1050ರೂ ವೇತನ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸಿ ಉಡುಪಿಯ ವಿವಧ ಕಾರ್ಮಿಕ ಸಂಘಗಳು ಒಂಟಿಯಾಗಿ ಜುಲೈ 1ರಂದು ಮೆರವಣಿಗೆಯೊಂದನ್ನು ನಡೆಸಿ ತಹಸೀಲ್ದಾರ್‌ರವರ ಮೂಲಕ ರಾಜ್ಯದ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು. ಪ್ರದರ್ಶನದ ನೇತೃತ್ವವನ್ನು ಕಾ|| ಡೇವಿಡ್ ಎ. ಕರ್ಕಡ, ವಿಶ್ವನಾಥ ರೈ. ಫೆಡ್ರಿಕ್ ಅಲ್ಬರ್ಟ ಸೋನ್ಸು, ಸಂಜೀವನಾಯಕ್, ಶೇಖರ ಪೂಜಾರಿರವರು ವಹಿಸಿದ್ದರು. ನಂತರ ನಡೆದ ಸಭೆಯಲ್ಲಿ, ಕಾರ್ಮಿಕರಿಗೆ 1050 ರೂ ಕನಿಷ್ಠ ವೇತನ, ಭೂಮಿಗಾಗಿ ಕೃಷಿ ಕೂಲಿಗಾರರು ನಡೆಸುವ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

ಜೂನ್ 30 ರಂದು ಬೀಡಿ ಕಾರ್ಮಿಕರ ಒಕ್ಕೂಟದ ಕರೆಯಂತೆ ಉಡುಪಿಯ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ ಡೆಪ್ಯೂಟಿ ತಹಸೀಲ್ದಾರ್ ಮೂಲಕ ರಾಜ್ಯಪಾಲರಿಗೆ ತಮ್ಮ ಬೇಡಿಕೆಗಳ ಮನವಿ ಅರ್ಪಿಸಿದರು. ಸಾವಿರ ಬೀಡಿ ಕಟ್ಟಲು 20 ರೂ ನಿಗದಿ, ಬೆಲೆ ಏರಿಕೆ ಗುಣುಗುಣವಾಗಿ ತುಟ್ಟಿಭತ್ಯೆ, ಕಂಟ್ರಾಕ್ಟ್ ಪದ್ಧತಿ ರದ್ದು, ಕಲ್ಯಾಣ ನಿಧಿ ಆಸ್ಪತ್ರೆ ಸೌಲಭ್ಯ ಮುಂತಾದ ಬೇಡಿಕೆಗಳನ್ನೊಳಗೊಂಡಿತು. ಕಾ|| ಡೇವಿಡ್ಎ. ಕರ್ಕಡ, ಸಾಧು ಅಮಾನ, ಸಂಜೀವ ನಾಯಕ, ದೊಗುಸಮರ್ಣ, ವಿಶ್ವನಾಥರೈ, ರಾಜೀವಿ ಬೇಬಿ, ಇಂದಿರಾ ಅಮೀನ್, ಮುಂತಾದವರು ಸಭೆಯಲ್ಲಿ ಮಾತನಾಡಿದರು.

ಪೌರ ಕಾರ್ಮಿಕರಿಗೆ ಪಿಂಚಣಿ ಮಂಜೂರಿಗೆ ಒತ್ತಾಯ

ನೌಕರಿಯಲ್ಲಿದ್ದಾಗ ಮೃತಪಟ್ಟ ನಗರ ಸಭೆಗಳ ನೌಕರರ ಕುಟುಂಬಕ್ಕೆ ನೀಡುವ ಪಿಂಚಣಿಯನ್ನು ಕಳೆದ ವರ್ಷದಿಂದ ತಡೆ ಹಿಡಿದಿರುವ ಸರ್ಕಾರದ ನೀತಿಯನ್ನು ಕರ್ನಾಟಕ ರಾಜ್ಯಪೌರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಕಾ|| ಎನ್.ಕೆ. ಉಪಾಧ್ಯಾಯರು ಬಲವಾಗಿ ಖಂಡಿಸಿದ್ದಾರೆ.

ಫೆಬ್ರವರಿ 4,1987 ರಿಂದ ಪಿಂಚಣಿ ನೀಡಲಾಗುತ್ತಿತ್ತು. 4.2.89ರಿಂದ ನಿಲ್ಲಿಸಬೇಕೆಂದು ರಾಜ್ಯಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಆಜ್ಞೆ ಹೊರಡಿಸಿದ್ದರು. ಕೆ.ಸಿ.ಎಸ್.ಆರ್. ನಿಯಮಗಳನ್ನು ನಗರ ಸಭೆ ನೌಕರರಿಗೂ 2-2-1987ರಿಂದ ಅನ್ವಯಗೊಳಿಸಿದಾಗ ಅದರಲ್ಲಿ ಪುರವಣಿ 6ನ್ನು ಸೇರಿಸಲಿಲ್ಲ ಎಂಬ ನೆವದಿಂದ ಆಜ್ಞೆ ಹೊರಡಿಸಲಾಗಿತ್ತು.

ಸಾವಿರ ಕುಟುಂಬ ಪಿಂಚಣಿ ರದ್ದಿನಿಂದ ಬಾರಿ ಸಂಕಷ್ಟದಲ್ಲಿದ್ದು ಉಪವಾಸ ಬೀಳುವಂತಾಗಿದೆ. ರಾಜ್ಯಪಾಲರು ಕೂಡಲೇ ಮಧ್ಯ ಪ್ರವೇಶಿಸಿ ಪಿಂಚಣಿಯನ್ನು ಮಂಜೂರು ಮಾಡುವ ಆಜ್ಞೆ ಹೊರಡಿಸುವ ತುರ್ತು ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದ್ದಾರೆ.

ಮೈಸೂರು ಹಾಲು ಉತ್ಪಾದನಾ ಒಕ್ಕೂಟದ ಅಧ್ಯಕ್ಷ ಮತ್ತು ನಿರ್ವಾಹಕ ನಿರ್ದೇಶಕರು ಡೇರಿ ಅಧಿಕಾರಿಗಳ ಹಾಗೂ ನೌಕರರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ, ಸಂಘಟನೆ ಐಕ್ಯತೆ ಮುರಿಯಲು ನಡೆಸುತ್ತಿರುವ ತಂತ್ರವನ್ನು ಉಪಾಧ್ಯಾಯರು ಖಂಡಿಸಿ 3 ನೌಕರರನ್ನು ಸಸ್ಪೆಂಡ್ ಮಾಡಿ ರೈತರನ್ನು ಕಾರ್ಮಿಕರ ಮೇಲೆ ಎತ್ತಿಕಟ್ಟುವುದನ್ನು ವಿರೋಧಿಸಿರುವ ಅವರು ಮೈಸೂರಿನ ಡೈರಿ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಸಿ.ಐ.ಟಿ.ಯು ರಾಜ್ಯ ಸಮಿತಿಯ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ

ರಾಷ್ಟ್ರೀಯ ಕನಿಷ್ಠ ಕೂಲಿ ನಿಗದಿ ಮಾಡಿ ಕೇಂದ್ರ ಸರ್ಕಾರ ಕಾನೂನು ಜಾರಿಗೊಳಿಸುವಂತೆ ಒತ್ತಾಯಿಸಿ, ಸಾವಿರ ಬೀಡಿ ಕಟ್ಟಲು 20ರೂ. ತುಟ್ಟಿ ಭತ್ಯೆ, ಭವಿಷ್ಯನಿಧಿ, ಬೋನಸ್, ಆಸ್ಪತ್ರೆ ಸೌಲಭ್ಯ, ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯ ಹಾಗೂ ಬೀಡಿ ಉದ್ಯಮದಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದು ಮುಂತಾದ 7ಅಂಶಗಳ ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿ ಜೂನ್ 14ರಿಂದ 30 ರವರೆವಿಗೆ ಬೇಡಿಕೆ ದಿನಾಚರಣೆ ಆಚರಿಸಿ ಜೂನ್ 30 ರಂದು ಪ್ರತಿಭಟನಾ ಪ್ರದರ್ಶನ ಮೆರವಣಿಗೆ ನಡೆಸಲು ಬೀಡಿ ಕಾರ್ಮಿಕರ ರಾಜ್ಯ ಒಕ್ಕೂಟ ನೀಡಿದ ಕರೆಯಂತೆ ದ.ಕ. ಜಿಲ್ಲೆಯ ಮಂಗಳೂರಿನಲ್ಲಿ ಬೃಹತ್ ಪ್ರದರ್ಶನ ನಡೆಯಿತು.

ಮಂಗಳೂರಿನ ಪುರಭವನದಿಂದ ಹೊರಟ್ಟ ಸಾವಿರಾರು ಬೀಡಿ ಕಾರ್ಮಿಕರ ಮೆರವಣಿಗೆ ಸೌತ್‌ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಯವರ ಮೂಲಕ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು.

ನಿಯೋಗದಲ್ಲಿ ಬೀಡಿ ಫೆಡರೇಷನ್ ಅಧ್ಯಕ್ಷ ಕಾ||ಕೆ.ಆರ್. ಶ್ರೀಯಾನ್ ಹಾಗೂ ವಿವಿಧ ಸಂಘಗಳ ಕಾರ್ಯದರ್ಶಿಗಳಿದ್ದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ||ಕೆ.ಆರ್. ಶ್ರೀಯಾನ್, ಯು.ಬಿ.ಲೋಕಯ್ಯ ಮಾತನಾಡಿ ದೇಶದಲ್ಲಿರುವ ಲಕ್ಷಾಂತರ ಬೀಡಿ ಕಾರ್ಮಿಕರ ಸಮಸ್ಯೆ ಬಗ್ಗೆ ಗಮನ ಹರಿಸದಿದ್ದರೆ ಕಾರ್ಮಿಕರು ಇನ್ನೂ ತೀವ್ರ ರೀತಿಯ ಚಳುವಳಿ ನಡೆಸಲಾಗುವುದೆಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಾರ್ಮಿಕ ನಾಯಕರ ಆಮರಣ ಸತ್ಯಾಗ್ರಹ

ಹುಬ್ಬಳ್ಳಿಯ ಕೈಗಾರಿಕಾ ಪ್ರದೇಶದಲ್ಲಿರುವ ಯೂನಿವರ್ಸಲ್ ಪ್ರೊಸಿಜನಟೂಲ್ಸ್ ಹಾಗೂ ಯೂನಿವರ್ಸಲ್ ಕನ್ವರ್ಶನ್ ಮೂಲಕ ಒಬ್ಬ ಕಾನೂನು ಬಾಹಿರವಾಗಿ ವಿಚಾರಣೆಯಿಲ್ಲದೆ ಕಿತ್ತೊಗೆದು ಭವಿಷ್ಯನಿಧಿಯನ್ನು ಸಹ ತಮ್ಮ ಸ್ವಂತ ಬ್ಯಾಂಕ್ ಖಾತೆಗೆ ಹಾಕಿಕೊಂಡು ಆ ಕಾರ್ಮಿಕ ಸಿ.ಐ.ಟಿ.ಯು. ಸಂಘ ಬಿಡುವಂತೆ ಕಿರುಕುಳ ನೀಡುತ್ತಿರುವ ಮಾಲೀಕರ ಹಠಮಾರಿತನ ಪ್ರತಿಭಟಿಸಿ ಹಲವಾರು ಹಂತದ ಹೋರಾಟಗಳು ನಡೆದಿವೆ.

ಜುಲೈ 10ರಿಂದ ಸಿ.ಐ.ಟಿ.ಯು ರಾಜ್ಯಸಮಿತಿ ಕಾರ್ಯ ದರ್ಶಿಗಳೊಬ್ಬರಾದ ಹಾಗೂ ಹುಬ್ಬಳ್ಳಿ-ಧಾರವಾಡ ಸಿ.ಐ.ಟಿ.ಯು. ಸಮಿತಿ ಸಂಚಾಲಕ ಹಾಗೂ ಕಾರ್ಮಿಕ ಸಂಘದ ಪ್ರ.ಕಾರ್ಯದರ್ಶಿಗಳಾದ ಕಾ||ಎಂ.ಬಿ.ಕಟ್ಟಿಯವರು ಆಮರಣ ಉಪವಾಸ ಪ್ರಾರಂಭಿಸಿದ್ದಾರೆ.

ಧರಣಿ ಸರದಿ ಉಪವಾಸ ಹಾಗು ಮುಷ್ಕರಗಳಂತಹ ಹಲವು ಹೋರಾಟಗಳ ನಂತರ ಆಮರಣ ಉಪವಾಸ ಸತ್ಯಾಗ್ರಹ ನಡೆಸುವ ಪರಿಸ್ಥಿತಿ ನಿರ್ಮಾಣಗೊಂಡಿದ್ದರು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಕಾರ್ಮಿಕ ಆಯುಕ್ತರು ಯಾವುದೇ ಕ್ರಮ ಜರುಗಿಸದೇ ಇರುವ ಕಾರ್ಮಿಕ ವಿರೋಧಿ ನೀತಿ ಖಂಡಿಸಿರುವ ಸಮನ್ವಯ ಸಮಿತಿ ಇದೇ ರೀತಿಯ ಉದಾಸೀನ ಮನೋಭಾವ ಮುಂದುವರಿದ್ದೆ ಆದರೆ ಸಾಂಕೇತಿಕ ಮುಷ್ಕರ ಹಾಗೂ ಕಛೇರಿ ಪಿಕೆಟಿಂಗ್ ನಡೆಸಲಾಗುವುದೆಂದು ಎಚ್ಚರಿಸಿದೆ.

ಉಡುಪಿ ಕಾರ್ಮಿಕರ ಸಮಾವೇಶ

ಜೂನ್ 18 ರಂದು ಉಡುಪಿಯ ಬೀಡಿ, ನೇಯ್ಗೆ, ಹಂಚು ಮುದ್ರಣ, ಗೋಡಂಬಿ ಇಂಜಿನಿಯರಿಂಗ್, ವಾಣಿಜ್ಯ ಸಂಸ್ಥೆ, ಹಮಾಲಿ ಕಾರ್ಮಿಕರನ್ನೊಳಗೊಂಡ ಕಾರ್ಮಿಕ ಸಮಾವೇಶ ಯಶಸ್ವಿಯಾಗಿ ಜರುಗಿತು. ಅಸಂಘಟಿತ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೂ 1050 ರೂ ಕನಿಷ್ಟ ವೇತನ ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಅಗಲಿದ ಹಿರಿಯ ನಾಯಕ ಕಾ||ಎನ್.ಎಲ್.ರಿಗೆ ಶ್ರದ್ಧಾಂಜಲಿ ಅರ್ಪಿಸಿದ ಸಭೆ ಬೀಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿತು. ಕಂಟ್ರಾಕ್ಟ್ ನೌಕರರು, ಅಂಗನವಾಡಿ ಕಾರ್ಯಕರ್ತೆಯರು, ವಾಣಿಜ್ಯ ನೌಕರರಿಗೆ ಕನಿಷ್ಠವೇತನ ಜಾರಿಗೊಳಿಸಬೇಕೆಂದು ಆಗ್ರಹ ಪಡಿಸಿ ನಿರ್ಣಯ ಕೈಗೊಳ್ಳಲಾಯಿತು. ಸಿ.ಐ.ಟಿ.ಯು. ರಾಜ್ಯ ಸಮಿತಿ ಸದಸ್ಯ ಕಾ|| ಡೇವಿಡ್ ಎ. ಕರ್ಕಡ್, ವಿಮಾ ನೌಕರರ ಸಂಘದ ಕಾ||ಪಿ.ವಿಶ್ವನಾಥ ರೈ, ಬೀಡಿ ಕಾರ್ಮಿಕ ನಾಯಕ ಕಾ||ಸಾಧು ಅಮಿನ್ ಮಾತನಾಡಿದರು.

ಐಕ್ಯರಂಗಕ್ಕೆ ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 60

ಅರ್ಧ ವಾರ್ಷಿಕ ರೂ. 30

ನೀವು ಓದಿ ಮತ್ತೊಬ್ಬರನ್ನು ಚಂದಾ ಮಾಡಿ

ಇನ್ಸಿಟ್ಯೂಟ್ ಆಫ್ ಸೈನ್ಸ್ ನೌಕರರು ಹೋರಾಟ ಕಣದಲ್ಲಿ

ಬೆಂಗಳೂರಿನ ಇನ್ಸಿಟ್ಯೂಟ್ ಆಫ್ ಸೈನ್ಸ್ ನೌಕರರು ತಮ್ಮ ನ್ಯಾಯ ಸಮ್ಮತ ಬೇಡಿಕೆ ಮುಂದಿರಿಸಿ ಹೋರಾಟದ ಕಣದಲ್ಲಿದ್ದಾರೆ. ಹಲವು ಬಾರಿ ಆಡಳಿತ ವರ್ಗಗಳೊಡನೆ ನಡೆದ ಮಾತುಕತೆ ಸಫಲಗೊಳ್ಳದೆ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ಅನೇಕ ವರ್ಷಗಳಿಂದ ದುಡಿಯುತ್ತಿರುವ ದಿನಗೂಲಿ ಕೆಲಸಗಾರರನ್ನು ಖಾಯಂ ಮಾಡಬೇಕು, 6-8ವರ್ಷ ಕೆಲಸ ಮಾಡಿದವರನ್ನು ಬಡ್ತಿಮಾಡಬೇಕು, 7 ವರ್ಷಗಳ ಇವೆಲ್ಯೂವೆಶನ್ ಬದಲಿಗೆ 5 ವರ್ಷಕ್ಕೆ ಇಳಿಸಬೇಕೆಂಬ ಬೇಡಿಕೆಗಳ ಕುರಿತು ತಾತ್ಸಾರ ಮನೋಭಾವ ತೋರಿದ ಆಡಳಿತ ವರ್ಗದ ಹಠಮಾರಿತನದ ನೀತಿ ವಿರುದ್ಧ ನಡೆಸುತ್ತಿರುವ ಶಾಂತಿಯುತ ಹೋರಾಟ ಮುರಿಯಲು ಪೋಲೀಸ್ ಸಹಾಯ ಪಡೆಯುತ್ತಿದೆ.

ಸಂಘದ ಪದಾಧಿಕಾರಿಗಳನ್ನು ಎದುರಿಸುವುದು, ಸಂಘ ಒಡೆಯುವ ತಂತ್ರ ನಡೆಸುವುದು, ಸಭೆ ಸೇರಬಾರದು, ಘೋಷಣೆ ಕೂಗಬಾರದೆಂದು ಪ್ರಜಾಪ್ರಭುತ್ವ ವಿರೋಧ ಕ್ರಮವನ್ನು ಹೇರಲು ಜೂನ್ 30 ರಂದು ಕೋರ್ಟ್‌ನಿಂದ ಅನುಮತಿಯನ್ನು ಸಹ ಪಡೆದಿರುತ್ತದೆ. ಈ ಎಲ್ಲಾ ಕಿರುಕುಳ ದಬ್ಬಾಳಿಕೆಯನ್ನು ಎದುರಿಸಿ ಹೋರಾಡುತ್ತಿರುವ ಸಂಘ ಪೋಲೀಸ್ ದಬ್ಬಾಳಿಕೆ ನಮಗೆ ಹೊಸತಲ್ಲ. ಜೈಲುಗಳು ನಮಗೆ ಚಿರಪರಿಚಿತ ನಮ್ಮ ಹೋರಾಟನಿಲ್ಲದೆಂದು ಸಂಘದ ಕಾರ್ಯದರ್ಶಿ ಕಾ||ಸುಬ್ಬಯ್ಯ ನೌಕರರ ಗೇಟ್ ಮೀಟಿಂಗ್ ಉದ್ದೇಶಿಸಿ ಮಾತನಾಡುತ್ತಾ ನೌಕರರಿಗೆ ಧೈರ್ಯದಿಂದ ಹೋರಾಟ ಮುಂದುವರೆಸಲು ಕರೆ ನೀಡಿದರು.

ಕುಂದಾಪುರ: ಸಮುದಾಯ ವಾರ್ಷಿಕ ಸಭೆ

ಕುಂದಾಪುರ ಸಮುದಾಯ 1988-89ನೇ ಸಾಲಿನ ವಾರ್ಷಿಕ ಮಹಾಸಭೆ ಜೂನ್ 4 ರಂದು ಸಮುದಾಯ ಹಾಲ್‌ನಲ್ಲಿ ಜರುಗಿತು.

ಕೆ.ಎಂ.ಬಾಲಕೃಷ್ಣ ವಾರ್ಷಿಕ ವರದಿ ಮಂಡಿಸಿದರು. ಸಮಾಜಘಾತಕ ಕಾಂಗ್ರೆ ಗೂಂಡಾಗಳ ಹಲ್ಲೆಯಲ್ಲಿ ಹುತಾತ್ಮರಾದ ಖ್ಯಾತ ಕಲಾವಿದ ಸಫ್ದರ್ ಹಷ್ಮಿಯವರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು. ಕುಂದಾಪುರ ಅಧ್ಯಕ್ಷ ಎ. ಗಿರೀಶ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿ.ವೈ.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿ ಕಾ|| ಆರ್ ಜಯ ಕುಮಾರ್, ಪರ್ತಕರ್ತ ಕೆ. ವಿಶ್ವನಾಥ್ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

1989-90ನೇ ಸಾಲಿಗೆ ಎ. ಗಿರೀಶ್ (ಅಧ್ಯಕ್ಷ) ಕೃಷ್ಣಮೂರ್ತಿ ಕಾವ್ರಾಡಿ, ರಾಧಿಕೃಷ್ಣಸಾರಂಗ (ಉಪಾಧ್ಯಕ್ಷರು) ಜೆ.ವಿ ಕಾರಂತ (ಕಾರ್ಯದರ್ಶಿ) ಆನಂದ, ಮುಕುಂದನ್(ಸಹಕಾರ್ಯದರ್ಶಿಗಳು) ಕೆ.ಎಂ.ಬಾಲಕೃಷ್ಣ (ಖಜಾಂಚಿ) ಹಾಗೂ 12ಸದಸ್ಯರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬೋನಸ್‌ಕಡಿತದ ವಿರುದ್ಧ ಹಂಚು ಕಾರ್ಮಿಕರ ಪ್ರದರ್ಶನ

ಸೌತ್‌ಕೆನರಾಟೈಲ್ಸ್ ವರ್ಕರ್ಸ್ ಯೂನಿಯನ್ ಸಿ.ಐ.ಟಿ.ಯು ಹಾಗೂ ಎ.ಐ.ಟಿ.ಯು.ಸಿ. ಸಂಘಗಳು ಜಂಟಿಯಾಗಿ ಕಾರ್ಮಿಕರಿಗೆ ಬೋನಸ್ ಕಡಿತ ಮಾಡುವ ಮಂಗಳೂರು ವಿಭಾಗದ ಹಂಚು ಮಾಲೀಕರ ಸಂಘ(ವಿಟ್ಟ)ದ ನಿರ್ಣಯವನ್ನು ವಿರೋಧಿಸಿ ಮಾಲೀಕರ ಮೂಲಕ ಸಂಘದ ಕಛೇರಿ ಎದುರು ಪ್ರದರ್ಶನ ನಡೆಸಿ ಮನವಿ ಅರ್ಪಿಸಲಾಯಿತು.

ಕಳೆದ 35 ವರ್ಷದಿಂದ ನೀಡುತ್ತಿರುವ ಬೋನಸ್‌ನ್ನು ಏಕಾಏಕಿ ನಿಲ್ಲಿಸುವ ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಈ ಕುರಿತು ಬೆಂಗಳೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ನಷ್ಟದ ನೆಪವೊಡ್ಡಿ ಬೋನಸ್ ಕಡಿತಮಾಡುವ ಮಾಲೀಕರ ಕಾನೂನು ಬಾಹಿರ ಕ್ರಮವನ್ನು ತೀವ್ರವಾಗಿ ಖಂಡಿಸಲಾಯಿತು. ಸಭೆಯಲ್ಲಿ ಎರಡು ಸಂಘಟನೆಗಳ ಮುಖಂಡರು ಮಾತನಾಡಿದರು.

ವಿದ್ಯಾರ್ಥಿ ಚಳುವಳಿಗೆ ಮಣಿದ ರಾಜ್ಯಪಾಲರು

ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ರಿಯಾಯಿತಿ ಪಡೆಯಲು ಹಸಿರುಕಾರ್ಡ ಕಡ್ಡಾಯವೆಂಬ ಸರ್ಕಾರಿ ಆಜ್ಞೆವಿರುದ್ಧ ಎಸ್.ಎಫ್.ಐ. ನಡೆಸಿದ ಚಳುವಳಿ ಫಲವಾಗಿ ರಾಜ್ಯಪಾಲರು ಹಾಗೂ ಶಿಕ್ಷಣ ಇಲಾಖೆ ಈ ಸರ್ಕಾರಿ ಆಜ್ಞೆಯನ್ನು ಹಿಂತೆಗೆದುಕೊಂಡಿದೆ. ಇದೊಂದು ವಿದ್ಯಾರ್ಥಿಸಮುದಾಯದ ಸಂಘಟಿತ ಹೋರಾಟಕ್ಕೆ ದೊರೆತ ವಿಜಯವೆಂದು ಎಸ್.ಎಫ್.ಐ. ಹೇಳಿ ಶಿಕ್ಷಣ ಇಲಾಖೆಯ ಈ ನಿರ್ಧಾರವನ್ನು ಸ್ವಾಗತಿಸಿದೆ.

ಹಸಿರು ಕಾರ್ಡ್ ಕಡ್ಡಾಯ ರದ್ದುಗೊಳಿಸಿ ಎಸ್.ಎಫ್.ಐ. ಬೇಡಿಕೆಯಂತೆ ಆದಾಯ ಮಿತಿಯನ್ನು 10 ಸಾವಿರ ರೂಗಳವರವಿಗೂ ಹೆಚ್ಚಿಸಿ ಆಜ್ಞೆ ಹೊರಡಿಸಲಾಗಿದೆ. ಜುಲೈ 18 ರಂದು ರಾಜ್ಯಾದ್ಯಂತ ರಸ್ತೆ ತಡೆ ಚಳುವಳಿಗೆ ನೀಡಿದ್ದ ಕರೆಯನ್ನೂ ಇದರಿಂದ ಹಿಂತೆಗೆದುಕೊಳ್ಳಲಾಗಿದೆ.

ಈ ಬೇಡಿಕೆಗಾಗಿ ರಾಜ್ಯದಾದ್ಯಂತ ಎಸ್.ಎಫ್.ಐ. ತರಗತಿ ಬಹಿಷ್ಕಾರ, ಮುಷ್ಕರ, ಪ್ರದರ್ಶಗಳನ್ನು ಏರ್ಪಡಿಸಿ ಜೂನ್ 23 ರಂದು ರಾಜ್ಯಮಟ್ಟದ 'ರಾಜಭವನ ಚಲೋ' ಕಾರ್ಯಕ್ರಮದಲ್ಲಿ 2 ಸಾವಿರ ವಿದ್ಯಾರ್ಥಿಗಳು ಪಾಲ್ಗೊಂಡು ಬಂಧನಕ್ಕೊಳಗಾಗಿದ್ದರು. 26 ರಾಜ್ಯಪಾಲರ ಕಾರ್ಯದರ್ಶಿ ಹಾಗೂ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ನಡೆದ ಚರ್ಚೆಯ ನಂತರ ಈ ಸರ್ಕಾರಿ ಆಜ್ಞೆ ಹೊರಬಿದ್ದಿದೆ.

ಗುಲ್ಬರ್ಗಾ

ಜೂನ್ 15 ರಂದು ಜಿಲ್ಲೆಯ ಸುರಪುರದ ವಿದ್ಯಾರ್ಥಿಗಳು ಹಸಿರು ಕಾರ್ಡ್ ಕಡ್ಡಾಯವೆಂಬ ರಾಜ್ಯಪಾಲರ ಆಜ್ಞೆ ವಿರೋಧಿಸಿ ಧರಣಿ ನಡೆಸಿದರು. ಮನವಿ ಸ್ವೀಕರಿಸಿದ ಪ್ರಾಚಾರ್ಯರು ಸಂಬಂಧ ಪಟ್ಟವರೊಂದಿಗೆ ಮಾತುಕತೆ ನಡೆಸುವ ಭರವಸೆ ನೀಡಿದ ಕಾರಣ ಧರಣಿ ಹಿಂತೆಗೆದುಕೊಳ್ಳಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಜಿಲ್ಲಾ ಎಸ್.ಎಫ್.ಐ. ಅಧ್ಯಕ್ಷ ಕಾ|| ಚನ್ನಬಸು ಮಾತನಾಡಿ ಆಜ್ಞೆಯನ್ನು ಖಂಡಿಸಿದ್ದರು. ಧರಣಿ ನೇತೃತ್ವವನ್ನು ಕಾರ್ಯದರ್ಶಿ ರಾಯಣ್ಣ, ಅಧ್ಯಕ್ಷ ದೊಡ್ಡಪ್ಪ ಮಾಲಿಪಾಟೀಲ ಹಾಗೂ ನಿಂಗಣ್ಣ ವಹಿಸಿದ್ದರು.

ಹೈಸ್ಕೂಲ್ ವಿದ್ಯಾರ್ಥಿಗಳ ಮತ ಪ್ರದರ್ಶನ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು 25-7-89ರಂದು ಇಡೀ ರಾಜ್ಯಾದ್ಯಂತ ಹೈಸ್ಕೂಲ್ ವಿದ್ಯಾರ್ಥಿಗಳ 11 ಬೇಡಿಕೆಗೆ ಒತ್ತಾಯಿಸಿ 'ಜಿಲ್ಲಾ ಪರಿಷತ್ ಚಲೋ' ನಡೆಸಲು ಕರೆ ನೀಡಿತ್ತು. ಈ ಕರೆಗೆ ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 500 ಮಂದಿ ಹೈಸ್ಕೂಲ್ ವಿದ್ಯಾರ್ಥಿಗಳು ನಗರದ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆಯಲ್ಲಿ ಹೊರಟು ನಗರ ಜಿಲ್ಲಾಧಿಕಾರಿ ಕಛೇರಿ ಎದುರು ಮತ ಪ್ರದರ್ಶನ ನಡೆಸಲಾರಂಭಿಸಿತು.

ಎಸ್.ಎಫ್.ಐ. ಜಿಲ್ಲಾ ಪದಾಧಿಕಾರಿಗಳು ಜಿಲ್ಲಾಧಿಕಾರಿಯವರ ಜೊತೆ 11ಬೇಡಿಕೆಗಳ ಕುರಿತು ಚರ್ಚೆ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿಯವರು ಹೈಸ್ಕೂಲ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ ತುರ್ತು ಸಮಸ್ಯೆಗಳಾದ ಪಠ್ಯ ಪುಸ್ತಕ ಒದಗಿಸುವ ಬಗ್ಗೆ, ಅಧ್ಯಾಪಕರ ನೇಮಕ ಈ ಕುರಿತು ಬೇಗನೆ ಕ್ರಮ ಕೈಗೊಳ್ಳುವುದಾಗಿ ಮತ್ತು ಉಳಿದ ಬೇಡಿಕೆಗಳನ್ನು ಒತ್ತಾಯಿಸಲು ಸರ್ಕಾರದ ಗಮನಕ್ಕೆ ತರುವುದಾಗಿ ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು.

ವಿದ್ಯಾರ್ಥಿಗಳನ್ನುದ್ದೇಶಿಸಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಎಂ. ಅನಂತ್‌ರವರು ಮಾತನಾಡುತ್ತಾ ವಿದ್ಯಾರ್ಥಿಗಳು ಪ್ರಸ್ತುತವಾಗಿ ಎದುರಿಸುತ್ತಿರುವ ಸಮಸ್ಯೆಗಳ ಈಡೇರಿಕೆಗೆ ಚಳುವಳಿಯನ್ನು ಸತತವಾಗಿ ನಡೆಸಲು ಕರೆ ನೀಡಿದರು.

ಕೆ.ಪ್ರಕಾಶ್‌ರವರು ಜಿಲ್ಲಾಧಿಕಾರಿಯವರಿಗೆ ನೀಡಿದ ಮನವಿ ಪತ್ರವನ್ನು ವಿದ್ಯಾರ್ಥಿಗಳೆದುರು ಓದಿದರು.

ರಾಜ್ಯ ಸಮಿತಿ ಸದಸ್ಯ ಆರ್.ಮೋಹನ್‌ರವರು ಮಾತನಾಡುತ್ತಾ ವಿದ್ಯಾರ್ಥಿಗಳು ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರ ಚಳುವಳಿಯನ್ನು ನಡೆಸುವುದು ಅಗತ್ಯವೆಂದು ಮತ್ತು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಸಂಘಟಿತರಾಗಿ ಬೇಡಿಕೆಗಳು ಈಡೇರುವವರೆಗೆ ಚಳುವಳಿ ನಡೆಸಲು ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ಕಾ|| ಎನ್.ಎಲ್. ಸಂತಾ.ಪ ಸಭೆಗಳು

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಚಿತ್ರದುರ್ಗ ಪ್ರಾದೇಶಿಕ ಸಮಿತಿ ಕಾರ್ಯಾಲಯದಲ್ಲಿ ಮೇ 27 ರಂದು ಕಾ|| ಎನ್.ಎಲ್.ಉಪಾಧ್ಯಾಯರ ನಿಧನ [illegible] ಬಹಿರಂಗಸಭೆ [illegible] ಚಳುವಳಿ [illegible] ಕಿರ್ಲೋಸ್ಕರ್ [illegible] ಸಂಘ [illegible] ಚಳುವಳಿ [illegible] ಬೆಳೆದ [illegible] ಎನ್.ಎಲ್.ಉಪಾಧ್ಯಾಯರ ಕುರಿತು [illegible] ಪಂಚಾ ಕ್ಷರಿ, ಮೋಟೆ ಬೆನ್ನೂರು ರುದ್ರಪ್ಪ, ಸದಾಶಿವಪ್ಪ ಮತ್ತು ರಾಮಚಂದ್ರ ಎಸ್.ಗಣೇಶಪ್ಪರವರು ಮಾತನಾಡುತ್ತಾ ಸ್ಮರಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ||ವಿದ್ಯಾನಂದ ಸ್ವಾಮಿ ಕಾ||ಎನ್.ಎಲ್.ರ ನಿಧನದಿಂದ ಕಮ್ಯುನಿಸ್ಟ್ ಚಳುವಳಿಗೆ ಹಾಗೂ ಸಾಮೂಹಿಕ ಸಂಘಟನೆಗಳ ನಷ್ಟದ ಬಗ್ಗೆ ತಿಳಿಸಿ, ಪಕ್ಷದ ಬೆಳವಣಿಗೆಯಲ್ಲಿ ಅವರ ಮಹತ್ವಪೂರ್ಣ ಪಾತ್ರದ ಬಗ್ಗೆ ವಿವರಿಸಿದರು.

ಹುಬ್ಬಳ್ಳಿ

ಗೋಕುಲ್ ರಸ್ತೆಯ ಎಂ.ಕೆ.ಮುಖ್ಯದ್ವಾರದ ಮೈದಾನದಲ್ಲಿ ಕಾ||ಎನ್.ಎಲ್‌ರ ಗೌರವಾರ್ಥ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಿ, ಎರಡು ನಿಮಿಷ ಮೌನ ಆಚರಿಸಲಾಯಿತೆಂದು ಹುಬ್ಬಳ್ಳಿಯ ಕಿರ್ಲೋಸ್ಕರ್ ನೌಕರರ ಸಂಘದ ಕಾರ್ಯದರ್ಶಿ ಕಾ||ಕೆ.ಪಿ.ಜೋಶಿ ತಿಳಿಸಿದ್ದಾರೆ.

KRNW / BGS-312 MAG(2) PRB DECR 319-78/79

ಕನಿಷ್ಟ ಕೂಲಿ ಆಂದೋಲನ

ಪುಟ 1 ರಿಂದ

ಲಾಗುತ್ತಿದೆ. ಇದನ್ನು ಕೂಡಾ ಸಮಯ-ಸಮಯಕ್ಕೆ ಪರಿಷ್ಕರಿಸುತ್ತಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಜೀವನ ವೆಚ್ಚ ಸೂಚ್ಯಂಕ ಕ್ಕೂ ಕನಿಷ್ಟ ಕೂಲಿಗೂ ಏನೂ ಸಂಬಂಧವೇ ಇರುವುದಿಲ್ಲ. ಇದರಿಂದಾಗಿ ಬೆಲೆಯೇರಿ ದಂತೆ ಕಾರ್ಮಿಕರ ನಿಜವಾದ ಕೂಲಿ ಇನ್ನಷ್ಟು ಕೆಳಗಿಳಿ ಯುತ್ತಾ ಹೋಗುತ್ತಿದೆ.

ದೇಶವ್ಯಾಪೀ ಕನಿಷ್ಟ ಕೂಲಿ ಆಂದೋಳನ

ರಾಷ್ಟ್ರೀಯ ಕನಿಷ್ಟ ಕೂಲಿ ಎಂಬು ದಂತೂ ದೂರವಿರಲಿ, ರಾಜ್ಯದಿಂದ ರಾಜ್ಯಕ್ಕೆ, ಕೈಗಾರಿಕೆಯಿಂದ ಕೈಗಾರಿಕೆಗೆ, ಅಷ್ಟೇ ಏಕೆ ಒಂದೇ ರಾಜ್ಯದೊಳಗೆ, ಒಂದೇ ಉದ್ದಿಮೆ ಯೊಳಗೂ ಅದು ಭಿನ್ನಭಿನ್ನ. ಕಾರ್ಮಿಕ ಸಂಘಗಳುದುರ್ಬಲವಾಗಿರುವಲ್ಲಿ, ಇವನ್ನು ಕೂಡಾ ಜ್ಯಾರಿಗೊಳಿಸುವುದಿಲ್ಲ. ಈ ಕಾರ್ಮಿಕರು ಚಳುವಳಿ ಹೂಡುತ್ತಾರೆಂದರೆ, ಸಂಘ ಕಟ್ಟಿಗೊಳ್ಳುತ್ತಾರೆಂದರೆ ಸಾಕು, ತೀವ್ರ ದಮನ, ಮಾಲಿಕರ ಬಾಡಿಗೆ ಗೂಂಡಾಗಳ ಆಕ್ರಮಣ ಎದುರಿಸಬೇಕು. ಇದರಲ್ಲಿ ಪೋಲಿಸರೂ ಮಾಲಿಕರೊಂದಿಗೆ ಶಾಮೀಲು ಎಂದು ಸಭೆ ಗಮನಿಸಿತು.

ಈ ಕಾರ್ಮಿಕರು ದೇಶದ ಒಟ್ಟು ಕಾರ್ಮಿಕರ 90% ರಷ್ಟಿದ್ದಾರೆ. ಆದರೆ ಇಷ್ಟೊಂದು ದೊಡ್ಡ ವಿಭಾಗದಲ್ಲಿ ಕಾರ್ಮಿಕ ಶಾಸನಗಳ ಜ್ಯಾರಿಯೇ ಇಲ್ಲ. ಪಿ.ಎಫ್., ಇ.ಎಸ್.ಐ., ಬೋನಸ್, ಗ್ರಾಚ್ಯುಟಿಗಳಿಂದ ಈ ಕಾರ್ಮಿಕರನ್ನು ಮಾಲಿಕರು ನಿರ್ಭಿಡೆಯಿಂದ ವಂಚಿಸಿ ದ್ದಾರೆ. ಶಾಸನಗಳಲ್ಲಿ ಇಂತಹ ಉಲ್ಲಂಘ ನೆಗೆ ವಿಧಿಸಿರುವ ದಂಡ ಕೇವಲ ನಾಮ ಮಾತ್ರ. ಈ ದಂಡ ತೆತ್ತು ಕಾನೂನು ಉಲ್ಲಂಘಿಸುತ್ತಲೇ ಇರುವುದೇ ಮಾಲಿಕರಿಗೆ ಹೆಚ್ಚು ಲಾಭಕರವಾದ್ದರಿಂದ ಮಾಲಿಕರು ಅದನ್ನೇ ಮಾಡುತ್ತಾರೆ.

ಆಗಸ್ಟ್ 16, 1989 ರಂದು ನವದೆಹಲಿಯ... ಅಸಂಘಟಿತ ಕಾರ್ಮಿಕರ ಅಖಿಲಭಾರತ ಸಮಾವೇ... ನಡೆಸಲಾಗುವುದು. ಅದೇ ದಿನ ಅಸಂಘಟಿತ ಕಾರ್ಮಿ... ರ್‍ಯಾಲಿ ನಡೆಯುವುದು.

ಕಾಂಟ್ರಾಕ್ಟ್ ಕಾರ್ಮಿಕರು ಈ ಅಸಂಘಟಿತ ವಲಯದ ಒಂದು ದೊಡ್ಡ ವಿಭಾಗ. ಶಾಶ್ವತ ಸ್ವರೂಪದ ಕೆಲಸಗಳಲ್ಲೂ ಈಗ ಈ ದುಷ್ಟ ಪದ್ಧತಿ ವ್ಯಾಪಿಸಿ ಕಾನೂನಿನ ಉಲ್ಲಂಘನೆಯಾಗುತ್ತಿದೆ. ತೀವ್ರ ಶೋಷಣೆ ಬಿಡುವಿಲ್ಲದೆಸಾಗುವಂತಾಗಿದೆ.

ಸಮಾನ ವೇತನ ಶಾಸನವನ್ನು ಬಹಿ ರಂಗವಾಗಿಯೇ ಉಲ್ಲಂಘಿಸಿ ಮಹಿಳೆ ಯರ ವಿರುದ್ಧ ಪಕ್ಷಪಾತ ಈ ವಲಯ ದಲ್ಲಿ ತೀವ್ರವಾಗಿ ಮುಂದುವರಿಯುತ್ತಿದೆ ಎಂದು ಗಮನಿಸಿದ ಸಭೆ ಪೀಸ್‌ರೇಟ್ ಪದ್ಧತಿ ಮಹಿಳೆಯರಿಗೆ ಸಮಾನ ವೇತನ ನಿರಾಕರಿಸಲೆಂದೇ ರೂಪಿಸಿದ ಸಾಧನ ಎಂದಿ ದೆ. ಹೆರಿಗೆ ಸೌಲಭ್ಯ, ಶಿಶುಕೇಂದ್ರ ಇತ್ಯಾದಿ ಅವರ ವಿಶಿಷ್ಟ ಬೇಡಿಕೆಗಳ ಬಗ್ಗೆ ಸತತ ನಿರ್ಲಕ್ಷ್ಯ ಹಾಗೂ ಕೆಲಸದಿಂದ ತೆಗೆದು ಹಾಕುವಾಗ ಮೊದಲ ಗುರಿ ಮಹಿಳೆಯ ರೇ ಎಂಬ ಅಂಶವನ್ನು ಸಭೆಗಮನಿಸಿತು.

ಕನಿಷ್ಟ ಕೂಲಿಯ ಬೇಡಿಕೆಯ ಮೇಲೆ ಈಗಾಗಲೇ ಹೋರಾಟ ಆರಂಭಿಸಿರುವ ಅಸಂಘಟಿತ ಕಾರ್ಮಿಕರನ್ನು ಸಭೆ ಅಭಿ ನಂದಿಸಿತು. ದಿಲ್ಲಿಯ ಸಿ.ಐ.ಟಿ.ಯು. ರಾಜ್ಯಸಮಿತಿ ಸಂಘಟಿಸಿ ನವಂಬರ್ 22 ರಿಂದ 28ರ ವರೆಗೆ ನಡೆದ ಒಂದು ವಾರದ ಧೀರ ಮುಷ್ಕರ ನಡೆಸಿದ ದೆಹಲಿ ಕಾರ್ಮಿಕರನ್ನು ಸಭೆ ಅಭಿನಂದಿಸಿತು. ಧನಬಾದ್ ಜನರಲ್ ಕೌನ್ಸಿಲ್ ಸಭೆಯ ಕರೆಗೆ ಓಗೊಟ್ಟು ಮುಷ್ಕರ ಮತ್ತಿತರ ಕಾರ್ಯಾಚರಣೆ ನಡೆಸಿದ ಸಿ.ಐ.ಟಿ. ಯು.ನ ಕರ್ನಾಟಕ, ತಮಿಳುನಾಡು ಪಂಜಾಬ್, ಹರ್ಯಾಣಾ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಒರಿಸ್ಸಾ, ಅಸ್ಸಾಂ... ಸಮಿತಿಗಳನ್ನು ಮತ್ತಿತರ ಸಂಘ... ಸಭೆ ಅಭಿನಂದಿಸಿತು. ಈ ಕಾರ್ಯಾ... ಗಳಿಂದಾಗಿ ದೇಶದ ಗಮನ ಅಸಂ... ಕಾರ್ಮಿಕರ ಪರಿಸ್ಥಿತಿಗಳತ್ತ ಸೆಳೆಯ... ದೆಹಲಿ ಆಡಳಿತ, ಮತ್ತು ಕೆಲವು ... ಸರಕಾರಗಳು ಕೆಲವು ರಿಯಾಯ್ತಿಗ... ನೀಡಬೇಕಾಗಿ ಬಂತು. ಆದರೆ ... ಕಾರ್ಮಿಕರ ಬೇಡಿಕೆಗಳನ್ನು ಈಡೇರಿ... ಮಟ್ಟದಲ್ಲಿಲ್ಲ ಎಂದು ಈ ಸಭೆಯ... ಅಭಿಪ್ರಾಯ ಪಡಲಾಯಿತು. ಆದ್ದ... ಹನ್ನೆರಡು ಬೇಡಿಕೆಗಳ ಮೇಲೆ (ಬ... ನೋಡಿ) ದೇಶವ್ಯಾಪಿ ಆಂದೋಲನ ... ಮುಂದೊಯ್ಯಬೇಕೆಂದು ಈ ... ಸಿ.ಐ.ಟಿ.ಯು ಸಂಘಗಳಿಗೆ, ಅಸಂಘ... ಕಾರ್ಮಿಕರಿಗೆ ಮತ್ತು ಇತರ ... ಕಾರ್ಮಿಕ ಸಂಘಗಳಿಗೆ ಮನವಿ ... ಕೊಂಡಿತು. ದೇಶಾದ್ಯಂತ ಹರಡಿರುವ ... ವಿಶಾಲ ಕಾರ್ಮಿಕ ವಿಭಾಗಕ್ಕೆ ಮ... ದೆಯಿಂದ ಬಾಳು ನಡೆಸುವ ಜೀ... ಮಟ್ಟ ದೊರೆಯುವಂತೆ ಪ್ರಾಮಾಣಿಕ ... ಪ್ರಯತ್ನ ನಡೆಸ ಬೇಕೆಂದು ಕೇ... ಕಾರ್ಮಿಕ ಸಂಘಗಳಿಗೆ ದೆಹಲಿ ... ಮನವಿ ಮಾಡಿಕೊಂಡಿದೆ.

ಈ ಸಂದರ್ಭದಲ್ಲಿ ಕೃಷಿಕೂಲಿಕಾ... ಕನಿಷ್ಟಕೂಲಿಗಾಗಿ ಹಾಗೂ ಒಂದು ಕೇ... ಯ ಕಾನೂನಿಗಾಗಿ ನಡೆಸುತ್ತಿರುವ ಹೋ... ಟಗಳೊಂದಿಗೆ ಅಸಂಘಟಿತ ಕಾಮಿ... ಹೋರಾಟವನ್ನು ಸಂಯೋಜಿಸ ಬೇಕೆಂ... ಅಂತಹ ಹೋರಾಟಗಳನ್ನು ಬೆಂಬ... ಬೇಕೆಂದೂ ಸಭೆ ಕಾರ್ಮಿಕ ಸಂಘಗ... ಕರೆ ನೀಡಿದೆ.

ದೆಹಲಿ ಸಭೆ ರೂಪಿಸಿದ ಕನಿಷ್ಟ ಕೂಲಿ ಕಾರ್ಮಿಕರ ಬೇಡಿಕೆಗಳು

೧. ಸಾವಿರದ ನಲ್ವತ್ತು ರೂಪಾಯಿ ರಾಷ್ಟ್ರೀಯ ಕನಿಷ್ಟಕೂಲಿ.

1960 =100 ಆಧಾರದ ಬಳಕೆದಾರ ಬೆಲೆ ಸೂಚ್ಯಂಕ 800 ಕ್ಕೆ ಹೊಂದಿಕೊಂಡಂತೆ 1050/- ರೂ. ಕನಿಷ್ಟ ಕೂಲಿ ನಿಗದಿ ಪಡಿಸಬೇಕು.

೨. ಪಾಯಿಂಟಿಗೆ ರೂ.1.65 ತುಟ್ಟಿ ಭತ್ಯೆ

ಪ್ರತಿಪಾಯಿಂಟ್ ಬೆಲೆಯೇರಿಕೆಗೆ ರೂ.1.65 ತುಟ್ಟಿ ಭತ್ಯೆ ನೀಡಬೇಕು. 1970 ರ ಸೂಚ್ಯಂಕವಿರುವಲ್ಲಿ ಪ್ರತಿ ಪಾಯಿಂಟಿಗೆ ರೂ 2-00 ತುಟ್ಟಿ ಭತ್ಯೆ.

೩. ಬೆಲೆ ಸೂಚ್ಯಂಕ ಏರಿಕೆಯೊಡನೆ ಕನಿಷ್ಟ ಕೂಲಿಯ ಪರಿಷ್ಕರಣ

ಆರು ತಿಂಗಳೊಳಗೆ ಅಥವಾ ಅದರೊಳಗೆ ಬೆಲೆ ಸೂಚ್ಯಂಕ 50 ಪಾಯಿಂಟುಗಳಷ್ಟು ಏರಿದರೆ ಆಗ ಕನಿಷ್ಟ ಕೂಲಿಯನ್ನು ಪರಿಷ್ಕರಿಸಬೇಕು.

೪. ಕನಿಷ್ಟ ಕೂಲಿ ನಿಗದಿಪಡಿಸಲು ಒಂದು ನಿರ್ದಿಷ್ಟ ಸೂತ್ರ

ಕೇಂದ್ರ ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸಿ ಇದಕ್ಕೆ ಒಂದು ನಿರ್ದಿಷ್ಟ ಸೂತ್ರವನ್ನು ಗೊತ್ತುಪಡಿಸಬೇಕು.

೫. ಕನಿಷ್ಟ ಕೂಲಿ ಶಾಸನ ಉಲ್ಲಂಘಿಸುವ ಮಾಲಿಕರಿಗೆ ಕಠಿಣ ಶಿಕ್ಷೆ

ಜೈಲು ಶಿಕ್ಷೆಯೂ ಸೇರಿದಂತೆ ಕಠಿಣ ಸಜೆ ವಿಧಿಸಬೇಕು. ಇಂತಹ ಆಡಳಿತವರ್ಗಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕಾರ್ಮಿಕ ಸಂಘಗಳಿಗೆ ಹಕ್ಕಿರಬೇಕು.

೬. ಕನಿಷ್ಟ ಕೂಲಿ ಸಲಹಾ ಮಂಡಳಿಗಳ ನಿಯಮಿತ ಸಭೆ

ಕೇಂದ್ರದಲ್ಲೂ, ರಾಜ್ಯಗಳಲ್ಲೂ, ಯಾವ ರಾಜ್ಯಗಳಲ್ಲಿ ಸಿ.ಐ.ಟಿ.ಯು. ಇಂತಹ ಮಂಡಳಿಗಳಿಲ್ಲವೋ ಅಲ್ಲಿ ಅದನ್ನು ಸೇರಿಸಿಕೊಳ್ಳಬೇಕು.

೭. ಅಸಂಘಟಿತರಿಗೆ ಎಲ್ಲಾ ಕಾರ್ಮಿಕ ಕಾನೂನುಗಳ ರಕ್ಷಣೆ

ಪಿ.ಎಫ್, ಇ.ಎಸ್.ಐ, ಬೋನಸ್, ಗ್ರಾಚ್ಯುಟಿ ಸೇರಿದಂತೆ ಎಲ್ಲಾ ಕಾರ್ಮಿಕ ಶಾಸನಗಳನ್ನು ಅಸಂಘಟಿತರಿಗೂ ವಿಸ್ತರಿಸಿ ಅದನ್ನು ಅನುಷ್ಠಾನಕ್ಕೆ ತರಬೇಕು.

೮. ಮಹಿಳಾ ಕಾರ್ಮಿಕರಿಗೆ ಸಮಾನ ವೇತನ, ವಿಶಿಷ್ಟ ಸೌಲಭ್ಯ

ಇದು ಸರಿಯಾಗಿ ಸಿಗುವಂತೆ ಮಾಡಬೇಕು. ಹೆರಿಗೆ ಸೌಲಭ್ಯ, ಶಿಶುಕೇಂದ್ರ ಮುಂತಾದ ಅವರ ವಿಶಿಷ್ಟ ಬೇಡಿಕೆಗಳನ್ನು ಈಡೇರಿಸಬೇಕು.

೯. ಕಾಂಟ್ರಾಕ್ಟ್ ಪದ್ಧತಿ ರದ್ದಾಗಬೇಕು

ಈಗಿರುವ ಎಲ್ಲಾ ಕಾಂಟ್ರಾಕ್ಟ್ ಹಾಗೂ ಕ್ಯಾಶುವಲ್ ಕಾರ್ಮಿಕರನ್ನು ನಿಯಮಿತಗೊಳಿಸಿ ಇತರ ನಿಯಮಿತ ಕಾರ್ಮಿಕರಂತೆ ವೇತನ ಕೊಡಬೇಕು.

೧೦. ಅಸಂಘಟಿತ ಕಾರ್ಮಿಕರಿಗೆ ವಾಸಯೋಗ್ಯ ವಸತಿ

ವಸತಿ ನೀರು ಪೂರೈಕೆ ಮತ್ತಿತರ ಸೌಲಭ್ಯಗಳನ್ನು ಸುಧಾರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.

೧೧. ತಾತ್ಕಾಲಿಕ ಕಾರ್ಮಿಕರನ್ನು ಖಾಯಂಗೊಳಿಸಬೇಕು

ಸರಕಾರೀ ಹಾಗೂ ಖಾಸಗೀ ಉದ್ದಿಮೆಗಳಲ್ಲಿ ವರ್ಕ್‌ಚಾರ್ಜ್, ಮಸ್ಟರ್‌ರೋಲ್, ತಾತ್ಕಾಲಿಕ ಮತ್ತು ಬದಲಿ ಕಾರ್ಮಿಕರ ಉದ್ಯೋಗವನ್ನು ಖಾಯಂಗೊಳಿಸಬೇಕು.

೧೨. ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ ಪೂರ್ಣ ಕಾರ್ಮಿಕ ಸಂಘಟನೆಯ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳು ದೊರೆಯಬೇಕು.

ಮುಝಪ್ಫರ್ ಅಹ್ಮದ್

5 ನೇ ಪುಟದಿಂದ

ದರು. ಭಾರತ-ಚೀನಾ ತಿಕ್ಕಾಟ ಸಂದರ್ಭ ದಲ್ಲಿ, ಕೆಲವು ಸಮಯಸಾಧಕ ಮುಖಂಡರು ಬೂರ್ಜ್ವಾ ಸಂಕುಚಿತತೆಗೆ ಬಲಿಯಾದಾಗ ಮುಝಪ್ಫರ್ ಇತರ ಹಲವರೊಂದಿಗೆ ಕಾರ್ಮಿಕ ವರ್ಗದ ಅಂತ ರಾಷ್ಟ್ರೀಯತೆಯ ಬಾವುಟ ಎತ್ತಿಹಿಡಿ ದರು. ರಾಷ್ಟ್ರೀಯ ಸಂಕುಚಿತತೆಯ ಧೋರಣೆಯ ವಿರುದ್ಧ ಎಚ್ಚರ ನೀಡಿದರು. 1962-64ರಲ್ಲಿ ಕಾಂಗ್ರೆಸ್ ಸರಕಾರ ಅವರನ್ನು ಜೈಲಿನಲ್ಲಿಟ್ಟಿತು.

ಅಂತರಾಷ್ಟ್ರೀಯ ಆಂದೋಲನದಲ್ಲಿ ಕ್ರುಶ್ಚೆವ್‌ರ ಪರಿಷ್ಕರಣವಾದದ ಬೆಳವಣಿಗೆಗೆ ಮತ್ತು ಭಾರತದ ಪಕ್ಷದ ಮೇಲೆ ಅದರ ಪರಿಣಾಮಗಳ ಸಮಯದಲ್ಲಿ ಮುಝಪ್ಫರ್ ಅದರ ವಿರುದ್ಧ ದೃಢ ನಿಲುವು ತಳೆದು ಪಕ್ಷ ಸಮಯಸಾಧಕ ಹಳ್ಳಕ್ಕೆ ಬೀಳದಂತೆ ಉಳಿಸಲು ಪ್ರಯತ್ನಿ ಸಿದರು. ಪಕ್ಷದ ವಿಭಜನೆ ಅನಿವಾರ್ಯ ವಾದಾಗ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ರಕ್ಷಿಸುತ್ತಿದ್ದವರ ಜತೆಗೆ ನಿಂತು ಸಿ.ಪಿ.ಐ. (ಎಂ) ಸ್ಥಾಪನೆಗೆ ನೆರವಾದರು. ನಂತರ ಚೀನಾ ಕಮ್ಯುನಿಸ್ಟ್ ಪಕ್ಷದ ಬೆಂಬಲ ಪಡೆದಿದ್ದ ಎಡ ಪಂಥವಾದೀ ನಕ್ಸಲ್ ವಾದಿ ಗುಂಪುಗಳ ವಿರುದ್ಧವೂ ಅವರು ದೃಢ ನಿಲುವು ತಳೆದರು.

ಮುಝಪ್ಫರ್‌ರವರದ್ದು ಕಾರ್ಮಿಕ ಅಂತರ್ರಾಷ್ಟ್ರೀಯತೆಯನ್ನು, ಮಾರ್ಕ್ಸ್‌ವಾದ-ಲೆನಿನ್ ವಾದಕ್ಕಾಗಿ ಅವಿರತ ಹೋರಾಟ ವನ್ನು, ಕಾರ್ಮಿಕ ವರ್ಗ ಮತ್ತು ಭಾರತದ ಜನತೆಯ ಬಗ್ಗೆ ಆಳವಾದ ಪ್ರಾಮಾಣಿಕತೆ ಮತ್ತು ಕಳಕಳಿಯನ್ನು, ಶೋಷಿತ ಜನಸಮೂಹಗಳಿಗಾಗಿ ಅಸೀಮಿತ ತ್ಯಾಗವನ್ನು ಪ್ರತಿಬಿಂಬಿಸುವ ಜೀವನ. ಭಾರತೀಯ ಜನತೆಯನ್ನು ಬೂರ್ಜ್ವಾ-ಭೂಮಾಲಿಕ ಆಳ್ವಿಕೆಯಿಂದ ರಕ್ಷಿಸುವ ಹೋರಾಟದಲ್ಲಿ ಇಂದು ನಮ್ಮ ಪಕ್ಷ ತೊಡಗಿರುವಾಗ ಮುಝಪ್ಫರ್‌ರವರ ಜೀವನ ಸಂದೇಶ ನಮ್ಮ ಸದಸ್ಯರಿಗೆ ಸ್ಫೂರ್ತಿಯ ಸೆಲೆಯಾಗಬೇಕು. ಪ್ರತಿ ಯೊಂದು ದೇಶದ ಮೂರ್ತ ವಾಸ್ತವತೆ ಗಳಿಗೆ ಮಾರ್ಕ್ಸ್‌ವಾದ-ಲೆನಿನ್ ವಾದದ ಅನ್ವಯವೆಂಬ ವೇಷತೊಟ್ಟು ನಮ್ಮ ದೇಶ ದಲ್ಲೂ ಹೊರಗೂ ಖೋಟಾ ವಿಚಾರಗಳು ಚಲಾವಣೆ ಹೊಂದುತ್ತಿರುವ ಇಂದಿನ ಸಂದರ್ಭದಲ್ಲಿ ಇದು ಇನ್ನೂ ಪ್ರಸ್ತುತ.

ಗುಲ್ಬರ್ಗಾ ವಿ.ವಿ. ಅದಕ್ಷ ಆಡಳಿತ ಸಿ.ಓ.ಡಿ. ತನಿಖೆಗೆ ಒತ್ತಾಯ.

ಗುಲ್ಬರ್ಗಾ ವಿದ್ಯಾಲಯ ಆಡಳಿತ ಕಾರ್ಯವೈಖರಿ ಅಸಮರ್ಥತೆ ಅದಕ್ಷತೆ ವಿದ್ಯಾರ್ಥಿ ಸಮುದಾಯವನ್ನು ಹಲವು ಸಮಸ್ಯೆಗೆ ಗುರಿ ಮಾಡಿದೆ ಎಂದು ಗುಲ್ಬರ್ಗಾ ವಿ.ವಿ. ಸಮನ್ವಯ ಸಮಿತಿ ಖಂಡಿಸಿದೆ. ಎಸ್.ಎಫ್.ಐ. ನೇತೃತ್ವದ ಈ ಸಮನ್ವಯ ಸಮಿತಿ ಈ ಕುರಿತು ಒಂದು ಹೇಳಿಕೆ ನೀಡಿ ಪ್ರಶ್ನೆ ಪತ್ರಿಕೆಗಳ ಬಹಿರಂಗ ಅವಾಂತರ, ಪರೀಕ್ಷೆ ಸಮಯ ವಿನಾಕಾರಣ ಮುಂದೂಡುವುದು, ಫಲಿತಾಂಶ ಪ್ರಕಟಣೆಯಲ್ಲಿ ವಿಳಂಬ, ಅಂಕಪಟ್ಟಿಯಲ್ಲಿ ವಿಪರೀತ ತಪ್ಪುಗಳು ಪರೀಕ್ಷೆ ಮಂಡಳಿ ನಿಯಂತ್ರಣಾಧಿಕಾರಿ ಅದಕ್ಷತೆ ಎದ್ದು ಕಾಣುತ್ತಿದೆ ಎಂದು ಆರೋಪಿಸಿದೆ.

ಈ ಅನಾಹುತದಿಂದ ವಿದ್ಯಾರ್ಥಿ ಸಮುದಾಯವನ್ನು ಕಾಪಾಡಲು ಸರ್ಕಾರ ಅಸಮರ್ಥ ಹಾಗೂ ಅದಕ್ಷ ಆಡಳಿತ ಅಧಿಕಾರಿಗಳ ಮೇಲೆ ಸಿ.ಓ.ಡಿ. ತನಿಖೆ ನಡೆಸಬೇಕೆಂದು ಅದು ಒತ್ತಾಯಿಸಿದೆ.

ಅವಶ್ಯ ಸೌಕರ್ಯಗಳನ್ನು ಹೊಂದಿರದ ಹೊಸ ಕಾಲೇಜುಗಳಿಗೆ ವಿ.ವಿ. ಆಡಳಿತ ಮಾನ್ಯತೆ ನೀಡುವುದನ್ನು ಖಂಡಿಸಿರುವ ಸಮನ್ವಯ ಸಮಿತಿ ಶಿಕ್ಷಣದ ಗುಣ ಮಟ್ಟ ಕಾಪಾಡಲು ಒತ್ತಾಯಿಸಿದೆ. ಸೆನೆಟ್, ಸಿಂಡಿಕೇಟುಗಳಿಗೆ ವಿದ್ಯಾರ್ಥಿ ಪ್ರಾತಿನಿಧ್ಯಕ್ಕಾಗಿ ಚುನಾವಣೆ ನಡೆಸ ಬೇಕೆಂದು ಹಾಗೂ ಎಲ್ಲಾ ಕಾಲೇಜು ಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಬೇಕೆಂದು ಕೇಳಿದೆ.

ಒತ್ತಾಯಿಸಿ ಗುಲ್ಬರ್ಗಾ ವಿ.ವಿ. ವ್ಯಾಪ್ತಿ ಯಲ್ಲಿ ಬರುವ ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಮತ್ತು ಬೀದರ್ ಜಿಲ್ಲೆಯ ಕನಿಷ್ಟ 5 ಸಾವಿರ ಮಂದಿ ವಿದ್ಯಾರ್ಥಿಗಳು ಆಗಸ್ಟ್ 7 ರಿಂದ 14 ರವರೆವಿಗೂ ಪೋಸ್ಟ್‌ಕಾರ್ಡ ಚಳುವಳಿ ಹಮ್ಮಿಕೊಳ್ಳಲು ಕರೆನೀಡಲಾಗಿದೆ.

ಆಗಸ್ಟ್ 29 ವಿ.ವಿ. ಮುತ್ತಿ...

ರಾಜ್ಯ ಸಮಿತಿ ಕರೆಯಂತೆ ವಿ.ವಿ.... ವಿದ್ಯಾರ್ಥಿ ಬೇಡಿಕೆ ಕುರಿತು ಉಪಕ... ಪತಿಗಳು ಆಹ್ವಾನಿಸದಿದ್ದರೆ 4 ಜಿಲ್ಲೆಗಳಿ... ಸಹಸ್ರಾರು ಸಂಖ್ಯೆಯಲ್ಲಿ ವಿ.ವಿ. ಕೇಂ... ಆಗಮಿಸಿ ಆಗಸ್ಟ್ 29 ರಂದು ಮು... ಚಳುವಳಿ ಕೈಗೊಳ್ಳುವುದಾಗಿ ಸಮನ್ವ... ಸಮಿತಿ ಅಧ್ಯಕ್ಷ ಹಾಗೂ ... ಎಸ್.ಎಫ್.ಐ. ಅಧ್ಯಕ್ಷ ಕಾ॥ ಜೆ.ಸಿ.ಬೈ... ರೆಡ್ಡಿ, ಸಂಚಾಲಕ ಎನ್.ರಾಮನಗ... ಸಹಸಂಚಾಲಕ ಎಲ್. ಮಂಜುನ... ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

ಸೋವಿಯತ್ ದೇಶಕ್ಕೆ ಕಾ॥ ಟಿ.ಎಸ್. ಮಣಿ...

ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ಸದಸ್ಯರು ಸಿ.ಐ.ಟಿ.ಯು. ಅಖಿಲಭಾರತ ಕೌನ್ಸಿಲ್ ಸದಸ್ಯರು, ವಿಧಾನಸಭಾ ಮಾಜಿ ಶಾಸಕರೂ ಆದ ಕಾ॥ ಟಿ.ಎಸ್. ಮಣಿಯವರು ಆರೋಗ್ಯ ತಪಾಸಣೆಗಾಗಿ ಸೋವಿಯತ್ ದೇಶಕ್ಕೆ 12 ರಂದು ದೆಹಲಿಯಿಂದ ತೆರಳಿದರು.

ಕೆ.ಜಿ.ಎಫ್.ನಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭ 8 ರಂದು ಕಿಂಗ್‌ಜಾರ್ಜ್ ಹಾಲ್‌ನಲ್ಲಿ ನಡೆದು ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ವಿವಿಧ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸಿ ಶುಭಕೋರಿದರು. ಜನತಾದಳ ಶ್ರೀಪಂಥಾಯಿಲ್, ಡಿ.ಎಂ.ಕೆ.ಯ ಶ್ರೀಇರಾ. ನಾರಾಯಣ್ ಶ್ರೀ ಸು. ಕಲೈಯರಸನ್, ಜನತಾ ಪಕ್ಷದ ಶ್ರೀದ... ಚಿನ್ನಸವರಿ, ಬಿ.ಜೆ.ಪಿ.ಯ ಪಾರ್ಥಸಾ... ಐ.ಎನ್.ಟಿ.ಯು.ಸಿ.ಯ ಶ್ರೀ ... ಗೋಪಾಲ್, ಬಿ.ಇ.ಎಂ.ಎಲ್. ಕಾರ್ಮಿ... ಪರವಾಗಿ ಕಾ॥ ಎನ್.ವಿ. ನಾರಾಯಣ... ಡಿ.ವೈ.ಎಫ್.ಐ.ನ ಕಾ॥ ದಶರಥ... ಮುಂತಾದವರು ಮಾತನಾಡಿ ... ಟಿ.ಎಸ್. ಮಣಿಯವರು ಸೋವಿಯ... ದೇಶಕ್ಕೆ ಹೋಗಿ ಗುಣಮುಖರಾಗಿ ಬ... ಹಾಗೂ ಅಲ್ಲಿನ ಸಮಾಜವಾದಿ ವ್ಯ... ಕುರಿತು ಅಭ್ಯಾಸ ಮಾಡಿ ಬರಲಿ ಎಂ... ಹಾರೈಸಿದರು. ಕಾ॥ ಟಿ.ಎಸ್. ವ... ಯವರು ಎಲ್ಲರಿಗೂ ಕೃತಜ್ಞತೆ ಸ... ದರು. ಕಾ॥ ಜಿ.ಅರ್ಜುನ್ ಕೊನೆಯ... ವಂದನೆ ಸಲ್ಲಿಸಿದರು.

Printed and published by P.RAMACHANDRA RAO on behalf of communist party of India (Marxist), Karnataka State committee L-56, K.V. Temple Street, Sulthanpet, Bangalore-560 053. Phone.No. 75331. Editor. P.RAMACHANDRA RAO. Managerial Office: C/O. Kriya Prakashana, Shobha Lodge Complex, 5th main Road, Gandhinagar, Bangalore...